

ಸಂಪುಟ 24 ಸಂಚಿಕೆ 44
ನವೆಂಬರ್ 03, 2002 ಬೆಲೆ ರೂ. 3.00

ಐಕ್ಯರಂಗ

ದುಡಿವ ಜನರ ಪ್ರಾಣಮಿತ್ರ



ಬಿಜೆಪಿ : ದುರಾಡಳಿತದ ಮೂರು ವರುಷಗಳು





ಕೃಷ್ಣರ ಸರ್ಕಾರ ಮತ್ತು ನ್ಯಾಯಾಂಗ ನಿಂದನೆ



ಮತಾಂತರ ಸುಗ್ರೀವಾಜ್ಞೆ ಎಷ್ಟು ಸಮಂಜಸ ?


ಬಾಬಾಬುಡನ್‌ಗಿರಿ : ಬಜರಂಗದಳದ ದತ್ತ ಮಾಲೆಯ ಸೋಗು

TATA

ಬಂಡವಾಳಗಾರರ ಹಗರಣಗಳ 'ನ್ಯಾಯ'

ಎಮ್ಮೆ ನೆರಳಲ್ಲಿ ಅರಳಿದ ಬಂಡಾಯಗಾರ

ವಿಮೋಚನಾ ಸಮರದಲ್ಲಿ ಮೇಜರ್ ಜಯಪಾಲ್ ಸಿಂಗ್



ಆತ್ಮಕಥನ 2



ಕಳೆದ ಸಂಚಿಕೆಯಲ್ಲಿ... ಹತ್ತು ವರ್ಷಗಳ ಭೂಗತ ಜೀವನದ ಬಳಿಕ ಹೊರಬಂದಿದ್ದರು ಕಾಂ. ಜಯಪಾಲ್ ಸಿಂಗ್. ಅವರನ್ನು ಸ್ವಾಗತಿಸಲು ಕಾದಿದ್ದ ಸಾವಿರಾರು ಜನತೆ. ಮೇಜರ್ ಸಿಂಗರ ಮೇಲೆ ರಾಜದ್ರೋಹದ ಆರೋಪ ಹೊರಿಸಿತ್ತು ಬ್ರಿಟಿಷ್ ಸರಕಾರ. ಮಾತೃಭೂಮಿ ಮತ್ತು ನನ್ನ ಜನಗಳನ್ನು ಅಡಿಯಾಳಾಗಿಸಿಕೊಂಡವರ ವಿರುದ್ಧ ಸಂಚು ನಡೆಸುವ ಸಂಪೂರ್ಣ ಹಕ್ಕು ನನಗಿತ್ತು ಎಂದು ವಿವರಿಸಿದರು ಕಾಮ್ರೇಡ್ ಸಿಂಗ್. ಅಪ್ರತಿಮ ಕ್ರಾಂತಿಕಾರಿಯ ಆತ್ಮಕಥನ... ಮುಂದೆ ಓದಿ....

ಕಳೆದ ಸಂಚಿಕೆಯಲ್ಲಿ

ಕನ್ನಡಕ್ಕೆ- ವಿಶ್ವಕುಂದಾಪುರ

ಮಧ್ಯಂತರ ಸರಕಾರ ಮತ್ತು ನಮ್ಮ ಇತಿಹಾಸದ ಆ ಪ್ರಕ್ಷುಬ್ಧ ಕಾಲಾವಧಿಯ ಕಾಂಗ್ರೆಸ್ ನಾಯಕತ್ವದ ಬಗ್ಗೆ ಈ ಪತ್ರ ಕಟು ನುಡಿಗಳನ್ನು ಒಳಗೊಂಡಿತ್ತು ಎಂಬುದು ನನಗೆ ಗೊತ್ತು. ಆದರೆ ಇವೆಲ್ಲ ಇತಿಹಾಸದ ನನ್ನ ಸತ್ಯಗಳು ಯಾರನ್ನು; ವಿಶೇಷವಾಗಿ ನಾನು ತುಂಬಾ ಗೌರವಿಸುವ ಪ್ರಧಾನಿ ನೆಹರೂರನ್ನು ಅವಮಾನಿಸುವ ಉದ್ದೇಶ ನನ್ನದಾಗಿರಲಿಲ್ಲ.

ಆದರೆ ಈ ಪತ್ರವೇ ನನ್ನನ್ನು ಸೆರೆಮನೆಗೆ ತಳ್ಳಿತು. ಸ್ವತಂತ್ರ ದೇಶದ ಸ್ವತಂತ್ರ ಪ್ರಜೆಯಾಗಿ ಮೇಜರ್ ಜನರಲ್ ರಾಜೇಂದ್ರ ಸಿಂಗ್‌ಜಿ ಅವರಿಗೆ ವರದಿ ಮಾಡಿಕೊಳ್ಳಲು 1947 ಸೆಪ್ಟೆಂಬರ್ 3ರಂದು ತೆರಳಿದಾಗ ನನ್ನನ್ನು ಬಂಧಿಸಲಾಯಿತು.

ಆಶ್ಚರ್ಯವೆಂದರೆ, ಯಾವುದೇ ವಿಚಾರಣೆಯಿಲ್ಲದೆ ಫೋರ್ಟ್ ವಿಲಿಯಂನ ಸೆರೆಮನೆಯ ಸರಳುಗಳ ಹಿಂದೆ ನನ್ನನ್ನು ಇಡಲಾಯಿತು. ಒಂದು ವರ್ಷದ ಮೇಲೆ ಆ ಜೈಲಿನ ಗೋಡೆ ಹಾರಿ ಸ್ವತಂತ್ರ ಹಕ್ಕಿಯಾಗಿ ಹೊರಬಂದೆ ಒಂದು ದಶಕ ಕಾಲ ಭೂಗತ ಜೀವನ ನಡೆಸಿದೆ.

'ಗಾಂಧಿಯೇತರ' ಎಂದು ಹೇಳಲಾಗುವ ಮಾರ್ಗದಲ್ಲಿ ಬ್ರಿಟೀಷರ ವಿರುದ್ಧ ಹೋರಾಡಿದವರ ಬಗ್ಗೆ ಕಾಂಗ್ರೆಸ್ ಆಡಳಿತ ತಳೆದ ದ್ವೇಷಮಯ ನಿಲುವು ನನ್ನ ಕತೆಯನ್ನು ಬರೆಯಲು ಪ್ರೇರೇಪಿಸಿತು. ಇವನ್ನೆಲ್ಲ ನಿಧಾನವಾಗಿ ಬರೆಯಬೇಕೆಂದೆನೋ ಯೋಜಿಸಿದ್ದೆ. ಆದರೆ ಸಂಗಾತಿಗಳ ಪ್ರೀತಿಪೂರ್ವಕ ಒತ್ತಡದಿಂದಾಗಿ, ಬ್ರಿಟಿಷ್ ಸಶಸ್ತ್ರ ಪಡೆಗಳನ್ನು ತ್ಯಜಿಸಿದ್ದ ಕಾರಣ ಹಾಗೂ ಫೋರ್ಟ್ ವಿಲಿಯಂ ಸೆರೆಮನೆಯಿಂದ ಪರಾರಿಯಾದ ಪ್ರಕರಣದ ಬಗ್ಗೆ ವಿವರಗಳನ್ನು ನೀಡಲಿರುವೆ.

ಹೇಗೆ ಮತ್ತು ಏಕೆ ಸೈನ್ಯ ತೊರೆದೆ? ಹೇಗೆ ಮತ್ತು ಏಕೆ ವಿಲಿಯಂ ಫೋರ್ಟ್‌ನಿಂದ ತಪ್ಪಿಸಿಕೊಂಡೆ? ಆಯಾ ಪ್ರಕರಣ ಅನಾವಶ್ಯಗೊಳ್ಳುತ್ತಿರುವಂತೆ ನಾನವುಗಳನ್ನು ವಿವರಿಸಲು ಪ್ರಯತ್ನಿಸುತ್ತೇನೆ. ಆದರೆ ಈ ವಿಚಾರದಲ್ಲೂ ಮಿತವ್ಯಯ ಆಗಿರುವುದಕ್ಕೆ ಓದುಗರಿಂದ ನನ್ನನ್ನೂ ಕ್ಷಮಿಸುವಿಕೆಯ ಆಶಿಸುತ್ತೇನೆ. ಅನೇಕ ವಿಚಾರಗಳನ್ನು ಇನ್ನೂ 'ರಹಸ್ಯ ಪಟ್ಟಿ' ಯಲ್ಲಿ ಇಡುವುದೇ ಇದಕ್ಕೆ ಕಾರಣ. ಸಾಮ್ರಾಜ್ಯಶಾಹಿ ಆಡಳಿತ ವ್ಯವಸ್ಥೆಯ ಕ್ರೂರ ಹಾಗೂ ಕ್ರಿಮಿನಲ್ ಚಕ್ರವ್ಯೂಹದ ಸನ್ನಿವೇಶದಲ್ಲಿ ಹುಚ್ಚು ಬೆಳೆದದ್ದು, ಭಾರತೀಯ ಸಿಐಡಿಯ ಅನುಮಾನದ ರೋಗ, ಹಾಗೂ ಅದರ ಕಾರ್ಯ ವಿಧಾನದಲ್ಲಿ ಅಂತರ್ಗತವಾಗಿರುವ ಪ್ರತಿಗಾಮಿ ಪರಂಪರೆಯನ್ನು ಪೋಷಿಸುವ ಹಠಮಾರಿತನ ನನ್ನನ್ನು ಇನ್ನಷ್ಟು ತೊಂದರೆಗೆ ಸಿಲುಕಿಸಬಹುದು.

ಎಲ್ಲಕ್ಕಿಂತ ಹೆಚ್ಚಾಗಿ, ಭಾರತದ ದೇಶಪ್ರೇಮಿ ಪುತ್ರರು, ಜವಾಬ್ದಾರಿಯುತ ಕಮಾಂಡರ್ ಹಾಗೂ ಸಮರ್ಥ ಸೈನಿಕರಾಗಿ ಭಾರತದ ಸಶಸ್ತ್ರ ಪಡೆಗಳಲ್ಲಿ ಈಗ ಕೆಲಸ ಮಾಡುತ್ತಿರುವ ಅಂದಿನ ನನ್ನ ಸಹೋದ್ಯೋಗಿಗಳನ್ನು ನಾನು ಕೈಬಿಡಲಾರೆ. ನಮ್ಮ ಹೋರಾಟದ ಆ ದೇಶಪ್ರೇಮಿ ಘಟ್ಟ ಮುಗಿದಿದೆ. ಕ್ರಾಂತಿಕಾರಿ ಮಂಡಳಿ ಅಸ್ತಿತ್ವದಲ್ಲಿಲ್ಲ. ನನ್ನ ಮೊದಲ ಭೂಗತ ಜೀವನದಿಂದ ನಾನು ಹೊರಬಂದ ತಕ್ಷಣವೇ ಅದನ್ನು ವಿಸರ್ಜಿಸಲಾಯಿತು. ಬ್ರಿಟೀಷ್ ವಿರೋಧಿ ಹಾಗೂ ಸಾಮ್ರಾಜ್ಯಶಾಹಿ ವಿರೋಧಿ ಭಾವನೆಗಳ ಆಧಾರದಲ್ಲಿ ಬೇರೆ ಬೇರೆ ತತ್ವ ಸಿದ್ಧಾಂತಗಳ ಜನರ ಒಗ್ಗಟ್ಟು ಬೆಸೆಯಬೇಕೆಂಬುದರ ಹಿನ್ನೆಲೆಯಲ್ಲಿ ಅದನ್ನು ವಿಸರ್ಜಿಸುವುದು ನಮ್ಮ ಕರ್ತವ್ಯವೆ. ಆ ಗುರಿ ಸಾಧನೆಯಾದ ಮೇಲೆ ನಾವು ಸಂಘಟನಾತ್ಮಕ ನೆಲೆಯಲ್ಲಿ ಬೇರೆ ಬೇರೆಯಾದೆವು. ಮಾರ್ಕ್ಸ್‌ವಾದ- ಲೆನಿನ್‌ವಾದ ಸಿದ್ಧಾಂತದತ್ತ ಒಲಿದವನು ನಾನೊಬ್ಬನೆ. ಏನಿದ್ದರೂ ಯಾವುದೇ ವಿದೇಶಿ ಆಕ್ರಮಣದ ವಿರುದ್ಧ ನಮ್ಮ ಮಾತೃಭೂಮಿಯ ರಕ್ಷಣೆಯ ಗುರಿ ಹಾಗೂ ಪ್ರಯತ್ನಗಳಲ್ಲಿ ನಾವೆಲ್ಲರೂ ಒಂದೇ, ನಮ್ಮ ಒಗ್ಗಟ್ಟು ಅಚಲವಾದುದು.

ರೈತನ ಮಗ.... ಎಮ್ಮೆ ಕಾಯುವ ಹುಡುಗ

ನಾನು ಸೇನೆಯನ್ನು ತ್ಯಜಿಸಿದ್ದರು ಪ್ರತ್ಯೇಕವಾಗಿ ಕಾಣುವಂಥ ಒಂದು ಪ್ರಕರಣವಲ್ಲ. ಇದುವರೆಗೆ ನಾನು ಕಳೆದ ಜೀವನದ ಉಚ್ಛ್ರಾಯ ಬಿಂದುವಿದು, ಅಷ್ಟೆ. ನನ್ನ ಹಿಂದಿನ ಜೀವನದ ಮೇಲೆ ನೋಟ ಬೀರದೆ ಈ ಪ್ರಕರಣವನ್ನು ಅರ್ಥಮಾಡಿಕೊಳ್ಳುವುದು ಕಷ್ಟ.

ಬಾಲ್ಯದಲ್ಲಿ ನಾನು ಎಮ್ಮೆ ಮೇಯಿಸುವ ಹುಡುಗನಾಗಿದ್ದೆ. ಇದು ಹಳ್ಳಿಗಾಡಿನ ರೈತರನ್ನು ಅವರ ಹೊಲಗಳು, ಮನೆಗಳು ಹಾಗೂ ಗ್ರಾಮಗಳಲ್ಲಿ ನೋಡಲು ನನಗೆ ಅವಕಾಶ ಒದಗಿಸಿತ್ತು.

ಜಾಟ್ ರೈತನೊಬ್ಬನ ಮಗನಾದ ನಾನು ಕಟ್ಟುಮಸ್ತಾಗಿದ್ದೆ ಹಾಗೂ ಬಂಡಾಯ ಪ್ರವೃತ್ತಿಯವನಾಗಿದ್ದೆ. ಎಮ್ಮೆಯನ್ನು ಮೇಯಲು ಕರೆದೊಯ್ಯುತ್ತಿದೆ. ಅದನ್ನು ಹಳ್ಳಿಯ ಕೆರೆಗಳಲ್ಲಿ ಮೇಯಿಸುತ್ತಿದ್ದೆ. ಈ ಎಮ್ಮೆ ನನಗೆ ತುಂಬಾ ಆಪ್ತವಾಗಿತ್ತು. ಪ್ರೀತಿಯಿಂದ ಅದರ ಮೈ ದಡವುತ್ತಿದ್ದೆ. ಉತ್ತರ ಭಾರತದ ಬೇಸಗೆಯ ಅಸಹನೀಯ ಬಿಸಿಗಾಳಿ ಈ ನಮ್ಮ ಆಪ್ತತೆಗೆ ಭಂಗ ತರುತ್ತಿತ್ತು. ಎಮ್ಮೆಯೂ ನಾನೂ ಈ ವಾತಾವರಣದಿಂದ ಸಿಡಿಮಿಡಿಗೊಳ್ಳುತ್ತಿದ್ದೆವು. ಸಿಟ್ಟಿನ ಭರದಲ್ಲಿ ನಾನು ಈ ಮೂಲಕ ಪ್ರಾಣಿಯನ್ನು ಸೆಗಣಿ ಮೆತ್ತಿದ ಬೆತ್ತದಿಂದ ಸಿಕ್ಕಾಪಟ್ಟೆ ಹೊಡೆಯುತ್ತಿದ್ದೆ. ಆ ನಂತರ ಅದಕ್ಕಾಗಿ ಪಶ್ಚಾತ್ತಾಪಪಟ್ಟು ಒಂದೇ ಸಮನೆ ಅಳುತ್ತಿದ್ದೆ.

ಹೀಗೆ, ನನ್ನ ಬಾಲ್ಯದ ನೆನಪಿನ ಬುತ್ತಿಗೂ ನಮ್ಮ ಹಳ್ಳಿಯ ಎಮ್ಮೆ ಮುಂದೆಗೂ ಅವಿನಾಭಾವ ಸಂಬಂಧವಿದೆ. ಈಗ ಆ ದಿನಗಳನ್ನು ನೆನೆಸಿಕೊಳ್ಳುವಾಗ ಎಮ್ಮೆಗಳೇ ಗ್ರಾಮ್ಯಜೀವನದ ಪ್ರಮುಖ ಭಾಗವಾಗಿದ್ದ ಆ ಭಯಾನಕ ಚಿತ್ರಣ ಕಣ್ಣ ಮುಂದೆ ಸುಳಿಯುತ್ತದೆ.

ರೈತರ ಬರಿದಾದ ಮನೆಗಳು, ಬಡ್ಡಿ ದುಡ್ಡಿನ ಬಂಡವಾಳ ಹಾಗೂ ವಸಾಹತುಶಾಹಿ ಶೋಷಣೆ ತಂದಿತ್ತ ಅವಾಂತರ, ನಮ್ಮ ಗ್ರಾಮಗಳ ಪಾಳೇಗಾರಿ ಸ್ವಯಂಪರಿಪೂರ್ಣತೆ ಸರಿಪಡಿಸಲಾಗದಷ್ಟು ನಾಶವಾಗಿತ್ತು. ಬಡಗಿಗಳು, ಕ್ಷೌರಿಕರು, ಕುಂಬಾರರು ಹಾಗೂ ನೇಕಾರರ ನಿರುದ್ಯೋಗ ಪಡೆ ಎಲ್ಲೆಲ್ಲೂ ಕಾಣಿಸುತ್ತಿತ್ತು. ಒಂದು ಕಾಲದಲ್ಲಿ ಹೆಮ್ಮೆಯಿಂದ ಬೀಗುತ್ತಿದ್ದ ರೈತಾಪಿ ಜನರು ಈಗ ತಮಗೊದಗಿ ಬಂದ ದುಸ್ಥಿತಿಯಿಂದ ಪಾರಾಗಲು ತಾವು ಹೆತ್ತ ಮಕ್ಕಳನ್ನು ಬ್ರಿಟೀಷ್ ಭಾರತೀಯ ಸೇನೆಗೆ ಸೇರಿಸಲು ತವಕಪಡುವ ಮಟ್ಟಕ್ಕೆ ಇಳಿದಿದ್ದರು. ಹಸಿವು ಹಾಗೂ ದಾರಿದ್ರ್ಯದ ವಿರುದ್ಧದ ಬಂಡಾಯದ ಮೊದಲ ದನಿ ಮೊಳಗತೊಡಗಿದ ದಿನಗಳವು. ಆ ದನಿಯನ್ನು ಬಲಾತ್ಕಾರದಿಂದ ಅಡಗಿಸಲು ಯತ್ನಿಸಲಾಗಿತ್ತು.

ಈ ಎಲ್ಲ ಆಗುಹೋಗುಗಳನ್ನು ನಾನು ಎಮ್ಮೆಯ ನೆರಳಿನ ಹಿಂದಿನಿಂದಲೇ ಗಮನಿಸುತ್ತಿದ್ದೆ. ನನ್ನ ಮೇಲೂ ಇದು ಪರಿಣಾಮ ಬೀರದೆ ಇರಲಿಲ್ಲ. ಯಾಕೆಂದರೆ ನಾನೂ ಆ ಜೀವನದ ಭಾಗವಾಗಿದ್ದೆ. ಹಳೆಯದಿನ್ನೂ ಪೂರ್ಣ ನಾಶವಾಗಿರಲಿಲ್ಲ; ಹೊಸತು ಇನ್ನೂ ಪೂರ್ಣವಾಗಿ ಪಕ್ವವಾಗಿರಲಿಲ್ಲ.

ಹಳೆ ಎಲೆ ಉದುರಿ ಹೊಸ ಎಲೆ ಚಿಗುರುವಂಥ ಇಂಥ ಸಂಕ್ರಮಣ ಕಾಲ ಘಟ್ಟದಲ್ಲಿ, ಹಳೆಯದು ಇನ್ನಿಲ್ಲವಾಗುತ್ತದೆ ಎಂಬ ಅರಿವಿನೊಂದಿಗೆ ಅದಕ್ಕಾಗಿ ದುಃಖಪಡುತ್ತಿರುವ ಜನಾಂಗವೊಂದು ನಿಂತಿತ್ತು. ಅದಕ್ಕೆ ನಾನೂ ಹೊರತಾಗಿರಲಿಲ್ಲ.

ನನ್ನ ಹಳ್ಳಿಯ ವೇದನೆ, ಕ್ರೌರ್ಯ ಮತ್ತು ಸಂಕಟಗಳ ವಿರುದ್ಧ ನನ್ನ ಸೂಕ್ಷ್ಮಯುವ ಮನಸ್ಸು ಬಂಡೆದ್ದಿತು. ನನ್ನ ಸಿಟ್ಟು- ಆಕ್ರೋಶವನ್ನು ಹೊರಗೆಡವಲು ನಾನು ಬಳಸುತ್ತಿದ್ದ ಸಾಧನವೆಂದರೆ ನನ್ನ ಪ್ರೀತಿಯ ಎಮ್ಮೆಯೊಂದೆ! ಅದಕ್ಕೆ ಬಡಿದೇ ನನ್ನ ಸಿಟ್ಟನ್ನು ಕಾರಿಕೊಳ್ಳುತ್ತಿದ್ದೆ.

ಹೀಗಾಗಿ ನನ್ನ ಜೀವನದ 'ಎಮ್ಮೆ ಭಾಗ' 1920ರ ದಶಕದ ಕೊನೆಯ ನನ್ನ ಮನೆ, ನಮ್ಮ ಜನ ಹಾಗೂ ನನ್ನ ಹಳ್ಳಿಯ ಕ್ರೂರ ಮುದ್ರೆಗಳನ್ನು ನನ್ನ ಮನಸ್ಸಿನ ಮೇಲೆ ಒತ್ತಿದೆ. ಇಷ್ಟು ಚಿಕ್ಕ ವಯಸ್ಸಿನಲ್ಲೇ ನನ್ನ ನರನಾಡಿಗಳಲ್ಲಿ ಸ್ವಯಂಸ್ಫೂರ್ತವಾಗಿ ಬಂಡಾಯದ ಬೀಜ ಮೊಳಕೆಯೊಡೆಯಿತು. ಜಾಟ್ ರೈತರ ಧೀರತೆ ನನ್ನ ಮೈಯೆಲ್ಲಾ ವ್ಯಾಪಿಸಿತು. ಸಾಮ್ರಾಜ್ಯಶಾಹಿ ಕೈಯಲ್ಲಿ ನೈತಿಕ, ಆರ್ಥಿಕ ಹಾಗೂ ರಾಜಕೀಯ ಅಧಃಪತನ ಆಗುವುದನ್ನು ತಡೆಯಲು ಹೋರಾಡಬೇಕೆಂದು ಮನ ಹಂಬಲಿಸಿತು.

ಈ ರೀತಿಯಾಗಿ, ನನ್ನ ಕ್ರಾಂತಿಕಾರಿ ಚಿಂತನೆ ನನ್ನ ಎಮ್ಮೆಯ ನೆರಳಿನ ಹಿಂದೆ ಕುಡಿಯೊಡೆಯಿತು ಹಾಗೂ ಬೆಳೆಯಿತು. ಭಾರತದ ಬಡತನದಿಂದ ಬೆಂದು ಬಸವಳಿದ ಭಾರತೀಯ ಹಳ್ಳಿಗಾಡೇ ನನ್ನ ಕ್ರಾಂತಿಕಾರಿ ತರಬೇತಿಯ ಪ್ರಥಮ ಶಾಲೆ.

ಬಡತನದಿಂದ ನೈತಿಕ ಸ್ಥೈರ್ಯ ಕುಸಿಯುತ್ತದೆ, ಜೀವನದಲ್ಲಿ ಧೈರ್ಯ ಕುಂದುತ್ತದೆ ಎನ್ನುತ್ತಾರೆ. ಇವೆಲ್ಲ ಪ್ರಭಾವಗಳು ವ್ಯಕ್ತಿಗತವಾದವು. ಆದರೆ ಜೀವನ ಅಷ್ಟು ಸರಳವಲ್ಲ. ಎಲ್ಲವನ್ನೂ, ಎದುರಿಸಿ ನಿಲ್ಲುವ ಅಂತಃಶಕ್ತಿ ಮನುಷ್ಯನಲ್ಲಿರುತ್ತದೆ. ಸಾವನ್ನೂ ಗೆಲ್ಲುವ ಛಲವಿರುತ್ತದೆ ಈ ಧೀಶಕ್ತಿ ಸೂಕ್ತವಾಗಿರುತ್ತದೆ.

ಬಾಲ್ಯದಲ್ಲಿ ನಾನು ಕಷ್ಟಪಟ್ಟಿದ್ದೆ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಆದರೆ ಆ ಸಂಕಷ್ಟಗಳು ಸೃಷ್ಟಿಸಿದ ಯಾತನೆ-ವೇದನೆಗಳಿಗೆ ಒಳಗಾಗದೆಯೇ ನಾನು ಈಗ ಏನಾಗಿದ್ದೆನೋ ಅದಾಗಲು ಸಾಧ್ಯವಿತ್ತೆ?

ಒಬ್ಬ ರೈತನ ಮಗನ ಸ್ಥಾನ ಏನಿದ್ದರೂ ನೇಗಿಲ ಹಿಂದೆಯೇ ಎಂಬ ಹಿಂದುಳಿದ ಪರಂಪರಾಗತ ಶೋಷಣೆಯ ಅಭಿಪ್ರಾಯಕ್ಕೆ ಇದಿರಾಗಿ, ಬಡತನದ ಬೆಂಕಿಯಲ್ಲಿ ಬೇಯುತ್ತಿದ್ದರೂ ನನ್ನ ಮಗ ಆಧುನಿಕ ಶಿಕ್ಷಣ ಪಡೆದು ವಿದ್ಯಾವಂತನಾಗಬೇಕೆಂಬ ಹಂಬಲ ಹೊತ್ತ ಅಮ್ಮ ಏಕೈಕ ಮಗನಿಗೆ ಶಿಕ್ಷಣ ಕೊಡಿಸುವ ಮಹತ್ವಾಕಾಂಕ್ಷೆಯಿಂದ ಕೆಲವು ರೂಪಾಯಿಗಳನ್ನು ಸಂಪಾದಿಸಲೆಂದು ಬಾಡಿಗೆ ಸೈನ್ಯವೊಂದನ್ನು ಸೇರಲು ಹಳ್ಳಿಯಿಂದ ಮಾಯವಾದ ಅಪ್ಪ, ತಂದೆ-ತಾಯಿಯ ಈ ಬವಣೆಯ ವ್ಯಕ್ತಿಗತ ಪ್ರಜ್ಞೆ ನನ್ನಲ್ಲಿ ಕ್ರಮೇಣ ವಸ್ತುನಿಷ್ಠ ಪ್ರಜ್ಞೆಯಾಗಿ ಪರಿಣಮಿಸಿತು. ಬಡತನದ ವಸ್ತುನಿಷ್ಠ ಕಾಠಿಣ್ಯವೇ, ಅದನ್ನು ತೊಡೆದು ಹಾಕಲು ಹಾಗೂ ಅದರ ವಿರುದ್ಧವೇ ಹೋರಾಡಲು ವ್ಯಕ್ತಿಗತ ಸಿದ್ಧತೆ ಮಾಡಿಕೊಳ್ಳುವ ದಾರಿ ತೋರಿಸಿತು. ಬಡತನ, ಶೋಷಣೆ ವಿರುದ್ಧ ಸೆಣಸುವ ಕಸುವು, ದಾರಿದ್ರ್ಯದಿಂದ ಉಂಟಾಗುವ ನೈತಿಕ ಸ್ಥೈರ್ಯ ಕುಸಿತ ಹಾಗೂ ಹತಾಶೆಯ ಸಾಗರದಲ್ಲಿ ಮುಳುಗಿಹೋಗಲು ನಿರಾಕರಿಸುವ ದಿಟ್ಟತನ- ಇವೆಲ್ಲವೂ ನನ್ನ ಬಾಲ್ಯದ ಆಕಾಂಕ್ಷೆ ಹಾಗೂ ಉದ್ದೇಶಗಳನ್ನು ರೂಪಿಸಿದವು.

ಎಮ್ಮೆಯಿಂದ ಬ್ಯಾರಕ್‌ಗೆ...

ಜೀವನ ನನ್ನನ್ನು ಎಮ್ಮೆಯಿಂದ ಬ್ಯಾರಕ್‌ಗೆ ನಿಷ್ಕರುಣೆಯಿಂದ ಕರೆದೊಯ್ದಿತು. ಮಾನವ ಕ್ರೌರ್ಯದ ಇಂಥ ಕುಖ್ಯಾತ ಆದಿಗಳೆಲ್ಲ ಜಾಟ್ ರೈತರಿಗೆ ಚಿರಪರಿಚಿತವೇ. ಕೆಂಪು ಚಾವಣಿ - ಕುಟಿಲ ನೋಟದ ಬ್ಯಾರಕ್‌ಗಳು ಅನಿವಾರ್ಯವಾಗಿ ಸಾಮ್ರಾಜ್ಯಶಾಹಿಗಳ ಸೇವೆಗೆ ಬದ್ಧವಾಗಿ ತಮ್ಮದೇ ದೇಶ ಹಾಗೂ ಜನರ ವಿರುದ್ಧ ಸೆಣಸಲು ಬಂದ ರೈತರ ಮಕ್ಕಳ ವಾಸಸ್ಥಾನಗಳು!

ಸೇವೆಯಲ್ಲಿರುವ ಸೈನಿಕನ ಮಗನಾಗಿ ಬ್ಯಾರಕ್ ಪ್ರವೇಶಿಸಿದ ಮೊದಲ ದಿನ ಹಾಗೂ ಸೇವಾನಿರತ ಒಬ್ಬ ಕಮಿಷನ್ಡ್ ಅಧಿಕಾರಿಯಾಗಿ ಬ್ಯಾರಕ್ ತ್ಯಜಿಸಿದ ದಿನ- ಇವೆರಡೂ ಚೆನ್ನಾಗಿ ನನಗೆ ನೆನಪಿದೆ.

ಹಳ್ಳಿ ವಾತಾವರಣದಿಂದ ಬೇಸತ್ತು, ನನ್ನ ತಾಯಿ ಹಾಗೂ ಅಜ್ಜನ ಬಲಾತ್ಕಾರದಿಂದ, ಹಾಗೂ ನಮ್ಮ ಶಾಲೆಯ ಶಿಕ್ಷಕನ ಭೀತಿಯಿಂದಾಗಿ ನನ್ನ ಎಮ್ಮೆಗೆ ವಿದಾಯ ಹೇಳಿ ನನ್ನ ತಂದೆಯ ಜತೆ ಬ್ಯಾರಕ್‌ಗಳಲ್ಲಿ ಇರಬೇಕಾಯಿತು.

ತಂದೆಯೆಂದರೆ ನನಗೆ ತುಂಬಾ ಭಯ. ಜಾಟ್ ರೈತನೊಬ್ಬನ ಗುಣಲಕ್ಷಣಗಳು ಆತನ ವ್ಯಕ್ತಿತ್ವದಲ್ಲಿ ಪ್ರತಿಬಿಂಬಿತವಾಗುತ್ತಿತ್ತು. ಆರೋಗ್ಯವಂತ, ಕಡುಕೋಪಿ, ನೇರನುಡಿ ಹಾಗೂ ಹೃದಯವಂತನಾಗಿದ್ದ ನನ್ನ ಅಪ್ಪ,ಬ್ಯಾರಕ್‌ಗಳಲ್ಲಿ ಪ್ರಜ್ಞಾಪೂರ್ವಕವಾಗಿ ಅನುಭವಿಸಿದ ಕ್ರೌರ್ಯಗೊಳಿಸುವ ಪ್ರಕ್ರಿಯೆಯಿಂದಾಗಿ, ಈ ಎಲ್ಲ ಗುಣಗಳನ್ನು ಕಳೆದುಕೊಂಡ. ನನ್ನ ಬಂಡಾಯದ ದನಿ ಮೊದಲು ಮೂಡಿದ್ದು ನನ್ನ ತಂದೆಯ ವಿರುದ್ಧವೆ. ಏನಿದ್ದರೂ ನಿಜವಾದ ವೈರಿಯನ್ನು ಇನ್ನೂ ಕಂಡುಕೊಳ್ಳಬೇಕಾಗಿತ್ತು.


(ಮುಂದುವರಿಯುವುದು)

ಐಕ್ಯರಂಗ
ಚಂದಾದಾರರಾಗಿ

ವಾರ್ಷಿಕ	ರೂ. 140
6 ತಿಂಗಳು	ರೂ. 80

ಸುಪ್ರೀಂಕೋರ್ಟ್ ಗದಾಪ್ರಹಾರ : ಹೊಣೆಗಾರ ಕೃಷ್ಣರಲ್ಲದೆ ಮತ್ಯಾರು ?

ದೆಹಲಿಯಿಂದ ಕೃಷ್ಣ ಶನಿವಾರ ವಾಪಸಾಗಲಿದ್ದಾರೆ. ಅವರನ್ನು ಹತ್ತಾರು ಪ್ರಶ್ನೆಗಳು ಕಾಡುತ್ತಿವೆ. ಹತ್ತಾರು ದಾರಿಗಳೂ ಕಾಣುತ್ತಿವೆಯಂತೆ. ಆದರೆ ಯಾವುದನ್ನು ಆಯ್ಕೆ ಮಾಡಿಕೊಳ್ಳುವ ಸ್ಥಿತಿಯಲ್ಲಿ ಮುಖ್ಯಮಂತ್ರಿ ಕೃಷ್ಣ ಈಗಿಲ್ಲ. ದೆಹಲಿಯಲ್ಲಿಯೂ ಹಿರಿಯ ಸಂಪುಟದ ಸದಸ್ಯರೊಂದಿಗೆ, ವಕೀಲರೊಂದಿಗೆ, ಪಕ್ಷದ ವರಿಷ್ಠರೊಂದಿಗೆ, ರವಿವಾರ ಸರ್ವಪಕ್ಷಗಳೊಂದಿಗೆ ಸಮಾಲೋಚನೆಗೆ ಇಳಿಯುತ್ತಿದ್ದಾರೆ.



ತಮಿಳುನಾಡಿಗೆ ನೀರು ಬಿಡಬೇಕೆಂಬ ತನ್ನ ಆದೇಶವನ್ನು ಕರ್ನಾಟಕ ಸರ್ಕಾರ ಉಲ್ಲಂಘಿಸಿದೆಯೆಂದು ಸುಪ್ರೀಂ ಕೋರ್ಟ್ ಕಟು ಮಾತುಗಳಿಂದ ಟೀಕಿಸಿ, ಮೇಲ್ನೋಟದಲ್ಲಿ ನ್ಯಾಯಾಂಗ ನಿಂದನೆ ಮಾಡಿದೆಯೆಂದು ಅಭಿಪ್ರಾಯ ಪಟ್ಟಿದೆ. ನದಿಯಲ್ಲಿ ನೀರಿಲ್ಲ, ರೈತರು ಚಳುವಳಿಗೆ ಇಳಿದಿದ್ದು, ಗುರುಸ್ವಾಮಿ ಆತ್ಮಾಹುತಿ, ತಮಿಳರ ಜೀವ-ಆಸ್ತಿ ರಕ್ಷಣೆ - ಮುಂತಾದ ಕಾನೂನು ಸುವ್ಯವಸ್ಥೆಯ ಪ್ರಶ್ನೆಗಳನ್ನು ಕರ್ನಾಟಕ ಸರ್ಕಾರದ ವಕೀಲರು ವಿವರಿಸಿದ್ದನ್ನು ಕೋರ್ಟ್ ಒಪ್ಪಿಲ್ಲ. ಕಷ್ಟ ಎದುರಾಗಿದ್ದರೆ ಯಾಕೆ ಮರುಪರಿಶೀಲನೆ ಅರ್ಜಿ ಹಾಕಲಿಲ್ಲ? ಸರ್ವ ಪಕ್ಷಗಳ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನವೇನು? ಹಾಗಾದರೆ ಮುಖ್ಯಮಂತ್ರಿ ಗಳು ಪಾದಯಾತ್ರೆ ಯಾಕೆ ಮಾಡಿದ್ದು? ಆಡಿದ ಮಾತುಗಳೇನು? ಮುಂತಾಗಿ ಪ್ರಶ್ನೆಗಳ ಸುರಿಮಳೆ ಗೈದಿದೆ ನ್ಯಾಯಪೀಠ. ಈ ಉಲ್ಲಂಘನೆಯನ್ನು ಪ್ರಜ್ಞಾಪೂರ್ವಕವಾಗಿ, ಅಧಿಕಾರದ ಕುರ್ಚಿಗಾಗಿ ಮಾಡಿದ್ದು ಎಂದು ಟೀಕಿಸಿದೆ. ಸರ್ಕಾರಗಳೇ ಹೀಗೆ ನಡೆದುಕೊಂಡರೆ ಹೇಗೆ ಎಂದು ಸಂವಿಧಾನಾತ್ಮಕ ಪ್ರಶ್ನೆ ಎತ್ತಿದೆ.

ಕರ್ನಾಟಕದ ವಕೀಲ ಅನಿಲ್ ದಿವಾನ್‌ರವರು ಹೆಚ್ಚಿನ ಮಾಹಿತಿ ನೀಡಲು ಮೂರುದಿನಗಳ ಅವಕಾಶ (ಉಸಿರಾಟದ ಅವಧಿ?) ಕೋರಿದ್ದರಿಂದ ಅಂತಿಮ ತೀರ್ಪು, ಶಿಕ್ಷೆಯ ಸ್ವರೂಪ ಪ್ರಕಟಣೆಯನ್ನು ಸೋಮವಾರಕ್ಕೆ ಹಾಕಿದೆ. (ಈ ಸಂಚಿಕೆ ಕೈ ಸೇರುವ ಹೊತ್ತಿಗೆ ಇವೆಲ್ಲಾ ಸ್ಪಷ್ಟವಾಗಿರಬಹುದು)

ಕೇಂದ್ರ ಸರ್ಕಾರವೂ ಸಹ ಸುಪ್ರಿಂಕೋರ್ಟ್‌ನ ಟೀಕೆಯಿಂದ ತಪ್ಪಿಸಿಕೊಂಡಿಲ್ಲ. "ನಮ್ಮ ಆದೇಶವನ್ನು ಪಾಲಿಸದೇ ಇರಲು ನಿಮಗೆ ನೂರೆಂಟು ಸಮಸ್ಯೆಗಳಿರಬಹುದು, ಅದನ್ನು ತಿಳಿಸಿ ಆದೇಶದ ಮರುಪರಿಶೀಲನೆಗೆ ನೀವು ಅರ್ಜಿ ಹಾಕಬಹುದಿತ್ತು. ತನ್ನ ತೀರ್ಪುಗಳನ್ನು ನ್ಯಾಯಾಲಯಗಳು ಹಲವಾರು ಸಂದರ್ಭಗಳಲ್ಲಿ ಮರು ಪರಿಶೀಲಿಸಿದೆ. ಆದರೆ ನೀವು ಅದನ್ನು ಮಾಡಲಿಲ್ಲ. ಅದರ ಬದಲಿಗೆ ಮುಖ್ಯಮಂತ್ರಿಗಳು ಪಾದಯಾತ್ರೆ ಹೊರಟರು. ಅದರ ಉದ್ದೇಶ ಏನಾಗಿತ್ತು? ಅದಕ್ಕಿಂತ ಮೊದಲು ಸರ್ವಪಕ್ಷಗಳ ಸಭೆಯಲ್ಲಿ ಏನು ತೀರ್ಮಾನ ಕೈಗೊಳ್ಳಲಾಗಿತ್ತು?" ಎಂದು ಪ್ರಶ್ನಿಸಿದೆ.

ಈ ಬಾರಿ ಕಾವೇರಿ ವಿವಾದ ಆರಂಭಗೊಂಡಾಗಿನಿಂದಲೂ ಕೃಷ್ಣರ ಸರ್ಕಾರ ಒಂದು ಕಾರ್ಯಸಾಧುವಾದ ಪ್ರಾಯೋಗಿಕ ನಿರ್ಧಾರಕ್ಕೆ ಬರಲಾಗಲಿಲ್ಲ, ಬದ್ಧರಾಗಲಿಲ್ಲ. ಮೊದಮೊದಲು ಅಂತಹ ನಿಲುವಿನತ್ತ ಕೃಷ್ಣ ಒಲವುತೋರಿಸಿದ್ದರಾದರೂ ಮುಂದೆ ಪ್ರತಿಯೊಂದು ಹಂತದಲ್ಲಿಯೂ ಅವರು ಕೈಗೊಂಡ ನಿಲುವುಗಳು ಮತ್ತು ಅದು ಪಾದಯಾತ್ರೆಯಲ್ಲಿ ಕೊನೆಗೊಂಡ ರೀತಿ ಅವರು ರಾಜ್ಯದ ರೈತರ ದೀರ್ಘಾವಧಿ ಹಿತಕ್ಕಿಂತಲೂ ಬಿಕ್ಕಟ್ಟಿನ ರಾಜಕೀಯದ ದುರ್ಲಾಭ ಪಡೆಯಲು ಬಯಸಿದ್ದು ಸ್ಪಷ್ಟವಾಯಿತು. ಪ್ರತಿ ಸಭೆಯಲ್ಲಿಯೂ ಸಿಪಿಐ(ಎಂ) ಪಕ್ಷ ನೀಡಿದ ಸಲಹೆಗಳನ್ನು(ಬೇರೆ ಪಕ್ಷಗಳಿಗಿಂತ ಭಿನ್ನ ನಿಲುವಿನದ್ದು), ಪ್ರಾಧಿಕಾರದ ಮುಂದೆ 8000 ಕ್ಯೂಸೆಕ್ಸ್ ಬಿಡುವುದಾಗಿ ಸರ್ಕಾರ ಹೇಳಿಕೆ ನೀಡಿ ನಂತರ 9000 ಕ್ಕೆ ನಿಗದಿಯಾದ ನಂತರ ಸಭೆಯಲ್ಲಿಯೂ ಕಾವೇರಿ ನದಿ ಪ್ರಾಧಿಕಾರ, ಕೋರ್ಟ್ ಮುಂದೆ ಸಂಕಷ್ಟದ ಸ್ಥಿತಿ ವಿವರಿಸಿ ಅರ್ಜಿ ಹಾಕಬೇಕೆಂದು, ಸುಪ್ರಿಂ ಕೋರ್ಟ್ ನೀಡಿರುವ ಆದೇಶದಲ್ಲಿನ ಅವಕಾಶಗಳನ್ನೇ ಬಳಸಿಕೊಳ್ಳಬೇಕೆಂದು ಪದೇ ಪದೇ ಹೇಳಿದರೂ ಕೃಷ್ಣ ಕೇಳಲಿಲ್ಲ. ಅಂತಿಮ ಹಂತದಲ್ಲಿ ಕೃಷ್ಣ-ಕಾಂಗ್ರೆಸ್‌ನ ರಾಜಕೀಯ ದುರ್ಲಾಭ ಅರಿತ ಬಲಪಂಥೀಯ ವಿರೋಧ ಪಕ್ಷಗಳು ಸಹ ಅವರಿಂದ ಹಿಂದೆ ಸರಿದವು. ನೀರಾವರಿ ತಜ್ಞರು, ಕಾನೂನು ಪರಿಣತರು, ಅಧಿಕಾರಿಗಳ ಮಾತುಗಳೂ ಕೇಳಲಿಲ್ಲ.

ಇಂದಿನ ಬಿಕ್ಕಟ್ಟಿನ ಸ್ಥಿತಿಗೆ ಮುಖ್ಯಮಂತ್ರಿ ಕೃಷ್ಣರವರೇ ಹೊಣೆ ಹೊರತು ಬೇರಾರೂ ಅಲ್ಲ. ಉತ್ತರ ಪ್ರದೇಶ, ಗುಜರಾತ್ ಸರ್ಕಾರಗಳು ಧರ್ಮನಿರಪೇಕ್ಷತೆ ಕಾಯುವ ವಿಚಾರದಲ್ಲಿ ನಗ್ನವಾಗಿ ಉಲ್ಲಂಘಿಸಿರುವುದು ನ್ಯಾಯಾಲಯ ನೆನಪಿಸಿದೆ. ಈಗ ರಾಷ್ಟ್ರೀಯ ಪಕ್ಷದ ಸರ್ಕಾರವೊಂದು ನ್ಯಾಯಾಲಯದ ನಿರ್ದೇಶನ ಉಲ್ಲಂಘಿಸಿದೆ. ಅದೂ ಎಲ್ಲಾ ಅವಕಾಶಗಳಿದ್ದರೂ ಬಳಸದೇ.

ಈ ವಾರ ಕರ್ನಾಟಕ ಒಂದು ನೋಟ — ಎಸ್.ವೈ.ಗುರುಶಾಂತ್

ಕೃಷ್ಣ - ಕಾಂಗ್ರೆಸ್ ಪಕ್ಷ ಏನೇನೋ ರಾಜಕೀಯ ಲೆಕ್ಕಾಚಾರ ಹಾಕಬಹುದು. ಆದರೆ ಅದು ಅಷ್ಟು ಸುಲಭದ್ದಲ್ಲ. ಸೋಮವಾರದ ತೀರ್ಪು ಏನು ಬರುತ್ತದೆ ಕಾದು ನೋಡೋಣ. ಈ ಸಂದರ್ಭದಲ್ಲಿ ಅಧಿಕಾರಸ್ಥರು ಆಡುವ ಆಟಗಳಿಗೆ ದಾಳಗಳಾಗದಂತೆ ಜನ ಎಚ್ಚರವಿರಬೇಕು. ಶಾಂತಿ-ಸಾಮರಸ್ಯ ಕಾಪಾಡಬೇಕು.

ಬಾಬಾಬುಡನ್‌ಗಿರಿ ಬಜರಂಗದಳ ದತ್ತ ಮಾಲೆಯ ಸೋಗು

ಬಾಬಾಬುಡನ್ ಗಿರಿ - ಮತ್ತು ಸುತ್ತಮುತ್ತ ಮತ್ತೇ ಬಜರಂಗದಳ- ವಿಶ್ವಹಿಂದೂ ಪರಿಷತ್‌ನ ತಂಡಗಳು ಕೊಳ್ಳಿ ಹಿಡಿದು ತಿರುಗುತ್ತಿವೆ. 'ದತ್ತ ಜಯಂತಿ' ಹೆಸರಿನಲ್ಲಿ ವ್ಯಾಪಕವಾಗಿ ಶಾಂತಿ ಸಾಮರಸ್ಯ ಕೊಡಿಸಲು ಪ್ರಚೋದಾತ್ಮಕ ಕೆಲಸಗಳಲ್ಲಿ ತೊಡಗಿವೆ. ಬಾಬಾ ಬುಡನ್‌ಸ್ವಾಮಿ ದತ್ತಾ ಪೀಠಕ್ಕೆ ಹಿಂದೂ ಮುಸ್ಲಿಂ ಎರಡೂ ಜನಾಂಗಗಳ ಭಕ್ತರೂ ನಡೆದು ಕೊಳ್ಳುತ್ತಾರೆ. ಇದು ಮತೀಯ ಸೌಹಾರ್ದತೆಯ, ಸೂಫಿ ಸಂತರ ಉನ್ನತ ಪರಂಪರೆಯ ಪ್ರದೇಶ. ಆದರೆ ಕಳೆದ ನಾಲ್ಕಾರು ವರುಷಗಳಿಂದ ಈ ಪರಂಪರೆಗೆ ಮಸಿ ಬಳಿದು, ಕೋಮು ವಿಭಜನೆ ತರಲು, ಸಂಘ ಪರಿವಾರ ಆಕ್ರಮಣಶೀಲವಾಗಿ ಪ್ರಯತ್ನ ನಡೆಸಿದೆ. ಬಾಬಾ ಬುಡನ್ ಗಿರಿಯ ಪೀಠವನ್ನು ಇನ್ನೊಂದು 'ಅಯೋಧ್ಯಾ' ಮಾಡುವುದಾಗಿ (ಅಯೋಧ್ಯಾ, ಗುಜರಾತ್... ಎಂತಹ ಮಾದರಿಗಳ ಸೃಷ್ಟಿ) ಬೆದರಿಕೆ ಒಡ್ಡುತ್ತಿದೆ.

ಈ ಬಾರಿ 'ದತ್ತಜಯಂತಿ' ಯ ಹಿನ್ನೆಲೆಯಲ್ಲಿ ಸುಮಾರು 15000 'ದತ್ತಮಾಲೆ' ಧರಿಸಿದ ಭಕ್ತರನ್ನು ಅಣಿನೆರೆಸುವುದಾಗಿ ಭಜರಂಗದಳ ಹೇಳಿದೆ. ಮತ್ತು ಬಾಬಾ ಬುಡನ್‌ಗಿರಿ ಗುಹೆಯಲ್ಲಿ ದತ್ತಾತ್ರೇಯ ವಿಗ್ರಹವನ್ನು ಸ್ಥಾಪಿಸುವುದಾಗಿಯೂ ಘೋಷಿಸಿದೆ. ಈ ಫ್ಯಾಸಿಸ್ಟ್ ಸಂತತಿಯ ವಾದಗಳೋ, ತರ್ಕವೋ... ಅವರಿಗೆ ಬೇಕಿಲ್ಲ... ಪರಂಪರೆ, ಇತಿಹಾಸ, ದೇಶದ ಭವಿಷತ್ತು - ಕಾಳಜಿ ಅವರ ಅರ್ಥಕೋಶದಲ್ಲೇ ಇಲ್ಲ. ವಿಧ್ವಂಸಕ ಚಿಂತನೆ-ವಿಧಾನ ಮೈಗೂಡಿಸಿಕೊಂಡ ಇವರು ಇಲ್ಲವಾದರೆ ಪೀಠವನ್ನೇ ನಾಶಗೊಳಿಸುವ, ಕಾನೂನು-ಸಂವಿಧಾನವನ್ನೇ ಧಿಕ್ಕರಿಸುವ, ಪ್ರಗತಿಪರ, ಧರ್ಮನಿರಪೇಕ್ಷತರನ್ನು, ಅಲ್ಪಸಂಖ್ಯಾತರನ್ನು ಮನಬಂದಂತೆ ಹೀಯಾಳಿಸಿ, ಬೆದರಿಕೆ ಒಡ್ಡಲಾಗುತ್ತದೆ. ಇವರ ಕೃತ್ಯಗಳನ್ನು ನೋಡಿಕೊಂಡು ಪೋಲೀಸ್, ಮುಂತಾದ ಸರ್ಕಾರದ ಇಲಾಖೆಗಳು ಸುಮ್ಮನೆ ಕೂಡುತ್ತಿವೆ. ಹೇಗೋ ಈ ಸಂದರ್ಭ ಮುಗಿದರೆ ಸಾಕು ಎಂಬ ರೀತಿ ನಿಲುವು ತಾಳಿ, ವಿಧ್ವಂಸಕರನ್ನೇ ಪುಸಲಾಯಿಸುವ ಹಂತಕ್ಕೂ ಹೋಗುತ್ತಿವೆ. ಆದ್ದರಿಂದ ದೇಶದ ಒಟ್ಟು ಪರಿಸ್ಥಿತಿಯ ಹಿನ್ನೆಲೆಯಲ್ಲಿ ಬಜರಂಗದಳ-ಸಂಘ ಪರಿವಾರದ ಚಟುವಟಿಕೆಗಳನ್ನು ಕಟ್ಟುನಿಟ್ಟಾಗಿ ಎದುರಿಸಬೇಕು. ಶಾಂತಿ-ಸಾಮರಸ್ಯ ಕಾಪಾಡಲು ಮುಂದಾಗಬೇಕು. ಮುಖ್ಯವಾಗಿ ನಾಡಿನ ಜನತೆ ಈ ದುಷ್ಟ ಶಕ್ತಿಗಳ ಆಟ ಸಾಗದಂತೆ ತಿರಸ್ಕರಿಸಬೇಕು.

ತಮಿಳು ಟಿ.ವಿ.ಚಾನಲ್ -ಸಿನಿಮಾ ಬಂದ್

ಕರ್ನಾಟಕದಲ್ಲಿ ತಮಿಳು ಸಿನಿಮಾಗಳ ಹಾಗೂ ಟಿ.ವಿ. ಚಾನಲ್‌ಗಳ ಬಹಿಷ್ಕಾರ ಮತ್ತು ತಮಿಳುನಾಡಿನಲ್ಲಿ ಕನ್ನಡ ಟಿ.ವಿ. ಚಾನಲ್‌ಗಳ ಬಹಿಷ್ಕಾರ ಇನ್ನೂ ಕೂಡ ಮುಂದುವರೆದಿದೆ. ಇದು ಸಂವಿಧಾನದ ಮೂಲಭೂತ ಹಕ್ಕಾದ ವಾಕ್ ಸ್ವಾತಂತ್ರ್ಯದ ಉಲ್ಲಂಘನೆ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಪರಿಗಣಿಸಿದೆ.

ಕಾವೇರಿ ಜಲ ವಿವಾದದ ವಿಷಯದಲ್ಲಿ ಅನಗತ್ಯವಾಗಿ ಕನ್ನಡ ಮತ್ತು ತಮಿಳು ಚಲನಚಿತ್ರ ರಂಗಗಳು ತೊಡಗಿಕೊಂಡಿರುವುದು ಸಮಸ್ಯೆಯನ್ನು ಮತ್ತಷ್ಟು ಸಂಕೀರ್ಣಗೊಳಿಸಿದೆ. ಕರ್ನಾಟಕಕ್ಕೆ ವಿದ್ಯುತ್ ನೀಡಬಾರದೆಂದು ತಮಿಳು ಚಿತ್ರರಂಗವು ನೈವೇಲಿಯಲ್ಲಿ ನಡೆಸಿದ ಪ್ರದರ್ಶನ ಹಾಗೂ ಎರಡೂ ರಾಜ್ಯಗಳಲ್ಲಿ ಚಲನಚಿತ್ರ ಮತ್ತು ಟಿ.ವಿ. ಚಾನಲ್‌ಗಳ ಪ್ರದರ್ಶನ ನಿಷೇಧ ಖಂಡನಾರ್ಹವಾದುದು. ಈ ಸಮಸ್ಯೆಯನ್ನು ಇನ್ನಷ್ಟು ಜಟಿಲಗೊಳಿಸದೆ ಎರಡೂ ರಾಜ್ಯಗಳಲ್ಲಿ ಟಿ.ವಿ. ಚಾನಲ್ ಮತ್ತು ಚಲನಚಿತ್ರಗಳ ಪ್ರದರ್ಶನ ಆರಂಭಿಸಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ಒತ್ತಾಯಿಸಿದೆ.

ಎರಡೂ ರಾಜ್ಯ ಸರ್ಕಾರಗಳು ಈ ಬಗ್ಗೆ ಕೂಡಲೇ ಕ್ರಮಕೈಗೊಳ್ಳಬೇಕೆಂದು ಮತ್ತು ಎರಡೂ ರಾಜ್ಯಗಳ ಜನತೆ ಭಾಷಾಂಧ ಶಕ್ತಿಗಳನ್ನು ಧಿಕ್ಕರಿಸಿ, ವಾತಾವರಣ ತಿಳಿಗೊಳಿಸಲು ಸಹಕರಿಸಬೇಕೆಂದು ಸಿಪಿಐ(ಎಂ) ಮನವಿ ಮಾಡಿದೆ.

ಭಟ್ಕಳ- ಕೋಮುವಾದಿಗಳ ದುಷ್ಕೃತ್ಯ - ಶಾಂತಿ ಅಗತ್ಯ

ಭಟ್ಕಳ ಇರುವುದು ವಿಶಾಲಸಮುದ್ರ ದಡದಲ್ಲಿ. ಆದರೆ ಅಲ್ಲಿ ಕೋಮುದ್ವೇಷದ ಕಿಚ್ಚು ಹೊತ್ತಿಕೊಳ್ಳಲು ಹೆಚ್ಚು ಹೊತ್ತು ಬೇಕಾಗಿಲಿಕ್ಕಿಲ್ಲ. ವಿಶೇಷವಾಗಿ ಭಟ್ಕಳ ಸಾಗರದ ಸಾರಿಗೆ ಮೂಲಕ ಭಾರಿ ವ್ಯವಹಾರ ನಡೆವ ಬಂದರು ಪ್ರದೇಶ. ಹೊರ ದೇಶಗಳಿಗೂ-ಭಾರತಕ್ಕೂ ಸಂಬಂಧ ತರುವ ಒಂದು ಬಾಗಿಲು. ಹೀಗಾಗಿ ಮಾಫಿಯಾ ತಂಡಗಳ ವ್ಯವಹಾರಗಳಿಗೂ ಕುಖ್ಯಾತಿ. ಹಿಂದೆ ನಡೆದ ಕೋಮುಗಲಭೆಗಳಲ್ಲಿ ಶಾಸಕ ಚಿತ್ತರಂಜನ್ ಕೊಲೆಯ ಹಿಂದೆ ಇಂತಹದ್ದೇ ತಂಡಗಳ ಕೈವಾಡ, ರಾಜಕೀಯ ಹಣಾಹಣಿ ಇರುವ ಬಗ್ಗೆ ವ್ಯಾಪಕ ಶಂಕೆ ಇದೆ. ಇದು ಕರಾವಳಿ ತೀರದ ಗುಂಟ ಸಹ ಇಂತಹದ್ದನ್ನು ಕಾಣಬಹುದು.

ಕಳೆದ ತಿಂಗಳು ಕೆ.ಆರ್.ನಗರದಿಂದ ಆರಂಭಗೊಂಡ ಕೋಮುಗಲಭೆಗ ಈಸುತ್ತು ಪ್ರತಿವಾರವೂ ರಾಜ್ಯದಲ್ಲಿ ಕನಿಷ್ಟ ಒಂದೆರೆಡು ಕಡೆಗಳಲ್ಲಿ ಸ್ಫೋಟಿಸುತ್ತಿವೆ. ಕೆ.ಆರ್.ನಗರದಲ್ಲಿ ಹುಡುಗ-ಹುಡುಗಿಯರ ಪ್ರೇಮ ನೆಪವಾದರೆ, ಹರಪನಹಳ್ಳಿಯಲ್ಲಿ ಗಣೇಶ, ಬೆಳಗಾವಿಯಲ್ಲಿ ಮಸೀದಿಯ ಮೇಲಿನ ಬರಹವಾದರೆ, ಆಳಂದದಲ್ಲಿ ಮಸೀದಿಯ ಅಸ್ತಿತ್ವವನ್ನೇ ಪ್ರಶ್ನಿಸಿ ನಮಾಜು ನಿಲ್ಲಿಸಬೇಕೆಂಬ ಬೇಡಿಕೆ, ಬಾಬಾಬುಡನ್‌ಗಿರಿಯಲ್ಲಿ ದತ್ತಮಾಲೆ...

ಈಗ ಭಟ್ಕಳದಲ್ಲಿ... ದೇವಸ್ಥಾನವೊಂದರ ಬಾಗಿಲಿನ ಬೀಗಕ್ಕೆ 'ಹೊಲಸು' ಎರಚಲಾಗಿದೆ ಯೆಂದು, ಅದನ್ನು ಪ್ರತಿಭಟಿಸಿ 'ಹಿಂದೂ ಜಾಗರಣಾ ವೇದಿಕೆ' ಕರೆ ನೀಡಿದ್ದ 'ಬಂದ್' ದಿನದಂದು ಗಲಭೆ. ಬಸ್-ಕಾರುಗಳಿಗೆ ಕಲ್ಲೇಟು, ಆ ಗುಂಪಿನಿಂದ-ಅಂಗಡಿಗಳ ಮೇಲೆ ಕಲ್ಲುತೂರಾಟ ಎರಡು ಕೋಮಿಗೆ ಸೇರಿದ ಜನರ ನಡುವೆ ಬಡಿದಾಟ.. ಲಾಠಿ ಚಾರ್ಜು... ಕರ್ಫ್ಯೂ ಹೇರಿಕೆ.... ಹಿಂಸೆ ಮರುಕಳಿಸುವ ಆತಂಕ... ಜನಜೀವನ ಅಸ್ತವ್ಯಸ್ತ... ಹೀಗಾಗಿ ಇಂತಹ ಗಲಭೆಗಳು ಸೃಷ್ಟಿಗೊಳ್ಳಲೆಂದೇ ನಿಖರ ಲೆಕ್ಕಾಚಾರ ಹಾಕಿಯೇ ಹೊಲಸು ಎರಚುವಂತಹ ಘಟನೆಗಳೂ ಸಹ ನಡೆಯುತ್ತವೆ. ಈ ದುಷ್ಕೃತ್ಯದ ಬಗ್ಗೆ ತನಿಖೆ ನಡೆದು, ಆರೋಪಿಗಳನ್ನು ಪತ್ತೆ ಹಚ್ಚಿ ಅಗತ್ಯ ಕಾನೂನಾತ್ಮಕ ಕ್ರಮ ವಹಿಸಿದರೆ ಸಾಕಾದೀತು. ಯಾರೋ ತಲೆತಿರುಕರು, ಸಮಾಜ ಘಾತುಕರು ಅಂತಹ ಹೇಯ ಕೃತ್ಯ ಎಸಗಿದಾಗ ಅಂತಹವರ ದುರುದ್ದೇಶಗಳನ್ನು ಅರಿತು, ಆ ಸಂಚು ವಿಫಲಗೊಳಿಸಲು ಎಲ್ಲಾ ನಾಗರೀಕರು ಶಾಂತಿ-ಸಂಯಮದಿಂದ ವರ್ತಿಸುವುದು ಅಗತ್ಯ. ಸರ್ಕಾರದ ಇಲಾಖೆಗಳೂ ಕ್ರಮವಹಿಸಲು ಇದರಿಂದ ಸಹಕಾರಿ. ಆದರೆ ಅದನ್ನು ಬಿಟ್ಟು ಕಾನೂನು-ಕೈಗೆ ತೆಗೆದುಕೊಂಡು ಶಾಂತಿ ಸೌಹಾರ್ದತೆ ಹಾಳು ಮಾಡುವ ಗಲಭೆಗಳನ್ನು ಹುಟ್ಟು ಹಾಕುವುದು, ನಿರಪರಾಧಿಗಳ ಆಸ್ತಿ, ಜೀವಗಳ ಮೇಲೆ ಆಕ್ರಮಣ ಗೈಯ್ಯುವುದರ ಉದ್ದೇಶವೇನು? ಇಂತಹದ್ದೇನಾದರೂ ಘಟಿಸಲಿ ಎಂದು ಕಾಯುತ್ತಿರುವಂತಿರುತ್ತದೆ ಕೋಮುವಾದಿಗಳ ಪ್ರತಿಭಟನೆ ಹೆಸರಿನ ಪೂರ್ವಯೋಜಿತ ಪ್ರತಿಕ್ರಿಯೆಗಳು!

ಕರ್ನಾಟಕವನ್ನು ಕೋಮುದ್ವೇಷದ ಕಿಚ್ಚಿನಲ್ಲಿ ಬೇಯಿಸಲು, ಅದರ ಮೂಲಕ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ತೀವ್ರವಾದ ಧಾಳಿಯನ್ನು ಸಂಘ ಪರಿವಾರ-ಬಿಜೆಪಿಗಳು ಪುನರಾರಂಭಿಸಿರುವ ಹಿನ್ನೆಲೆಯಲ್ಲೇ ಈ ಸರಣಿ ಗಲಭೆಗಳನ್ನು ನೋಡಬೇಕು. ಇಂತಹ ಗಲಭೆಗಳು ಕೇವಲ ಅಲ್ಪಸಂಖ್ಯಾತರ ಮೇಲಿನ ಧಾಳಿಯಿಂದಷ್ಟೇ ನೋಡುವುದು, ಅಥವಾ ಅದಕ್ಕೆ ಅಲ್ಪಸಂಖ್ಯಾತರು ಅಥವಾ ಅದರಲ್ಲಿರುವ ಮೂಲಭೂತವಾದಿಗಳು ಪ್ರತಿಕ್ರಿಯೆ ನೀಡುವುದು, ಪರಸ್ಪರರ ಜಗಳವೆಂದಷ್ಟೇ ನೋಡುವುದು ತಪ್ಪಾಗುತ್ತದೆ. ಈಕೋಮು ಗಲಭೆಗಳು ದೇಶದ ಧರ್ಮನಿರಪೇಕ್ಷತೆ, ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ, ಆರ್ಥಿಕ ಸ್ವಾವಲಂಬನೆ-ಸ್ವಾತಂತ್ರ್ಯದ ಮೇಲಿನ ಧಾಳಿಗಳು. ಇದನ್ನು ಎಲ್ಲರೂ ಖಂಡಿಸಲೇಬೇಕು.

ಅಲ್ಪಸಂಖ್ಯಾತರದ್ದೋ ಅಥವಾ ಬಹುಸಂಖ್ಯಾತರ ಹೆಸರಿನದ್ದೋ ಯಾವುದೋ ಬಣ್ಣದ ಕೋಮುವಾದವೂ ಅಪಾಯಕಾರಿಯೆಂಬುದನ್ನು ಭಟ್ಕಳದ ಜನತೆ - ಮನಗಾಣಬೇಕು. ಅಂತಹ ಶಕ್ತಿಗಳ ಪ್ರಚಾರಕ್ಕೆ ತಲೆದೂಗದೇ ತಿರಸ್ಕರಿಸಬೇಕು. ಭಟ್ಕಳದಲ್ಲಿ ಶಾಂತಿ, ಸಾಮರಸ್ಯ ಕಾಪಾಡಲು, ಜನತೆ ಮುಂದಾಗಬೇಕು. ಸರ್ಕಾರವು ಗಲಭೆ ಎಬ್ಬಿಸುವ ಶಕ್ತಿಗಳನ್ನು ನಿಷ್ಠುರವಾಗಿ ದಮನಿಸಲು ಕ್ರಮ ಕೈಗೊಳ್ಳಬೇಕು. ಹೊಲಸು ಎರಚಿದ ಘಟನೆಯ ಬಗ್ಗೆ ಆಳವಾದ ತನಿಖೆ ನಡೆಸಿ ಕಠಿಣ ಕ್ರಮ ಜರುಗಿಸಬೇಕು.

ವಿರಾಜಪೇಟೆ:

ರಸ್ತೆ ಭ್ರಷ್ಟಾಚಾರ - ವಿನೂತನ ಪ್ರತಿಭಟನೆ

ನಬಾರ್ಡ್‌ನಿಂದ 56 ಲಕ್ಷ ಸಾಲಪಡೆದು ಮಾಡಿದ ರಸ್ತೆ ಕೇವಲ ಒಂದೇ ತಿಂಗಳಲ್ಲೇ ಕಿತ್ತುಗಬ್ಬೆದ್ದು ಹೋಗಿದ್ದನ್ನು ಜನ ಪ್ರತಿಭಟಿಸಿದರು. ಭ್ರಷ್ಟಾಚಾರದ ತನಿಖೆ ಆಗಬೇಕೆಂದರು. ಸಚಿವರಿಂದ ಭರವಸೆ ಪಡೆದರು. ವಿರಾಜಪೇಟೆಯ ಹೆಗ್ಗಳ ಗ್ರಾಮಸ್ಥರ ವಿನೂತನ ಹೋರಾಟದ ವರದಿಯಿಲ್ಲಿದೆ.

ರಸ್ತೆಯಲ್ಲಿ ಗುಳಿಬಿದ್ದ ಹೊಂಡಗಳಲ್ಲಿ ಬಾಳೆಗಿಡ ನೆಟ್ಟರು. 'ಮೃತ' ರಸ್ತೆಯ ಸಮಾಧಿ ಮಾಡಿ ಸಮಾಧಿ ಮುಂದೆ ಕೇವಲ ಒಂದು ತಿಂಗಳು ಬದುಕಿದ್ದ ಬಗ್ಗೆ ಫಲಕ ನೆಟ್ಟು ಪ್ರತಿಭಟಿಸಿದರು. ಶಾಲಾ ಮಕ್ಕಳು ಮಹಿಳೆಯರೊಳಗೊಂಡ ಚಳುವಳಿಕಾರರಿಂದ ರಸ್ತೆತಡೆ ಮೆರವಣಿಗೆ, ತಹಶೀಲ್ದಾರ್ ಕಛೇರಿ ಮತ್ತಿಗೆ ಇದು ರಸ್ತೆಯೊಂದರ ದುರಸ್ತಿಗಾಗಿ ನಡೆಸಿದ ವಿನೂತನ ಪ್ರತಿಭಟನೆಗಳು.

ಕೊಡಗು ಜಿಲ್ಲೆಯ ವಿರಾಜಪೇಟೆ ಸಮೀಪದ ಹೆಗ್ಗಳ-ತೋರ ರಸ್ತೆ ದುರಸ್ತಿಯಾಗಿ ಕೇವಲ ಒಂದೇ ತಿಂಗಳಲ್ಲಿ ಹಿಂದಿನ ಸ್ಥಿತಿಗೆ ಮರಳಿದಾಗ ಜನ ರೊಚ್ಚಿಗೆದ್ದು ಪ್ರತಿಭಟನೆ ನಡೆಸಿದ ರೀತಿ ಇದು.

ಭ್ರಷ್ಟಾಚಾರ - ಅಂದರ್‌ಬಾಹರ್

ನಬಾರ್ಡ್‌ನಿಂದ 56 ಲಕ್ಷ ಸಾಲ ಪಡೆದು ಈ ರಸ್ತೆಯನ್ನು ದುರಸ್ತಿಗೊಳಿಸಲಾಯಿತು. ಜನಪ್ರತಿನಿಧಿಗಳು, ಅಧಿಕಾರಿಗಳು, ಗುತ್ತಿಗೆದಾರರ ಭ್ರಷ್ಟ ಕೂಟ ಈ ಮಂಜೂರಾದ ಹಣದ ಬಹುಪಾಲನ್ನು ತಿಂದುನೀರು ಕುಡಿದರು. ಎಲ್ಲಾ ಸರ್ಕಾರಿ ಕಾಮಗಾರಿಗಳ ಹಾಗೆ ರಸ್ತೆ ದುರಸ್ತಿಯಲ್ಲೂ ಕೂಡ 'ಅಂದರ್ ಬಾಹರ್' ಚಟುವಟಿಕೆ ನಡೆಯುತ್ತದೆ. ಗುತ್ತಿಗೆ ಕೆಲಸ ತನಗೆ ಸಿಗುವಂತಾಗಲು ಜನಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ ಶೇಕಡಾ ಇಂತಿಷ್ಟು ಹಣ ಎಂದು ಅಲಿಖಿತ ನಿಗದಿಯಾಗಿದೆ. ಕೆಲಸ ಸರಿಯಾಗಿ ನಡೆದ ಬಗ್ಗೆ ಪ್ರಮಾಣ ಪತ್ರ ಪಡೆಯಲು, ಹಣ ಮಂಜೂರು ಮಾಡಿಸಿಕೊಳ್ಳಲು ಗುತ್ತಿಗೆ ಹಣದಲ್ಲಿ ಶೇಕಡಾ ಹತ್ತರಷ್ಟು ಹಣ ಅಧಿಕಾರಿಗಳ ಕಿಸೆಗೆ ಹೋಗುತ್ತದೆ ಎನ್ನುವ ಮಾತಿದೆ. ಉಳಿದ ಹಣದಲ್ಲಿ ಬಹುಪಾಲು ಹಣವನ್ನು ಗುತ್ತಿಗೆದಾರರು ನುಂಗಿ ತೇಪೆ ಕೆಲಸ ಮಾಡುವುದು ರೂಢಿ. ರಸ್ತೆ ದುರಸ್ತಿಯಾದ ನಿಗದಿತ ಸಮಯದೊಳಗೆ ಅದು ಹಾಳಾದರೆ ದುರಸ್ತಿ ಮಾಡುವ ಖರ್ಚು ಮತ್ತು ಜವಾಬ್ದಾರಿ ಕಾಮಗಾರಿಯ ಹೊಣೆ ಹೊತ್ತು ಕೊಂಡವರದ್ದೇ ಆಗಿದ್ದರೂ ಈ ಭ್ರಷ್ಟ ವ್ಯವಸ್ಥೆಯಲ್ಲಿ ಅದು ಸಾಧ್ಯವಾಗಿಲ್ಲ, ಜನರ ಪ್ರತಿಭಟನಾಶಕ್ತಿ ಇಲ್ಲದ ಕಡೆ ಇದು ರಾಜರೋಷವಾಗಿ ನಡೆಯುತ್ತದೆ.

ಹೋರಾಟದತ್ತ

ಇಂತಹ ಭ್ರಷ್ಟಾಚಾರ ಎಲ್ಲೆಡೆಯೂ ನಡೆಯುತ್ತದಾದರೂ ಈ ಬಾರಿ ಹೆಗ್ಗಳ, ತೋರ ಭಾಗದ ಜನರು ಸುಮ್ಮನಾಗಲಿಲ್ಲ. ಹೋರಾಟ ನಡೆಸಲು ಮುಂದಾದರು 56 ಲಕ್ಷ ರೂ ಹಣ ಖರ್ಚು ಮಾಡಿ ಕೇವಲ ಒಂದೇ ತಿಂಗಳಲ್ಲಿ ರಸ್ತೆ ಹಾಳಾದ ಬಗ್ಗೆ ಜನರಲ್ಲಿ ರೋಷ ಹುಟ್ಟಿತು. ಹೆಗ್ಗಳ, ತೋರ, ಬೂದಿಹಾಳ ಪ್ರದೇಶಗಳ ಜನರು ಸಂಘಟಿತರಾಗಿ ಸಮಿತಿಯೊಂದನ್ನು ರಚಿಸಿಕೊಂಡು ಅದರ ನೇತೃತ್ವದಲ್ಲಿ ಹೋರಾಡಲು ಮುಂದಾದರು. ಸಿಪಿಐ(ಎಂ) ಮುಖಂಡರಾದ ಪೀಟರ್ ಲೋಬೋರವರನ್ನು ತಮ್ಮೊಟ್ಟಿಗೆ ಸೇರಿಸಿಕೊಂಡರು.

ಹೆಗ್ಗಳ - ತೋರ ರಸ್ತೆ ದುರಸ್ತಿ ನೆಪದಲ್ಲಿ ಹಣ ನುಂಗಿದ ಕದೀಮರೆ ವಿರಾಜಪೇಟೆಯಲ್ಲಿ ಕಾಂಕ್ರಿಟ್ ರಸ್ತೆ ನಿರ್ಮಿಸುವ ಕಾಮಗಾರಿಯನ್ನು 25 ಲಕ್ಷ ಹಣ ನುಂಗಿದ್ದರು. ನಬಾರ್ಡ್‌ನಿಂದ ಪಡೆದ ಈ 56 ಲಕ್ಷ ಹಣ ದುರುಪಯೋಗವಾಗಿ ಸಾಲ ಜನಸಾಮಾನ್ಯರ ತಲೆಯ ಮೇಲೆ ಬಿದ್ದಿದೆ. ಬಡ್ಡಿಸಹಿತ ಸಾಲ ಮರುಪಾವತಿಸಲು ಸರ್ಕಾರ ಜನರಿಂದ ವಸೂಲಿ ಮಾಡಿದ ತೆರಿಗೆ ಹಣವನ್ನು ಕೊಡಬೇಕು. ಆದರೆ, ಇಲ್ಲಿನ ಜನರು ಈ ಭ್ರಷ್ಟರ ಕೂಟದ ಆಟಕ್ಕೆ ತಡೆ ಹಾಕಲು ಮುಂದಾಗಿದ್ದಾರೆ.

ಹೋರಾಟ ಮುರಿಯಲು ಯತ್ನ

ಹೋರಾಟವನ್ನು ಹತ್ತಿಕ್ಕಲು ಬಿದ್ದಪ್ಪ, ರಘುನಾಯಕರಂತಹ ಕಾಂಗ್ರೆಸ್ ನಾಯಕರು ಮತ್ತು ಭ್ರಷ್ಟ ಕೂಟದ ಬೆಂಬಲಿಗರು ಸಮಿತಿಯ ಮುಖಂಡರ ಮೇಲೆ ಅಪಪ್ರಚಾರ ಮಾಡತೊಡಗಿದರು. 30ರಿಂದ 40 ಸಾವಿರ ಹಣ ಸಂಗ್ರಹ ಮಾಡಿ ಜನರನ್ನು ವಂಚಿಸಲಾಗಿದೆ. ಬಲವಂತವಾಗಿ ಹಣ ಸಂಗ್ರಹಿಸಲಾಗುತ್ತದೆ ಎಂದು ಸುಳ್ಳು ಸುದ್ದಿ ಹಬ್ಬಿಸಿದರು. ಜನತೆ ಇದನ್ನು ನಂಬದಿದ್ದಾಗ ಪೀಟರ್ ಲೋಬೊ ಸ್ಥಳೀಯರಲ್ಲ, ಅವರನ್ನು ಮುಖಂಡರನ್ನಾಗಿ ಒಪ್ಪಿಕೊಳ್ಳಬಾರದೆಂದು ಜನತೆಗೆ ಕರೆ ನೀಡಿದರು. ಜನತೆಯ ಐಕ್ಯತೆ ಮುರಿಯಲು ತಮಗೆ ತಿಳಿದ ಎಲ್ಲಾ ಕುತಂತ್ರಗಳನ್ನು ಮಾಡಿದರು. ಯಾವುದಕ್ಕೂ ಕಿವಿ ಕೊಡದೆ ಹೋರಾಟಕ್ಕೆ ಬೆಂಬಲವಾಗಿ ನಿಂತರು ಜನ.

ರಸ್ತೆ ತಡೆ

ಸಮಿತಿಯು ತನ್ನ ತೀರ್ಮಾನದಂತೆ ಅಕ್ಟೋಬರ್ 9ರಂದು ಬೆಳಿಗ್ಗೆ 6 ಗಂಟೆಯಿಂದಲೇ ರಸ್ತೆ ತಡೆ ಪ್ರಾರಂಭಿಸಿತು. ಪಕ್ಷಬೇದವಿಲ್ಲದೆ ಸ್ತ್ರೀಯರು, ಸಮವಸ್ತ್ರ ಧರಿಸಿದ ಶಾಲಾ ಮಕ್ಕಳೂ ಸೇರಿದಂತೆ 500ಕ್ಕೂ ಅಧಿಕ ಜನರು ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ರಸ್ತೆಯಲ್ಲಿ ಕುಳಿತರು. ಮಧ್ಯಾಹ್ನ 2 ಗಂಟೆಯಾದರೂ ಯಾವ ಜನಪ್ರತಿನಿಧಿಯೂ ಚಳುವಳಿಗಾರರ ಬಳಿ ಬರಲಿಲ್ಲ. ಸ್ಥಳೀಯ ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯತ ಪ್ರತಿನಿಧಿಗಳೆಲ್ಲರೂ ಕಾಂಗ್ರೆಸಿಗರೇ. ಇವರ್‍ಯಾರೂ ಬರಲಿಲ್ಲ.

ಈ ಕ್ಷೇತ್ರದ ಸಚಿವೆ ಸುಮಾವಸಂತ್ ಪೇಟೆಯಲ್ಲೇ ಇದ್ದರೂ ಸ್ಥಳಕ್ಕೆ ಬರಲಿಲ್ಲ.

ರಸ್ತೆಯ ಸಮಾಧಿ!

ರಸ್ತೆಯ ದುರಸ್ತಿಗಾಗಿ ಒತ್ತಾಯಿಸಿ, ಭ್ರಷ್ಟ ಅಧಿಕಾರಿಗಳ, ಗುತ್ತಿಗೆದಾರರ, ಜನಪ್ರತಿನಿಧಿಗಳ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸಿ ನಡೆಸಿದ ಪ್ರತಿಭಟನೆ ವಿನೂತನವಾದುದು. ಸಾರ್ವಜನಿಕರ ಗಮನ ಸೆಳೆಯಲು ಸರ್ಕಾರದ ಮೇಲೆ ಒತ್ತಡ ಹೇರಲು ಹೋರಾಟ ಸಮಿತಿಯ ಕಾರ್ಯಕರ್ತರು ರಸ್ತೆಯ ನಡುವೆ ಸಮಾದಿಯೊಂದನ್ನು ಕಟ್ಟಿದರು. ಸಮಾಧಿಗೆ ಸಂಪ್ರದಾಯದಂತೆ ಪೂಜೆ ಸಲ್ಲಿಸಿ "ರಸ್ತೆಯ ಜನನ 14-6-2002, ಮರಣ 1-7-2002 ಎಂದು ಬರೆದ ಫಲಕ ಹಿಡಿದು ಪ್ರತಿಭಟನೆ ನಡೆಸಿದರು.

ಮತ್ತೊಂದು ದಿನ ರಸ್ತೆ ನಡುವೆ ಬಿದ್ದ ಹೊಂಡಗಳಲ್ಲಿ ಬಾಳೆಗಿಡ ನೆಟ್ಟು ಅದಕ್ಕೆ ನೀರೆರೆದು ಪ್ರತಿಭಟಿಸಿದರು. ಸರ್ಕಾರ ಇದಾವುದಕ್ಕೂ ಮಣೆಯದಾದಾಗ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲು ನಿರ್ಧರಿಸಿ ಸಾರ್ವಜನಿಕರಿಂದ ಹಣ ಸಂಗ್ರಹಿಸಲು ಮುಂದಾದರು.



ರಸ್ತೆ ಶವ

ಕರ್ನಾಟಕ ಈ ವಾರ

ಬುರುಡೆ ಬಾಬಾನ 'ಭೂಸಮಾಧಿ'

ಅತೀ ಧಾರ್ಮಿಕತೆಯ ಮನೋಭಾವ, ಮೌಢ್ಯ ಹಾಗೂ ಅಂಧಶ್ರದ್ಧೆಗಳ ಹೆಚ್ಚಳವು ಜನರನ್ನು ಪರಲೋಕ ಸುಖದ ಭ್ರಮಾಧೀನತೆಯಲ್ಲಿ ತೇಲಿಸುತ್ತಿರುವಾಗ, ಬುರುಡೆ ಬಾಬಾಗಳು ಅತೀಂದ್ರೀಯ ಶಕ್ತಿಯ ಸಾಧಕರಂತೆ ಪೋಜು ನೀಡಿ ದೇವ ಮಾನವರಾಗುತ್ತಿದ್ದಾರೆ! ಇಂತಹವರ ವರಸೆಗಳು ಹೈಟೆಕ್ ಸಿಟಿಯಲ್ಲಿಯೇ ಹೆಚ್ಚು ಅನಾವರಣಗೊಳ್ಳುತ್ತಿವೆ ಎಂಬುದು ವಿಶೇಷ ಸಂಗತಿ.

ಬೆಂಗಳೂರಿನ ಎಂತಹದ್ದೋ ಒಂದು ಬಡಾವಣೆಯಲ್ಲಿ ಛತ್ರದ ಉದ್ಘಾಟನೆ!

ಅಂದು ಮಹಾನವಮಿ. ಆ ಸಂಜೆಯಿಂದ ಮರುದಿನದ ಸಂಜೆಯವರೆಗೂ ಭೂಸಮಾಧಿಯಾದ ಬಾಬಾ ಅಲ್ಲಿಂದ ಎದ್ದದ್ದು ಮರುದಿನದ ಸಂಜೆ. ಅಂದರೆ 24 ಗಂಟೆ ಭೂಮಿ ಒಳಗೆ! ಅದರಿಂದ ಎದ್ದುಬಂದ ಬಾಬಾ ಸಮಾಧಿಯಾದದ್ದು ಬದುಕಿ ಉಳಿದು ಹೊರಬಂದಿದ್ದು ಯೋಗ ಸಿದ್ಧಿಯಿಂದವಂತೆ. ಅತೀತ ಶಕ್ತಿ ಇರುವುದರಿಂದಲೇ! ಹೀಗೆ ನೆಲ ಹೊಕ್ಕಿದ್ದು ವಿಶ್ವಶಾಂತಿ - ಸೌಹಾರ್ದತೆಗಾಗಿಯಂತೆ. (ಎಷ್ಟು ಸರಳ ಸೂತ್ರವಿದೆಯಲ್ಲ!) ಬೆಂಗಳೂರಿನ ರೂಪಸೇನಾ ಅಗ್ರಹಾರದ ಶಿವಸಾಯಿಬಾಬ(ವೈಟ್‌ಫೀಲ್ಡ್ ಸಾಯಿಬಾಬನ ಕೂದಲು-ಬಟ್ಟೆ ಅನುಕರಣೆ) ಹೀಗೆ ರೈಲು ಬಿಟ್ಟಿದ್ದೇ .... ಭಕ್ತರು ಜಯಕಾರ ಹಾಕಿದ್ದೇ...

ಅಲ್ಪಸ್ವಲ್ಪ ತಿಳಿದವರೂ ಭೂ ಸಮಾಧಿಯಾಗಿ ಬಾಬಾ ಹೇಗೆ ಬದುಕಿಬಂದ? ಮನುಷ್ಯರು ಅತಿ ಅಗತ್ಯವಿರುವ ಆಮ್ಲಜನಕ-ಗಾಳಿ ಸಿಗದಿರುವಾಗ ಹೇಗೆ? ಯೋಗದಿಂದ ಸಾಧ್ಯವಾಗಿದೆ ಎಂಬ ವಿಶ್ಲೇಷಣೆ ಕೆಲವರನ್ನು ತಣ್ಣಗಾಗಿಸಿರಬಹುದು. ಆದರೆ ವೈಜ್ಞಾನಿಕ ದೃಷ್ಟಿಕೋನ ಚಿಂತಕರನ್ನು ಖಂಡಿತ ಅಲ್ಲ. ಇಂತಹ ಬುರುಡೆ ಬಾಬಾಗಳ ಬಣ್ಣ ಬಿಚ್ಚಿಡುವುದರಲ್ಲಿ (ಫಿಲಿಫೈನ್ಸ್‌ನ ದೈವಸಂಭೂತ ವೈದ್ಯರನ್ನು ಹೊರ ಹಾಕುವಲ್ಲಿ) ಖ್ಯಾತವಾಗಿರುವ ಭಾರತ ಜ್ಞಾನ ವಿಜ್ಞಾನ ಸಮಿತಿ, ವಿಜ್ಞಾನ ವೇದಿಕೆಯ ಮಂಡ್ಯ ಜಿಲ್ಲೆಯ ವಿಚಾರವಾದಿ ಗೆಳೆಯರು ಅದೊಂದು ಕೇವಲ ಸಾಮಾನ್ಯ ಚಮತ್ಕಾರವೆಂಬುದನ್ನು ಬಟ್ಟ ಬಯಲಿಗಿಟ್ಟರು. ಖುದ್ದಾಗಿ ಸಾವಿರಾರು ಜನ ಎದುರು ಯಾವುದೇ ಹಾಂ, ಹ್ರೀಂ ಇಲ್ಲದೇ ಯುವಕ ರಮೇಶ್ ಮಣ್ಣಿನ ಕುಳಿ ಪ್ರವೇಶಿಸಿ, ಇದ್ದು ಜೀವ ಸಮೇತ ಹೊರಬಂದಿದ್ದಾರೆ. ಅವರ ವಿಶ್ಲೇಷಣೆ ಹೀಗಿದೆ 'ಮನುಷ್ಯ 24 ಗಂಟೆ ಉಸಿರಾಡಲು 100 ರಿಂದ 125 ಘನ ಅಡಿಗಳಷ್ಟು ಗಾಳಿ ಸಾಕು. ಆದರೆ ಶಿವ ಸಾಯಿಬಾಬ ಮಲಗಿದ್ದು 9.59.5 ಉದ್ದ-ಅಗಲದ ಗುಂಡಿಯಲ್ಲಿ. ಅದರಲ್ಲಿ ಕನಿಷ್ಟವೆಂದರೂ 857.75 ಘನ ಅಡಿ ಸ್ಥಳಾವಕಾಶವಿದ್ದು ಯಥೇಚ್ಛವಾಗಿ (700 ಘನ ಅಡಿಗಳಷ್ಟು) ಗಾಳಿ ಸಿಗುತ್ತದೆ. ಉಸಿರಾಡಲು ಬೇಕಾದಷ್ಟು ಗಾಳಿ, ಕುಡಿಯಲು ನೀರು ಸಿಗುವಾಗ ಇನ್ನೇನು ತೊಂದರೆ?' ಎನ್ನುತ್ತಾರೆ ಅವರು. ಅವರದ್ದೊಂದು ಸವಾಲು "ಬಾಬಾನಲ್ಲಿ ಯೋಗ ಶಕ್ತಿ ಇದ್ದಿದ್ದರೆ ಮಲಗಲು ಸಾಧ್ಯವಾಗುವಷ್ಟು ಮಾತ್ರದ ಗಾಜಿನ ತೊಟ್ಟಿಯಲ್ಲಿ ಮಲಗಿ, ಮಣ್ಣಿನಲ್ಲಿ ಹೂತು ಬಳಿಕ ಹೊರಬರಲಿ" ಎಂಬುದು. ಬಾಬಾ ಇದುವರೆಗೂ ಈ ಆಹ್ವಾನವನ್ನು ಸ್ವೀಕರಿಸಿಲ್ಲ, ತುಟಿಬಿಚ್ಚಿಲ್ಲ. ದೈವಿಸಂಭೂತರನ್ನು ಹೀಗೆ ಪ್ರಶ್ನಿಸುವುದೇ? ಎಂದು ಹುಬ್ಬೇರಿಸುತ್ತಿದ್ದಾರೆ ಆತನ ಗಟ್ಟಿ ಭಕ್ತರು! ವೈಚಾರಿಕತೆಯೊಂದಿಗೆ ಮುಖಾಮುಖಿಯಾಗಲು ಮೌಢ್ಯತೆಗೆ ಎಂದಾದರೂ ಸಾಧ್ಯವೇ? ಅದು ಬೆರಳೆತ್ತಿದರೆ ಬೆನ್ನು ತೋರಿಸಿ ಓಡುತ್ತದೆ.



ಬುರುಡೆ ಬಯಲುಗೊಳಿಸುತ್ತಿರುವ ವಿಜ್ಞಾನ ಕಾರ್ಯಕರ್ತರು

ಪಾಕಿಸ್ತಾನದ ಬಿರುಕುಬಿಟ್ಟ ಫಲಿತಾಂಶ

ಜನರಲ್ ಮುಷರಫ್‌ರವರ ರೀತಿಯ 'ಮಾರ್ಗದರ್ಶಿತ ಪ್ರಜಾಪ್ರಭುತ್ವ' ದಡಿ ಪಾಕಿಸ್ತಾನ ರಾಷ್ಟ್ರೀಯ ಹಾಗೂ ಪ್ರಾಂತೀಯ ಶಾಸನಸಭೆಗಳಿಗೆ ಅಕ್ಟೋಬರ್ 10 ರಂದು ಚುನಾವಣೆ ನಡೆದಿದೆ. ನಿರೀಕ್ಷೆಯಂತೆ ಅತಂತ್ರ ಶಾಸನಸಭೆಗೆ ಫಲಿತಾಂಶಗಳು ಪಾಕಿಸ್ತಾನವನ್ನು ದೂಡಿವೆ. ರಾಷ್ಟ್ರೀಯ ಅಸೆಂಬ್ಲಿಯ 272 ಸ್ಥಾನಗಳಲ್ಲಿ 78 ಅನ್ನು ಸದ್ಯದ ಆಡಳಿತ ಪರರ ಮುಸ್ಲೀಂ ಲೀಗ್(QA) ಗಳಿಸಿದ್ದರೆ, ಬೆನಜಿರ್ ಭುಟ್ಟೋರವರ ಪಾಕಿಸ್ತಾನ ಪೀಪಲ್ಸ್ ಪಾರ್ಟಿ 62 ಸ್ಥಾನಗಳನ್ನು ಗಳಿಸಿದೆ. ಫಲಿತಾಂಶಗಳ ಗಮನಾರ್ಹ ಅಂಶವೆಂದರೆ ಪಕ್ಷಗಳ ಇಸ್ಲಾಮಿಕ್ ಮೈತ್ರಿಕೂಟವಾದ ಮೆಜಲೀಸ್ ಇ ಮುತಾಹಿದಾ ಅಮಲ್ (MMA) 50 ಸ್ಥಾಗಳನ್ನು ಪಡೆದು ವ್ಯಾಪಕ ಬೆಳವಣಿಗೆ ಸಾಧಿಸಿರುವುದು.

ಇತ್ತೀಚೆಗೆ ಪಾಕಿಸ್ತಾನದಲ್ಲಿ ನಡೆದ ಚುನಾವಣೆಗಳ ಫಲಿತಾಂಶ ಭಾರತ ಮತ್ತು ದಕ್ಷಿಣ ಏಶಿಯಾ ಪ್ರದೇಶದಲ್ಲಿ ತಳಮಳ ಹುಟ್ಟುಹಾಕಿದ್ದು, ಗಂಭೀರ ಪರಿಣಾಮ ಉಂಟು ಮಾಡಲಿವೆ. ಸಾಮ್ರಾಜ್ಯಶಾಹಿ ನುಸುಳುವಿಕೆ ಹಾಗೂ ಧಾರ್ಮಿಕ ಪ್ರತ್ಯೇಕತಾವಾದದ ಬೆಳವಣಿಗೆ ಎರಡೂ ಸೇರಿ ಸೃಷ್ಟಿಸುವ ಸ್ಫೋಟಕ ಸನ್ನಿವೇಶದ ಕುರಿತ ಲೇಖನವಿಲ್ಲಿ

ಪಾಕಿಸ್ತಾನದ ಉತ್ತರ ಪಶ್ಚಿಮ ಗಡಿಪ್ರಾಂತವಾದ ಬಲೂಚ್‌ಸ್ಥಾನ್ ಪ್ರಾಂತೀಯ ಅಸೆಂಬ್ಲಿಯಲ್ಲಿ MMA ಬಹುಮತ ಪಡೆದಿದ್ದು ನಾಯಕತ್ವ ನೀಡುವ ಗುಂಪಾಗಿದೆ. ಈ ಪ್ರಾಂತಗಳು ಅಫ್ಘಾನಿಸ್ತಾನದ ಗಡಿ ಭಾಗಗಳಾಗಿವೆ. ತಾಲಿಬಾನದ ಹಿತೈಷಿ ಹಾಗೂ ಪ್ರಾಯೋಜಕರಾದ ಜಮಾತ್- ಉಲ್- ಇಸ್ಲಾಮಿ(JUI) ಅಂತಹ ಪಕ್ಷಗಳಲ್ಲೂ ಸಹ MMA ಒಳಗೊಂಡಿದೆ. ಪರಿಣಾಮ ತಾಲಿಬಾನ್ ಪರ ಮೈತ್ರಿಕೂಟವು ಉತ್ತಮ ಪಶ್ಚಿಮ ಗಡಿ ಪ್ರಾಂತದಲ್ಲಿ ಪ್ರಾಂತೀಯ ಸರ್ಕಾರವನ್ನು ನಡೆಸಲಿದೆ. ತಮ್ಮ ದೇಶದಿಂದ ಅಮೆರಿಕಾದ ಪಡೆಗಳು ಹಾಗೂ ನೆಲೆಗಳು ವಾಪಸ್ಸಾಗಬೇಕೆಂದು ಈಗಾಗಲೇ MMA ಆಗ್ರಹಿಸಿದೆ. ಕೆಲವು ಧಾರ್ಮಿಕ ಪಕ್ಷಗಳು ಸಮ್ಮಿಶ್ರ ಸರ್ಕಾರವನ್ನು ಸೇರದಿದ್ದರೂ ಸಹ ತಮ್ಮ ಪ್ರಭಾವನ್ನಂತೂ ಬೀರಲಿದೆ. ತಾಲಿಬಾನ್ ಹಾಗೂ ಅಲ್ಖೈದಾ ಗುಂಪುಗಳು ಶರಣು ಪಡೆದಿರುವ ಗಡಿ ಪ್ರಾಂತ್ಯದಲ್ಲಿ ಮೂಲಭೂತವಾದಿ ಸರ್ಕಾರವೊಂದನ್ನು ಅಮೆರಿಕಾವೇ ಎದುರಿಸಬೇಕಿದೆ.

ಅಮೆರಿಕಾದೊಂದಿಗೆ ಸಹಯೋಗ ನೀಡುವ ಹಾಗೂ ಅದರ ಭಯೋತ್ಪಾದಕತೆ ವಿರುದ್ಧ ಜಾಗತಿಕ ಸಮರಕ್ಕೆ ಸೇರ್ಪಡೆಯಾಗುವ ಅಧ್ಯಕ್ಷ ಮುಷರಫ್ ನೀತಿಯು ಪರಿಣಾಮವಾಗಿ ತಾಲಿಬಾನ್ ಪರ ಶಕ್ತಿಗಳನ್ನು ಮೂಲೆಗುಂಪಾಗಿಸುವ ಬದಲು ಅಂತಹ ಶಕ್ತಿಗಳ ಪರ ಧಾರ್ಮಿಕ ಪಕ್ಷಗಳು ಈಹಿಂದಿಗಿಂತಲೂ ಪಾಕಿಸ್ತಾನದಲ್ಲಿ ಇಂದೂ ಪ್ರಭಾವಶಾಲಿಯಾಗುತ್ತಿದೆ. ಈ ಹಿಂದೆ ನಗಣ್ಯವಾಗಿದ್ದ ಅಂತಹ ಪಕ್ಷಗಳ ಚುನಾವಣಾ ಶಕ್ತಿಯುಈ ಚುನಾವಣೆ ಮೂಲಕ ಪ್ರಾಬಲ್ಯ ಪಡೆದಿದೆ. ಮುಖ್ಯವಾಹಿನಿಯ ಪ್ರಮುಖ ಪಕ್ಷಗಳನ್ನು ಕಡೆಗಣಿಸುವ ಆಡಳಿತವ್ಯವಸ್ಥೆಯ ತಂತ್ರಗಾರಿಕೆಯು ಧಾರ್ಮಿಕ ಮೂಲಭೂತವಾದಿ ಶಕ್ತಿಗಳು ಪ್ರಾಬಲ್ಯ ಪಡೆಯುವಂತೆ ಮಾಡಿದೆ.

ಸದ್ಯ ಸರ್ಕಾರ ರಚಿಸಲು ವಿವಿಧ ಪಕ್ಷಗಳು ಕಸರತ್ತು ನಡೆಸಿವೆ. ಆದರೆ ಪ್ರಸ್ತುತ ವ್ಯವಸ್ಥೆಯಲ್ಲಿ ಅಧ್ಯಕ್ಷರೇ ನಿರ್ಣಾಯಕ ಪಾತ್ರ ವಹಿಸುವರು. ಮುಷರಫ್‌ರ ಸಮಸ್ಯೆಯನ್ನು ಚುನಾವಣಾ ಫಲಿತಾಂಶಗಳು ಮತ್ತಷ್ಟು ಜಟಿಲಗೊಳಿಸಿವೆ. ಅಮೆರಿಕಾದೊಂದಿಗಿನ ಅವರ ಭಾಂದವ್ಯ ಅವರನ್ನು ಹೆಚ್ಚೆಚ್ಚು ಕುಖ್ಯಾತಿಗೊಳಿಸಿದೆ. **ಈ ಹಿಂದಿನ ಜನಮತ ಗಣನೆ ಹಾಗೂ ಪ್ರಸ್ತುತ ಚುನಾವಣೆಗಳು ಸ್ಥಾನ ಬಲಪಡಿಸುವ ಬದಲು, ಅವರ ಪ್ರತಿಪಾದನೆಯ ಪ್ರಜಾಸತ್ತಾತ್ಮಕ ಆಡಳಿತ ನಿಯಂತ್ರಿಸಲು ಸಾಧ್ಯವಾಗಂತಹ ಶಕ್ತಿಗಳನ್ನು ಹೊರಚಿಮ್ಮಿವೆ.**

ಪಾಕಿಸ್ತಾನದ ಚುನಾವಣಾ ಫಲಿತಾಂಶಗಳು



ಚರ್ಚೆಯಲ್ಲಿ ಎಂಎಂಎ ಪಕ್ಷದ ಮುಖಂಡರು

ದಕ್ಷಿಣ ಏಷಿಯಾಕ್ಕೆ ಒಟ್ಟಾರೆಯಾಗಿ ಭಾರತಕ್ಕೆ ಪ್ರಮುಖವಾಗಿ ಗಾಬರಿ ಉಂಟು ಪಡಿಸುವಂತಹದಾಗಿದೆ. ಉಪಖಂಡದಲ್ಲಿನ ಇಂತಹ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಪಾಕಿಸ್ತಾನದಲ್ಲಿನ ಧಾರ್ಮಿಕ ಪಕ್ಷಗಳ ಯಶಸ್ಸನ್ನು ನೋಡಬೇಕಿದೆ. ಕಳೆದ ಚುನಾವಣೆ ನಂತರ ಮೊಟ್ಟಮೊದಲ ಬಾರಿಗೆ ಬಾಂಗ್ಲಾ ದೇಶದಲ್ಲಿ ಜಮಾತ್ ಇ ಇಸ್ಲಾಮಿಯ ಪ್ರತಿನಿಧಿಗಳು ಸಚಿವ ಸಂಪುಟದಲ್ಲಿ ಇದ್ದಾರೆ. ಆರ್.ಎಸ್.ಎಸ್. ಹಾಗೂ ಶಿವಸೇನೆಯಂತಹ ಸಂಘಟನೆಗಳು ಭಾರತದ ಕೇಂದ್ರ ಸರ್ಕಾರದ ಭಾಗವಾಗಿವೆ. ಇದರೊಟ್ಟಿಗೆ ದಕ್ಷಿಣ ಏಶಿಯಾದ ಎಲ್ಲಾ ದೇಶಗಳಲ್ಲಿಯೂ ಅಮೆರಿಕಾ **ಸಾಮ್ರಾಜ್ಯಶಾಹಿಯು ಪಾತ್ರ ಹೆಚ್ಚುತ್ತಿದೆ. ಸಾಮ್ರಾಜ್ಯಶಾಹಿ ನುಸುಳುವಿಕೆ ಹಾಗೂ ಧಾರ್ಮಿಕ ಪ್ರತ್ಯೇಕತಾವಾದದ ಬೆಳವಣಿಗೆ ಎರಡು ಸೇರಿ ಇಡೀ ಪ್ರದೇಶದಲ್ಲಿನ ತಳಮಳ ಹಾಗೂ ಹೆಚ್ಚುತ್ತಿರುವ ಉದ್ವೇಗಕ್ಕೆ ಶಕ್ತಿ ನೀಡುವ ಸ್ಫೋಟಕ ಮಿಶ್ರಣವಾಗಿದೆ.** ರಾಷ್ಟ್ರಗಳ ಸಾರ್ವಭೌಮತೆಯನ್ನು ಕಡೆಗಣಿಸಿ ಈ ಪ್ರದೇಶದಲ್ಲಿನ ದೇಶಗಳ ರಾಷ್ಟ್ರೀಯ ಐಕ್ಯತೆಯನ್ನು ಸಹ ಈ ಅಂಶಗಳು ತೊಂದರೆಗೊಳಪಡಿಸಲಿದೆ.

ಪಾಕಿಸ್ತಾನದಲ್ಲಿನ ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿನ ಬಿರುಕನ್ನು ಕುರಿತು ವಾಜಪೇಯಿ ಸರ್ಕಾರ ತನ್ನೊಳಗೆಲ್ಲವೂ ಸೊಗಸಾಗಿದೆ ಎಂದು ಬೀಗಬೇಕಿಲ್ಲ. ಅಮೆರಿಕನ್ ಸಾಮ್ರಾಜ್ಯಶಾಹಿಯ ಮುಂದೆ ಮಂಡಿಯೂರುವ ಹಾಗೂ ಕೋಮುವಾದವನ್ನು ತೀವ್ರಗೊಳಿಸುವ ತನ್ನ ಸರ್ಕಾರದ ನೀತಿಗಳು ಭಾರತದೊಳಗೂ ಸಹ ಗಂಭೀರ ಸಮಸ್ಯೆಗಳನ್ನು ಸೃಷ್ಟಿಸುತ್ತಿವೆ.

ಭಾರತ ಪಾಕ್ ಸಂಬಂಧಗಳು- ಮುಂದಿನ ಹೆಜ್ಜೆ

ಕಳೆದ ವರ್ಷದ ಡಿಸೆಂಬರ್‌ನಲ್ಲಿ ನಡೆದ ಸಂಸತ್ತಿನ ಮೇಲಿನ ದಾಳಿಯ ನಂತರ ಭಾರತ-ಪಾಕ್ ಗಡಿಯಲ್ಲಿ ಪೂರ್ಣ ಪ್ರಮಾಣದ ಸೈನ್ಯ ಮತ್ತು ಸಶಸ್ತ್ರಗಳನ್ನು ಅಣಿನೆರೆಸಲಾಗಿತ್ತು. ಕಳೆದ 10 ತಿಂಗಳ ಕಾಲ 10 ಲಕ್ಷ ಸೈನಿಕರು ಅಂತರಾಷ್ಟ್ರೀಯ ಗಡಿ ಮತ್ತು ಜಮ್ಮು ಮತ್ತು ಕಾಶ್ಮೀರದ ನಿಯಂತ್ರಣ ರೇಖೆಯ ಬಳಿ ಜಮಾವಣೆಗೊಂಡಿತ್ತು. ದೊಡ್ಡ ಪ್ರಮಾಣದ ಸಂಪನ್ಮೂಲಗಳನ್ನು ವ್ಯಯಿಸಲಾಗಿದೆ. ಒಂದು ಅಂದಾಜಿನ ಪ್ರಕಾರ ಸುಮಾರು 7000 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಹಳೆದ ವಾರ ಬಿಜೆಪಿ ನೇತೃತ್ವದ ಸರ್ಕಾರ ಮುಂಚೂಣಿ ನೆಲೆಗಳಿಂದ ಸೈನ್ಯವನ್ನು ಹಿಂದೆ ಪಡೆಯುವ ಘೋಷಣೆ ಮಾಡಿದೆ.



ಎರಡೂ ಕಡೆ ಸೈನ್ಯದ ಜಮಾವಣೆ, ಎರಡೂ ದೇಶಗಳ ನಡುವಿನ ಉದ್ವಿಘ್ನನೆಯ ತೀವ್ರ ಹೆಚ್ಚಳವನ್ನು ಪ್ರದರ್ಶಿಸಿದೆ. ಈ ನಡುವೆ ಮೊದಲಿಗೆ ಕಾಲುಚಾಕ್ ಸೈನ್ಯ ನೆಲೆ ಮೇಲೆ ನಂತರ ಜಮ್ಮುವಿನ ಖಾಸಿಂ ನಗರದಲ್ಲಿ ಎರಡು ಗಂಭೀರ ಭಯೋತ್ಪಾದಕ ದಾಳಿಗಳು ನಡೆದಿವೆ. ಇದು ಪರಿಸ್ಥಿತಿಯನ್ನು ಮತ್ತಷ್ಟು ಉದ್ವಿಘ್ನಗೊಳಿಸಿ ಗಡಿಯಲ್ಲಿ ಸೈನ್ಯದ ಜಮಾವಣೆ ಭಯೋತ್ಪಾದಕ ದಾಳಿಗಳನ್ನು ನಿಯಂತ್ರಿಸಲು ಸಾಧ್ಯವೇ ಎಂಬ ಪ್ರಶ್ನೆಯನ್ನು ಎತ್ತಿವೆ? 6 ತಿಂಗಳ ನಂತರ ಈ ಸೈನ್ಯದ ಜಮಾವಣೆ ಜಮ್ಮು ಮತ್ತು ಕಾಶ್ಮೀರ ಚುನಾವಣೆ ಮುಗಿಯುವವರೆಗೆ ಇರಬೇಕೆಂದು ಸರ್ಕಾರ ವಾದಿಸಲಾರಂಭಿಸಿ ಅದನ್ನೆ ಜಾರಿಮಾಡಿದ್ದಾರೆ.

ಪಾಕ್ ಹೈಕಮಿಷನರ್‌ರನ್ನು ವಾಪಸ್ಸು ಕಳುಹಿಸುವ ಮೂಲಕ ರಾಜತಾಂತ್ರಿಕ ಪ್ರಾತಿನಿಧ್ಯವನ್ನು ಕಡಿತಗೊಳಿಸಿ, ಎರಡೂ ದೇಶಗಳ ನಡುವಿನ ಸಾರಿಗೆ ಸಂಪರ್ಕ ರದ್ದುಗೊಳಿಸುವ ಜೊತೆಯಲ್ಲಿಯೇ ಈ ಸೈನ್ಯ ಜಮಾವಣೆ ನಡೆಯಿತು. ಭಾರತ-ಪಾಕ್ ನಡುವಿನ ಸಂಬಂಧದಲ್ಲಿ ಅಮೇರಿಕಾಗೆ ನೇರವಾಗಿ ಮಧ್ಯಪ್ರವೇಶಿಸಲು ಅನುವುಗೊಳಿಸಲು ವಾಜಪೇಯಿ ಸರ್ಕಾರ ಈ ಕ್ರಮ ಕೈಗೊಂಡಿತು. ಅದರಂತೆ ಕಾಲಿನ್ ಪಾವೆಲ್‌ರಿಂದ ಹಿಡಿದು, ಅಮೇರಿಕಾದ ರಾಜತಾಂತ್ರಿಕರು ಎರಡೂ ದೇಶಗಳ ರಾಜಧಾನಿಗಳಿಗೆ ಧಾವಿಸಿದರು. ಪರಿಣಾಮವಾಗಿ ಅತ್ತ ಮುಷರಫ್ ಇತ್ತ ವಾಜಪೇಯಿ ಆಡಳಿತಗಳ ಸಮ್ಮತಿಯೊಂದಿಗೆ ಭಾರತ-ಪಾಕ್ ಸಂಬಂಧಗಳ ನಡುವಿನ ಏಕಮಾತ್ರ ಸಂಧಾನಕಾರರಾಗಿ ಅಮೇರಿಕಾ ಹೊರಹೊಮ್ಮಿದೆ.

ಭಯೋತ್ಪಾದಕ- ಮೂಲಭೂತವಾದಿ ಗುಂಪುಗಳ ಚಟುವಟಿಕೆಗಳ ನಿಯಂತ್ರಿಸಲು ಪಾಕಿಸ್ತಾನದ ಮೇಲೆ ಅಂತರಾಷ್ಟ್ರೀಯ ಒತ್ತಡ ತೀವ್ರಗೊಳಿಸಲು ಅಗತ್ಯವಿರುವ ರಾಜತಾಂತ್ರಿಕ -ರಾಜಕೀಯ ಒತ್ತಡ ನಿರ್ಮಿಸುವ, ಜಮ್ಮು ಮತ್ತು ಕಾಶ್ಮೀರದಲ್ಲಿನ ಭಯೋತ್ಪಾದಕ ಸಂಘಟನೆ-ಚಟುವಟಿಕೆಗಳ ಧಮನಕ್ಕೆ ಸಮರ್ಪಕ ಭದ್ರತಾ ಕ್ರಮ ಹಾಗೂ ಕಟ್ಟೆಚ್ಚರ, ಮತ್ತು ಜಮ್ಮು ಮತ್ತು ಕಾಶ್ಮೀರದಲ್ಲಿನ ಎಲ್ಲಾ ಸಂಬಂಧಿತ ಗುಂಪುಗಳೊಂದಿಗೆ ಸ್ವಾಯತ್ತತೆ ಒದಗಿಸುವ ಆಧಾರದಲ್ಲಿ ಮಾತುಕತೆ ಪ್ರಾರಂಭಿಸುವಂತಹ ಈ ಮೇಲಿನ ಮೂರು ರೀತಿಯ ದೃಷ್ಟಿಕೋನದ ಕ್ರಮ ವಹಿಸುವುದು ಸರಿಯಾದ ವಿಧಾನವಾಗಲಿತ್ತು. ಇಂತಹ ವಿಧಾನಗಳಿಂದ ವಾಜಪೇಯಿ ಸರ್ಕಾರ ವಿಮುಖವಾಗೇ ಇದೆ.

ಜಮ್ಮು-ಕಾಶ್ಮೀರ ಚುನಾವಣೆ ಮುಗಿದಿವೆ, ಸೈನ್ಯವನ್ನು ಗಡಿಯಿಂದ ಹಿಂತೆಗೆದ ನಂತರ ಪಾಕ್‌ನೊಂದಿಗಿನ ಮಾತುಕತೆಯಂತಹ ಸೈನಿಕ ಕಾರ್ಯಾಚರಣೆ ಎತ್ತರ ಕ್ರಮಗಳನ್ನು ಸರ್ಕಾರ ನಿರಾಕರಿಸಲಾಗದು. ಸೂಕ್ತ ಹಂತದ ಮಾತುಕತೆ ಪಾಕ್‌ನೊಂದಿಗೆ ಪ್ರಾರಂಭವಾಗಬೇಕು. ಜೆಹಾದಿ ಗುಂಪುಗಳು ಪಾಕ್‌ನಲ್ಲಿ ಕ್ರಿಯಾಶೀಲವಾಗಿರುವ, ಅಫಘಾನಿಸ್ತಾನದಲ್ಲಿ ತಾಲಿಬಾನ್ ಪತನದ ನಂತರ ಪಾಕ್ ಇಂದೂ ಭಯೋತ್ಪಾದಕ - ಮೂಲಭೂತವಾದಿ ಶಕ್ತಿಗಳ ನೆಲೆಯಾಗಿರುವ ಹಾಗೂ ಇತ್ತೀಚಿನ ಚುನಾವಣೆಯಲ್ಲಿ ಧಾರ್ಮಿಕ ಮೂಲಭೂತವಾದಿ ಪಕ್ಷಗಳ ಯಶಸ್ಸುಗೊಳಿಸಿರುವ ಅಂಶಗಳ ಗಮನದಲ್ಲಿರಿಸಿ, ಈ ಮಾತುಕತೆ ನಡೆಸಬೇಕು.

ಭಯೋತ್ಪಾದಕ ಕುಕೃತ್ಯಗಳನ್ನ ಮಾತುಕತೆ ನಿರಾಕರಣೆಗೆ ಕಾರಣ ನೀಡದೆ, 'ಗಡಿಯಾಚೆಗೆ ಭಯೋತ್ಪಾದಕ ಕೃತ್ಯಗಳಿಗೆ ಕುಮ್ಮಕ್ಕು ನೀಡುವ ಅಂಶಗಳನ್ನು ಒಳಗೊಂಡ ದ್ವಿಪಕ್ಷೀಯ ಮಾತುಕತೆ ಪ್ರಕ್ರಿಯೆ ಆರಂಭಿಸಬೇಕು. ಪಾಕ್‌ನೊಂದಿಗಿನ ಮಾತುಕತೆ ಜೊತೆಯಲ್ಲೆ ಜಮ್ಮು ಮತ್ತು ಕಾಶ್ಮೀರದಲ್ಲಿನ ರಾಜಕೀಯ ಶಕ್ತಿಗಳ ಜೊತೆಯಲ್ಲೂ ಸಹಾ ಮಾತುಕತೆಯನ್ನು ಗರಿಷ್ಠ ಸ್ವಾಯತ್ತತೆ ನೀಡುವ ಆಧಾರದಲ್ಲಿ ವಾಜಪೇಯಿ ಸರ್ಕಾರ ಆರಂಭಿಸಬೇಕು.

ಭಯೋತ್ಪಾದಕ ವಿರೋಧಿ ಹಾಗೂ ಭಾವೋದ್ರೇಕದ ಪೋಸ್ ನೀಡುವ ಮೂಲಕ ರಾಜಕೀಯ ಲಾಭಗಳಿಸುವ ಸಲುವಾಗಿ, ಈ 10 ತಿಂಗಳುಗಳ ಕಾಲದ ಗಡಿಯಲ್ಲಿನ ಸೈನ್ಯೆಯ ಜಮಾವಣೆಯನ್ನು ಬಳಸಲು ಬಿಜೆಪಿ ಯತ್ನಿಸಿತು. ಉತ್ತರ ಪ್ರದೇಶ ಹಾಗೂ ಜಮ್ಮು ಮತ್ತು ಕಾಶ್ಮೀರದಲ್ಲಿನ ಬಿಜೆಪಿಯ ಸೋಲಿಂದಲಾದರು, ಇಂತಹ ಸೈನಿಕ ಪೋಸ್‌ಗಳು ಫಲಿಸವು ಎಂಬುದನ್ನು ಬಿಜೆಪಿ ಅರಿಯಬೇಕು.

ಗಡಿಯಲ್ಲಿನ ಸೈನಿಕ ಜಮಾವಣೆ ಭಾರತದ ವಿರುದ್ಧ ನಡೆಸಲಾಗುತ್ತಿರುವ ಭಯೋತ್ಪಾದಕ ಹಿಂಸೆಯ ಮೂಲಭೂತ ಪ್ರಶ್ನೆಯಿಂದ ಗಮನವನ್ನು ಬೇರೆಡೆಗೆ ಸೆಳೆಯಲಿದೆ. ಎರಡು ಅಣ್ವಸ್ತ್ರ ರಾಷ್ಟ್ರಗಳ ನಡುವಿನ ಸೈನಿಕ ಪೈಪೋಟಿ ವಿಶ್ವದ ಪ್ರಾಥಮಿಕ ಕಳಕಳಿಯಾಗಲಿದ್ದು, ಪಾಕ್ ನೆಲೆ ಆಧಾರಿತ ಗುಂಪುಗಳು ಪ್ರಾಯೋಜಿತ ಭಯೋತ್ಪಾಧಕ ಹಿಂಸೆ ಅಂತರಾಷ್ಟ್ರೀಯ ಗಮನದ ಕೇಂದ್ರವಾಗದು. ಎಂದು ಸಿಪಿಐ(ಎಂ) ಪಕ್ಷವು ಪ್ರಾರಂಭದಲ್ಲೆ ಎಚ್ಚರಿಸಿತ್ತು.

ಬಿಜೆಪಿ ದುರಾಡಳಿತ

ವಾಜಪೇಯಿ ನೇತೃತ್ವದ ಬಿಜೆಪಿ ಕೂಟದ ಸರ್ಕಾರ ಮೂರು ವರುಷಗಳನ್ನು ಪೂರೈಸಿದೆ. ಇದಕ್ಕೆ ಪ್ರಚಾರ ಕೊಡುವ ಧೈರ್ಯವನ್ನು ಸರ್ಕಾರ ತೋರಿಸಿಲ್ಲ. ವಂಚಕ-ದೇಶದ್ರೋಹಿ ಸರ್ಕಾರದ ಮೂರುವರುಷಗಳ ದುರಾಡಳಿತವನ್ನು ಕಾಮ್ರೇಡ್ ಸುರ್ಜಿತ್ ಬಯಲಿಗಿಟ್ಟಿದ್ದಾರೆ. ಎನ್‌ಡಿಎ ಮಿತ್ರರನ್ನು ಎಚ್ಚರಿಸಿದ್ದಾರೆ.

ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳು ಈಗ ಚೈತನ್ಯವನ್ನೆಲ್ಲಾ ಕಳಕೊಂಡಂತಿದೆ. ವಾಜಪೇಯಿ ನೇತೃತ್ವದ ಸರಕಾರದ ಮೂರನೇ ಆವೃತ್ತಿ (ಅಂದರೆ 1996 ರ ಆಭಾಸ, 1998 ರಲ್ಲಿ ಅಧಿಕಾರ ಗ್ರಹಿಸಿ 1999 ರಲ್ಲಿ ಕಳಂಕ ಹೊತ್ತು ಹೊರನಡೆದ ಸರ್ಕಾರವನ್ನು ಬಿಟ್ಟು) ಇತ್ತೀಚೆಗೆ ಮೂರು ವರ್ಷ ಪೂರೈಸಿದರೂ ಅದನ್ನು ಮೇಲುದನಿಯಲ್ಲೇ ಆಚರಿಸಿತು. ಈ ಸಂದರ್ಭದಲ್ಲಿ ಜನ್ಮ ದಿನಾಚರಣೆಯ ಸಂಭ್ರಮವಿರಲಿಲ್ಲ; ಪರಸ್ಪರ ಬೆನ್ನು ತಟ್ಟುವವರೂ ಹೆಚ್ಚಿರಲಿಲ್ಲ, ಇನ್ನು ಜನಸಮೂಹಗಳಿಗಂತೂ ಇಂತಹ ಒಂದು ಸಂದರ್ಭ ಬಂದದ್ದೂ, ಹೋದದ್ದು ಗಮನಕ್ಕೇ ಬರಲಿಲ್ಲ.

ನಿಜ ಸಂಗತಿಯೆಂದರೆ ಈ ಘಟನೆಗೆ(ಬಹುಶಃ ಅದನ್ನು ಒಂದು ಘಟನೆಯೆನ್ನುವಂತೆಯೂ ಇಲ್ಲ) ಪ್ರಚಾರ ಕೊಡುವ ಧೈರ್ಯವೂ ಸರಕಾರಕ್ಕಿಲ್ಲ. ತನ್ನ ಸಮಾಚಾರ ಮತ್ತು ಪ್ರಸಾರ ಇಲಾಖೆಯಿಂದ ಕೆಲವು ಕಿರುಪುಸ್ತಕಗಳನ್ನು ಹೊರಡಿಸುವಷ್ಟಕ್ಕೇ ಅದು ತೃಪ್ತವಾಗಿದೆ.

ನಿರರ್ಥಕ ಮಾತುಗಳು

ಇದೇನು ಹೊಸ ಕಸರತ್ತಲ್ಲ. ಏಕೆಂದರೆ ಎಲ್ಲಾ ಸರಕಾರಗಳೂ ಇದನ್ನು ಆಗಾಗ ಮಾಡುತ್ತಲೇ ಬಂದಿವೆ. ಆದರೆ ಇನ್ನೊಂದು ಸಂಗತಿಯೂ ಇದೆ. ಏನೆಂದರೆ ಎಷ್ಟೇ ಅಬ್ಬರದ ಪ್ರಚಾರ ನಡೆಸಿದರೂ ಒಂದು ಸರಕಾರ ಜನತೆಯ ವಿಶ್ವಾಸ ಕಳಕೊಂಡಾಗ ಅದನ್ನು ವ್ಯಕ್ತಪಡಿಸುವುದನ್ನು ತಡೆಯಲು ಸಾಧ್ಯವಾಗುವುದಿಲ್ಲ. ಜಮ್ಮು-ಕಾಶ್ಮೀರ ಚುನಾವಣೆಗಳಲ್ಲಿ ಕಂಡಂತೆ ತಮ್ಮ ಆಳರಸರ ಮೇಲೆ ಮುಯ್ಯಿ ತೀರಿಸಬೇಕಾದರೆ ಜನತೆ ಯಾವ ಮಟ್ಟಕ್ಕೂ ಹೋಗಲು ಸಿದ್ಧ. ಆಕಾಶವಾಣಿ, ದೂರದರ್ಶನಗಳ ಹೊಗಳಿಕೆ-ಧರ್ಮೋಪದೇಶಗಳು ಹಾಗೂ ಸಮಾಚಾರ ಮತ್ತು ಪ್ರಸಾರ ಇಲಾಖೆಯ ಅಧಿಕಾರಿಗಳು ಹೇಗೇಗೋ ಕಷ್ಟಪಟ್ಟು ತಂದ ಕಿರುಪುಸ್ತಕಗಳು ಇತಿಹಾಸದ ಇಂತಹ ಕ್ಷಣಗಳಲ್ಲಿ ಸಂಪೂರ್ಣ ನಿರರ್ಥಕವಾಗುತ್ತವೆ.

ಇಂತಹ ಸಂದರ್ಭಗಳ ಸಂಪ್ರದಾಯದಂತೆ ಪ್ರಧಾನ ಮಂತ್ರಿಗಳು ಒಂದು 'ಸಂದೇಶ' ಕಳಿಸಿದರು. ಸಮಾಚಾರ ಮತ್ತು ಪ್ರಸಾರ ಇಲಾಖೆಯ ಎಲ್ಲಾ ಪುಸ್ತಿಕೆಗಳಲ್ಲೂ ಇವು ಕಾಣಸಿಗುತ್ತವೆ. ಆದರೆ ಈ ಸಂದೇಶ ಯಾರಿಗೆ ಎಂದೇ ಅರ್ಥವಾಗುತ್ತಿಲ್ಲ. ಜನತೆಗೊ, ಎನ್‌ಡಿಎ ದ ಕಸರತ್ತುಗಾರರಿಗೋ ಅಥವಾ ಇತ್ತೀಚಿನ ದಿನಗಳಲ್ಲಿ ರಾತ್ರಿ-ಹಗಲು ಶ್ರಮಿಸಿರಬಹುದಾದ ಸಮಾಚಾರ ಮತ್ತು ಪ್ರಸಾರ ಇಲಾಖೆಯ ಅಧಿಕಾರಿಗಳಿಗೋ ಗೊತ್ತಿಲ್ಲ. ಉಪ ಪ್ರಧಾನಮಂತ್ರಿ, ಸಮಾಚಾರ ಮತ್ತು ಪ್ರಸಾರ ಮಂತ್ರಿ ಹಾಗೂ ಆಕೆಯ ಕಿರಿಯ ಮಂತ್ರಿಯ ಸಂದೇಶಗಳ ಬಗ್ಗೆಯೂ ಇದನ್ನೇ ಹೇಳಬೇಕಾಗುತ್ತದೆ.

ಇವುಗಳಲ್ಲಿ ಪ್ರಧಾನಮಂತ್ರಿಗಳ ಸಂದೇಶ ಎಲ್ಲಕ್ಕಿಂತ ದೊಡ್ಡದಷ್ಟೇ ಅಲ್ಲ, ಅದು ಅಬ್ಬರದ ಮಾತುಗಳಿಂದ ತುಂಬಿಹೋಗಿದೆ. "ಕಳೆದ ಮೂರು ವರ್ಷಗಳಲ್ಲಿ ನಮ್ಮ ಸರ್ಕಾರ ಜನತೆಗೆ ನೀಡಿದ ಹಲವು ಭರವಸೆಗಳನ್ನು ಈಡೇರಿಸಿದೆ" ಎಂದಿದ್ದಾರೆ ಅವರು. ತನ್ನ ಸರ್ಕಾರದ ಸಾಧನೆಗಳು ಮತ್ತು ಪ್ರಯತ್ನಗಳು ಅಂತರ್‌ರಾಷ್ಟ್ರೀಯ ಸಮುದಾಯದಲ್ಲಿ ಭಾರತದ ಪ್ರತಿಷ್ಠೆಯನ್ನೂ ಹೆಚ್ಚಿಸಿದೆ ಎಂದು ಅವರು ಹೇಳಿಕೊಂಡಿದ್ದಾರೆ. ಅಷ್ಟೇ ಅಲ್ಲ, ಪಾಪ(!) ಬಿಜೆಪಿ ಸದಾಕಾಲ ಅಧಿಕಾರದಲ್ಲಿ ಇರುತ್ತದೆ ಎಂದು ನಂಬಿಕೊಂಡು ಪ್ರಧಾನಮಂತ್ರಿಗಳು 'ಭಾರತದ ಸರ್ವತೋಮುಖ ಪ್ರಗತಿಯನ್ನು ತ್ವರಿತಗೊಳಿಸಿ, 2020 ರ ವೇಳೆಗೆ ಭಾರತವನ್ನು ಒಂದು ಅಭಿವೃದ್ಧಿ ಹೊಂದಿದ ದೇಶವಾಗಿ ಮಾಡುವ ನಮ್ಮ ಪ್ರೀತಿಯ ಗುರಿಯನ್ನು ಈಡೇರಿಸುತ್ತ ಒಂದು ದೃಢ ಅಡಿಗಲ್ಲು ಹಾಕಲು ನಾವು ದೃಢ ನಿರ್ಧಾರ ಮಾಡಿದ್ದೇವೆ'" ಎಂದು ಹೇಳಿದ್ದಾರೆ.

ಆದರೆ ನಿಜವಾದ ರುಚಿ ತಿಳಿಯುವುದು ತಿಂದಾಗ ಮಾತ್ರ, ಅಲ್ಲವೇ? ಪ್ರಧಾನಮಂತ್ರಿಗಳಿಗೆ ಯಾವುದು ಇಷ್ಟವೋ ಅದನ್ನು ಹೇಳಿಕೊಳ್ಳುವ ಪ್ರಜಾಪ್ರಭುತ್ವ ಹಕ್ಕು ಪ್ರಧಾನಮಂತ್ರಿಗಳಿಗಿದ್ದಂತೆ ಜನಗಳಿಗೂ ಅಷ್ಟೇ ಇಂತಹ ಮಾತುಗಳ ಬಗ್ಗೆ, ತಮ್ಮ ಆಳರಸರ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಲೂ ಅಷ್ಟೇ ತೂಕದ ಪ್ರಜಾಪ್ರಭುತ್ವ ಹಕ್ಕೂ ಇದೆಯಲ್ಲವೇ?

ವಂಚಕ ಭರವಸೆ

ಹಲವು ಭರವಸೆಗಳನ್ನು ಈಡೇರಿಸಿದ್ದೇವೆ ಎಂಬ ಮಾತನ್ನೇ ತಗೊಳ್ಳಿ. ಒಬ್ಬ ಬೆಪ್ಪು ತಕ್ಕಡಿ ಕೂಡಾ ಇದನ್ನು ನಂಬುತ್ತಾನೆಯೇ ಎಂಬ ಬಗ್ಗೆ ಸಂದೇಹವಿದೆ. ಒಂದೇ ಉದಾಹರಣೆ ತಗೊಳ್ಳಿ. 1999 ರ ಎನ್‌ಡಿಎ ಚುನಾವಣಾ ಪ್ರಣಾಳಿಕೆ ವರ್ಷಕ್ಕೆ ಒಂದು ಲಕ್ಷ ಉದ್ಯೋಗವಕಾಶ ನಿರ್ಮಿಸುವ ವಚನ ಕೊಟ್ಟಿತ್ತು. ಸರ್ಕಾರದ ನಿರುದ್ಯೋಗ ಕುರಿತಾದ ಅಂಕಿ-ಸಂಖ್ಯೆಗಳಲ್ಲಿ ಬಹಳ ನ್ಯೂನ್ಯತೆಗಳಿವೆ. ಆದರೆ ಇಂತಹ ಅಂಕಿ-ಸಂಖ್ಯೆಗಳೂ ಕೂಡಾ ನಿರುದ್ಯೋಗ ಹೆಚ್ಚುತ್ತಿರುವುದನ್ನು ಸೂಚಿಸಿರುವಾಗ ಈ ಭರವಸೆಯ ಅರ್ಥವೇನು? ಈ ಹತ್ತನೇ ಯೋಜನೆ ಮುಂದಿನ ಐದು ವರ್ಷಗಳಲ್ಲಿ 5 ಕೋಟಿ ಉದ್ಯೋಗವಕಾಶಗಳನ್ನು ನಿರ್ಮಿಸುವ ಮಾತನಾಡತ್ತಿದೆ. ಅಂದರೆ ಬಿಜೆಪಿ ಇನ್ನೂ ತನ್ನ ವಂಚನೆಯ ಆಟವನ್ನು ನಿಲ್ಲಿಸಿಲ್ಲ ಎಂಬುದನ್ನು ಇದು ತೋರಿಸುತ್ತದೆ.

ರಾಡಿಯದ್ದ ಆರ್ಥಿಕತೆ

ವಾಸ್ತವವಾಗಿ, ಕಳೆದ ಮೂರು ವರ್ಷಗಳಲ್ಲಂತೂ ನಮ್ಮ ಆರ್ಥಿಕವನ್ನು ಸಂಪೂರ್ಣ ರಾಡಿಯೆಬ್ಬಿಸಲಾಗಿದೆ. ಈ ವಿಷಯ ಸಾಕಷ್ಟು ಚರ್ಚಿಸಿದ್ದೇವೆ. ನಮ್ಮ ಆರ್ಥಿಕತ ಭವಿಷ್ಯವೂ ಭವ್ಯವಾಗಿ ಕಾಣುತ್ತಿಲ್ಲ ಎಂದು ಹೇಳಿದರಷ್ಟೇ ಇಲ್ಲಿ ಸಾಕು.

ಉದಾಹರಣೆಗೆ, 2001-02 ರ ಹಣಕಾಸು ವರ್ಷದಲ್ಲಿ ಒಟ್ಟು ರಾಷ್ಟ್ರೀಯ ಉತ್ಪನ್ನ (ಜಿಡಿಪಿ) ದ ಶೇ. 5.7 ಬೆಳವಣಿಗೆ ಸಾಧಿಸಲಾಗಿದೆ ಎಂದು ಸರ್ಕಾರ ಹೇಳಿಕೊಂಡಿದೆ. ಮೊದಲಿಗೆ ಅದು ಹೇಳಿಕೊಂಡದ್ದು ಶೇ. 6.5. ಆದರೆ ಕೇಂದ್ರ ಅಂಕಿ-ಅಂಶ ಸಂಘಟನೆ (ಸಿಎಸ್‌ಒ) ನಂತರ ಬಿಡುಗಡೆ ಮಾಡಿದ ಅಂಕಿ ಸಂಖ್ಯೆಗಳು ತೋರಿಸಿರುವುದು ಶೇ 4 ಬೆಳವಣಿಗೆ ಮಾತ್ರ. ಈಗ ಶೇ 6 ಸಾಧಿಸಲಾಗುವುದೆಂಬ ಮಾತನ್ನು ಯಾವ ಹಣಕಾಸು ಏಜೆನ್ಸಿಯೂ ನಂಬಲು ಸಿದ್ಧವಿಲ್ಲ. ಐಎಂಎಫ್ ಶೇ 5.5 ಬೆಳವಣಿಗೆಯಿರುತ್ತಯಿದೆಯೆಂದು ಹಿಂದೆ ಹೇಳಿದ್ದನ್ನು ಈಗ ಶೇ 5 ಕ್ಕಿಳಿಸಿದೆ. NCAER ಪ್ರಕಾರ ಈ ಬೆಳವಣಿಗೆ 2002-03 ಹಣಕಾಸು ವರ್ಷದ ಕೊನೆಯಲ್ಲಿ ಕೇವಲ ಶೇ 4.8 ಇರಬಹುದು. ವಿಶ್ವಾ ಅಭಿವೃದ್ಧಿ ಬ್ಯಾಂಕ್ ಮತ್ತು ಸಿಐಎಲ್‌ಐಇ ಈ ದರ ಶೇ 4 ಕ್ಕಿಂತ ಹೆಚ್ಚಾಗಲು ಸಾಧ್ಯ ಎಂಬುದನ್ನು ನಂಬಲು ಸಿದ್ದವಿಲ್ಲ.

ಇದಕ್ಕೆ ಕೊಡುವ ಕಾರಣಗಳು ಸರಳ. ಅವುಗಳಲ್ಲೊಂದು ಬೇಡಿಕೆಯ ಮೇಲೆ ಕಡಿವಾಣ. ಕೆಲವು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಆರ್ಥಿಕ ಹಿಂಜರಿತ ಹಾಗೂ ಬೇರೆ ಕೆಲವರದಲ್ಲಿ ಕುಂಠಿತ ಬೆಳವಣಿಗೆ ನಮ್ಮ ರಫ್ತನ್ನು ತಟ್ಟುತ್ತದೆ. ಆದ್ದರಿಂದ ಸರ್ಕಾರ ಆಂತರಿಕ ಬೇಡಿಕೆಗಳನ್ನು ಹೆಚ್ಚಿಸಲು ಚೈತನ್ಯಪೂರ್ಣ ಕ್ರಮಗಳನ್ನು ಕೈಗೊಳ್ಳದೆ ಶಾಶ್ವತ ಆರ್ಥಿಕ ಅಭಿವೃದ್ಧಿ ಸಾಧ್ಯವಾಗದು ಎಂಬ ನಮ್ಮ ವಾದ ಇನ್ನಷ್ಟು ದೃಢವಾಗುತ್ತಿದೆ.

ಕೃಷಿ ನಾಶ

ಕೃಷಿ ಉತ್ಪಾದನೆಯಲ್ಲಿ ಇಳಿಕೆ ಇನ್ನೊಂದು ಪ್ರಮುಖ ಕಾರಣವೆಂದು ಹೇಳಲಾಗುತ್ತಿದೆ. ಕಮ್ಮಿ ಮಳೆಯಿಂದಾಗಿ ನಮ್ಮ ಮುಂಗಾರು ಬೆಳೆ ಕಮ್ಮಿಯಾಗಲಿದೆ. ದೇಶದ ಹಲವು ಭಾಗಗಳು ಬರ-ಪರಿಸ್ಥಿತಿ ಎದುರಿಸಬೇಕಾಗಹುದು. ಆದರೆ ಹೀಗಾಗಿರುವುದು ಕೇವಲ ನೈಸರ್ಗಿಕ ಕಾರಣಗಳಿಂದಷ್ಟೇ ಅಲ್ಲ. ಸರಕಾರ ನೂರಾರು ಕೃಷಿ ಸರಕುಗಳ ಆಮದನ್ನು ಉದಾರೀಕರಣಗೊಳಿಸಿ ರೈತಾಪಿ ಜನಗಳಿಗೆ ಭಾರೀ ಕೆಡುಕು ಉಂಟು ಮಾಡಿದೆ. ಇದರಿಂದ ಕೃಷಿ ಉತ್ಪನ್ನಗಳ ಬೆಲೆಗಳಲ್ಲಿ ಇಳಿತ, ಜತೆಗೆ ಕೃಷಿ ಬಳಕೆಯ ವಸ್ತುಗಳಲ್ಲಿ ಬೆಲೆಗಳಲ್ಲಿ ಏರಿಕೆ ರೈತಾಪಿ ಜನಗಳನ್ನು ವಿನಾಶದ ಅಂಚಿಗೆ ತಳ್ಳುತ್ತಿದೆ. ದೇಶದ ವಿವಿಧ ಭಾಗಗಳಲ್ಲಿ ಆತ್ಮಹತ್ಯೆಯ ಸರಣಿಗಳು ಇದನ್ನೇ ತೋರಿಸುತ್ತಿವೆ.


ಉದ್ಯೋಗ ಹೀನತೆ - ಕೈಗಾರಿಕಾ ದಿವಾಳಿ

ಅದೇ ವೇಳೆಗೆ, ಇದುವರೆಗೆ ಉದಾರೀಕರಣ ನೀತಿಗಳನ್ನು ಬಲವಾಗಿ ಬೆಂಬಲಿಸುತ್ತಿದ್ದ ಕೆಲವು ತಜ್ಞರು ಕೂಡಾ ಉದ್ಯೋಗಹೀನತೆಯ ಪ್ರಮಾಣ ಮತ್ತಷ್ಟು ಹೆಚ್ಚಲಿದೆಎಂದು ಅಭಿಪ್ರಾಯ ಪಡುತ್ತಿದ್ದಾರೆ. ಕಳೆದ ಕೆಲವು ವರ್ಷಗಳ ಉದ್ಯೋಗ ಹೀನ ಬೆಳವಣಿಗೆಯನ್ನು ನೋಡಿದರೆ ಇದರಲ್ಲಿ ಆಶ್ಚರ್ಯವಿಲ್ಲ. ಕೈಗಾರಿಕಾ ಕ್ಲೋಶರ್‌ಗಳು, ರಿಟ್ರೆಂಚ್‌ಮೆಂಟ್‌ಗಳ ಮೂಲಕ ಇದು ಇನ್ನಷ್ಟು ಉಲ್ಬಣಗೊಳ್ಳಬಹುದಷ್ಟೆ. ಕಾರ್ಮಿಕ ರಂಗದಲ್ಲಿ ಈ ಆಡಳಿತ ತರಲು ಪ್ರಯತ್ನಿಸುತ್ತಿರುವ



'ಸುಧಾರಣೆ'ಗಳು ಮಾಲಕರಿಗೆ ಮನಬಂದಂತೆ ಕಾರ್ಮಿಕರನ್ನು ನೇಮಿಸುವ, ವಜಾ ಮಾಡುವ ಸ್ವಾತಂತ್ರ್ಯ ಕೊಟ್ಟು, ಮನಸ್ಸಿಗೆ ತೋಚಿದಾಗ ಸುಲಭವಾಗಿ ವ್ಯವಹಾರ ಬಿಟ್ಟು ಹೋಗುವ ಅವಕಾಶ ನೀಡಿ ಸನ್ನಿವೇಶವನ್ನು ಇನ್ನಷ್ಟು ಕ್ಲಿಷ್ಟಗೊಳಿಸುತ್ತವೆ.

'ಯೋಜನಾ ನಿಲುವು ಪತ್ರ' ಶೇ 8 ಬೆಳವಣಿಗೆ ದರ ಸಾಧಿಸಲು ಮುಂದಿನ 5 ವರ್ಷಗಳಲ್ಲಿ ಉಳಿತಾಯ ದರ ಜಿಡಿಪಿಯ ಶೇ 26.8 ಇರುತ್ತದೆ, ಮುಂದಿನ ಹತ್ತು ವರ್ಷಗಳಲ್ಲಿ ಶೇ 33 ಇರಬೇಕು ಎಂದಿದೆ. ನಿಜ, ಭಾರತದಂತಹ ದೇಶಕ್ಕೆ ಶೇ 26.8 ಉಳಿತಾಯ ದರ ಸಾಧಿಸುವುದು ದೊಡ್ಡದೇನಲ್ಲ. ಅದನ್ನು ಸುಲಭವಾಗಿ ಸಾಧಿಸಬಹುದು. ಆದರೆ ನಾವು ನಿಜವಾಗಿಯೂ ಅದನ್ನು ಸಾಧಿಸುತ್ತೇವೆಯೇ? ಇದು ಸಾಧ್ಯವಿರುವಂತೆ ಕಾಣುವುದಿಲ್ಲ. ಕಂಪನಿ ವಲಯದಲ್ಲಿ ಉಳಿತಾಯ ಸ್ಥಗಿತಗೊಂಡಿರುವಾಗ, ಸರಕಾರೀ ವಲಯದಲ್ಲಿ ಅದು ಋಣಾತ್ಮಕವಾಗಿರುವಾಗ 22 ರಿಂದ 23 ಶೇ. ದ ನಿರಂತರ ದರವನ್ನು ಉಳಿಸಿಕೊಳ್ಳುವಂತೆ ಮಾಡಿದ್ದು ಗೃಹ ವಲಯದಲ್ಲಿನ ಉಳಿತಾಯ ದರವೇ. ಆದರೂ ನಮ್ಮ ಸರಕಾರ ಒಂದಾದ



ಸಾಟಿಯಾಗದ ಹೊಲಸು ಹಗರಣಗಳು

ಕಳೆದ ಮೂರು ವರ್ಷಗಳಲ್ಲಿ ಹೊರಬಿದ್ದ ಹಗರಣಗಳ ಸಾಲು ಸಾಲು ಆರ್ಥಿಕ ಹೊಲಸನ್ನು ಇನ್ನಷ್ಟು ಉಲ್ಬಣಗೊಳಿಸಿವೆ. ಹಿಂದಿನ ಟೆಲಿಕಾಂ ಮತ್ತು ಇತರ ವಲಯಗಳಲ್ಲಿನ ಹಗರಣಗಳನ್ನು ಬಿಡಿ, ನಂತರದ ಯುಟಿಐ ಹಗರಣ ಕನಿಷ್ಠ ಎರಡು ಕೋಟಿ ಸಣ್ಣ ಹೂಡಿಕೆದಾರರ ಕಣ್ಣಲ್ಲಿ ನೀರು ತರಿಸಿತು. ನಂತರ ಪೆಟ್ರೋಲ್ ಪಂಪ್, ಎಲ್‌ಪಿಜಿ, ಕೇಂದ್ರಗಳ ನೀಡಿಕೆಯಲ್ಲಿ ಒಂದು ಹೊಲಸು ಹಗರಣವನ್ನು ಇಡೀ ದೇಶ ಕಂಡಿತು. ಸಾರ್ವಜನಿಕ ವಲಯದ ಆಸ್ತಿಗಳನ್ನು ಖಾಸಗಿಯವರಿಗೆ ಮೂರು ಕಾಸಿಗೆ ಮಾರಲಾಯಿತು. (ಉದಾ: ಬಾಲ್ಕೋ ಮಾರಾಟ) ಶವಪೆಟ್ಟಿಗೆ ಹಗರಣ ಈ ದೇಶದ ರಕ್ಷಣೆಯೊಂದಿಗೆ ಹೇಗೆ ಚೆಲ್ಲಾಟವಾಡುತ್ತಿದೆ ಎಂಬುದನ್ನು ತೋರಿಸಿತು. ನೇರವಲ್ಲದ ಶಸ್ತ್ರಾಸ್ತ್ರ ವ್ಯವಹಾರಗಳನ್ನು ಸ್ವತಃ ಆಗಿನ ಬಿಜೆಪಿಯ ಅಧ್ಯಕ್ಷ ಮತ್ತು ರಕ್ಷಣಾ ಮಂತ್ರಿ ಶಾಮೀಲಾಗಿದ್ದರು. ಇನ್ನು ಈಗಿನ ಬಿಜೆಪಿ ಅಧ್ಯಕ್ಷ ಆಂಧ್ರಪ್ರದೇಶದಲ್ಲಿ ಶಾಸಕನಾಗಿದ್ದಾಗ ಹರಿಜನ-ಗಿರಿಜನ ಮತ್ತು ಇತರ ಹಿಂದುಗಳ ವಿಭಾಗಗಳಿಗೆಂದು ಇಟ್ಟಿದ್ದ ಭೂಮಿಯನ್ನು ತನಗೆ ಮತ್ತು ತನ್ನ ಸಂಬಂಧಿಕರಿಗೆ ಗಿಟ್ಟಿಸಿಕೊಂಡದ್ದು ಕಂಡುಬಂತು.

ಈಗ ಮುಂಬೈಯಲ್ಲಿ ಸೆಂಟೌರ್ ಹೋಟೆಲಿನ ಕೇಸಿನಲ್ಲಿ ಮುಸುಕಿನ ವ್ಯವಹಾರದ ದೃಶ್ಯ ಬೆಳಕಿಗೆ ಬಂದಿದೆ. ಒಂದು ಅಲ್ಪಾವಧಿಯಲ್ಲೇ ಇಷ್ಟೊಂದು ಹಗರಣಗಳನ್ನು ನಡೆಸಿದ ಹಗರಣಗಳು ಬಿಜೆಪಿ ಕನಿಷ್ಠ ಈ ವಲಯದಲ್ಲಂತೂ 'ಒಂದು ಭಿನ್ನ ಪಕ್ಷ' ಎಂಬುದನ್ನು ಸಂಶಯಕ್ಕೆಡೆಯಿಲ್ಲದಂತೆ ತೋರಿಸಿಕೊಟ್ಟಿವೆ.



ಇಲ್ಲಿಯೇ ತನ್ನ ಆಡಳಿತ ಅಂತರ್ರಾಷ್ಟ್ರೀಯ ವಲಯದಲ್ಲಿ ಭಾರತದ ಸ್ಥಾನಮಾನವನ್ನು ಎತ್ತರಿಸಿದೆ ಎಂದು ವಾಜಪೇಯಿಯವರು ಹೇಳಿಕೊಂಡಿರುವುದನ್ನು ನೋಡಬೇಕು. ಭಾರತ ಮೂರನೇ ಜಗತ್ತಿನ ದೇಶಗಳ ಮುಖಂಡನಾಗಿತ್ತು. ಪ್ರತಿಯೊಂದು ನವವಿಮೋಚನ ದೇಶ, ಪ್ರತಿಯೊಂದು ರಾಷ್ಟ್ರೀಯ ವಿಮೋಚನಾ ಆಂದೋಲನ ಭಾರತ ಬೆಂಬಲದ ಭರವಸೆ ಪಡೆದಿದ್ದ ಸಮಯವೊಂದಿತ್ತು. ಆದರೆ ಈಗ ಅಂತರ್ರಾಷ್ಟ್ರೀಯ ವೇದಿಕೆಗಳಲ್ಲಿ ನಮ್ಮ ದನಿಯೂ ಕೇಳುವುದಿಲ್ಲ. ಬಿಜೆಪಿ ಮುಖಂಡರು ನಾಚಿಕೆಯಿಲ್ಲದೆ ಏನೇ ಹೇಳಿಕೊಳ್ಳಲಿ, ನಮ್ಮ ಪ್ರತಿಷ್ಠೆಯಂತೂ ಈ ಆಡಳಿತದಡಿ ಸಂಪೂರ್ಣವಾಗಿ ತಗ್ಗಿದೆ.

ಜನರ ಪ್ರಹಾರ

ಆದರೆ ಈ ಕೇಸರಿ ಪಡೆ ತನ್ನ ದುಷ್ಕೃತ್ಯಗಳ ಫಲವುಣ್ಣಬೇಕಾದ ದಿನ ಬಹಳ ದೂರವಿಲ್ಲ. ಒಂದಾದ ಮೇಲೊಂದರಂತೆ ರಾಜ್ಯಗಳಲ್ಲಿ ಜನತೆ ಬಿಜೆಪಿ ಮತ್ತು ಅದರ ಮಿತ್ರರನ್ನು ಹೊರಗಟ್ಟುತ್ತಿರುವ ರೀತಿ ಎರಡು ವರ್ಷಗಳ ನಂತರ, ಅಥವಾ ಅದರ ಮೊದಲೇ ಏನಾಗಲಿದೆ ಎಂಬುದರ ಪೂರ್ವ ಸೂಚನೆ ನೀಡಿದೆ. ಬಿಜೆಪಿ ಮುಖಂಡರು ಧೈರ್ಯಗೆಟ್ಟಿದ್ದಾರೆ. ಅವರಲ್ಲಿ ಭಿನ್ನಮತ ಬೆಳೆಯುತ್ತಿದೆ. ವಾಜಪೇಯಿಯವರು ತಮ್ಮ ಸ್ವಂತ ಮತಕ್ಷೇತ್ರ ಲಕ್ನೌದಿಂದ ನಿಗದಿತ ಸಮಯಕ್ಕಿಂತ ಏಳು ಗಂಟೆ ಮೊದಲೇ ಗಂಟಲು ನೋವಿನ ನೆಪ ಹೇಳಿ ಓಡಿ ಹೋಗಬೇಕಾಯಿತು. ಏಕೆಂದರೆ ಭಿನ್ನಮತೀಯರನ್ನು ಎದುರಿಸುವ ಧೈರ್ಯ ಅವರಿಗಿರಲಿಲ್ಲ. ತೊಗಾಡಿಯ ಮತ್ತು ಅವರಂತವರು ತಮ್ಮ ವಿರೋಧಿಗಳ ಬಗ್ಗೆ ಬಳಸುತ್ತಿರುವ ಭಾಷೆ ಅವರ ಕೀಳು ರಾಜಕೀಯ ಸಂಸ್ಕೃತಿಯನ್ನಷ್ಟೇ ಅಲ್ಲ, ಅವರ ತೀವ್ರ ಹತಾಶೆಯನ್ನು ತೋರಿಸುತ್ತದೆ.

ಕೋಮು ವಿಭಜನೆ ಉಲ್ಬಣ

ವಿಹೆಚ್‌ಪಿಯ ಆರ್‌ಎಸ್‌ಎಸ್ ಬೆಂಬಲದಿಂದ ಬಿಜೆಪಿ ಸರ್ಕಾರದ ವಿರುದ್ಧ ಜಗಳಕ್ಕಿಳಿದಿರುವ ರೀತಿಯಲ್ಲಿಯೂ ಈ ಹತಾಶೆ ಎದ್ದು ಕಾಣುತ್ತಿದೆ. ಅಯೋಧ್ಯೆಯಲ್ಲಿ ದೇವಸ್ಥಾನ ನಿರ್ಮಾಣಕ್ಕೆ

ಹತ್ಯಾಕಾಂಡದ ಕೇಸರಿಪಡೆ ರಾಷ್ಟ್ರೀಯ ಐಕ್ಯತೆಗೆ ಬೆದರಿಕೆ

ಆದರೆ ಬಿಜೆಪಿ ಆಡಳಿತ ಒಡ್ಡಿರುವ ಅತಿದೊಡ್ಡ ಬೆದರಿಕೆಯೆಂದರೆ ನಮ್ಮ ರಾಷ್ಟ್ರೀಯ ಐಕ್ಯತೆಗೆ ಬಂದಿರುವ ಕುತ್ತು. ಪರದೆಯ ಹಿಂದೆ ಆರ್‌ಎಸ್‌ಎಸ್ ಹತೋಟಿಯಿರುವ ಬಿಜೆಪಿ ಆಡಳಿತ ಕಳೆದ ನಾಲ್ಕು ವರ್ಷಗಳಲ್ಲಿ ನಡೆದಿರುವ ಅಲ್ಪಸಂಖ್ಯಾತ - ವಿರೋಧಿ ನರಹತ್ಯೆಗಳ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಬಿಜೆಪಿ ದುರಾಡಳಿತದ ಆರಂಭದಲ್ಲಿ ಕೇಸರಿಪಡೆಗಳ ಫ್ಯಾಸಿಸ್ಟ್ ಮಾದರಿ ಧಾಳಿಗಳಿಗೆ ಒಳಗಾದದ್ದು ಸಣ್ಣ ಕ್ರೈಸ್ತ ಸಮುದಾಯ. ಇತ್ತೀಚೆಗೆ ಗುಜರಾತ್ ಸ್ವತಂತ್ರ ಭಾರತದಲ್ಲೇ ಅತೀ ದೀರ್ಘವಾದ, ಅತ್ಯಂತ ಅಮಾನುಷ ಮುಸ್ಲಿಂ ವಿರೋಧಿ ಹತ್ಯಾಕಾಂಡವನ್ನು ಕಂಡಿತು. ಅಷ್ಟೇ ಅಲ್ಲ, ಈ ಹತ್ಯಾಕಾಂಡವನ್ನು ಸಂಘಟಿಸಿದ ರೀತಿಯನ್ನು ನೋಡಿದರೆ ಹೇಗೆ ಕೇಸರಿಪಡೆ ಇದಕ್ಕೆ ಅತ್ಯಂತ ವ್ಯವಸ್ಥಿತವಾಗಿ ಯೋಜನೆ ಹಾಕುತ್ತಿತ್ತು, ಹೀನ ಗೋದ್ರಾ ಘಟನೆಯ ನೆವದಲ್ಲಿ ಹೇಗೆ ಅದನ್ನು ನಡೆಸಿತು ಎಂಬುದು ಕಾಣುತ್ತದೆ.

ಆರ್‌ಎಸ್‌ಎಸ್ - ಬಿಜೆಪಿ ಬೆದರಿಕೆಯೊಡ್ಡಿರುವುದು ನಮ್ಮ ವರ್ತಮಾನಕ್ಕೆ ಮಾತ್ರವಲ್ಲ, ಭವಿಷ್ಯತ್ತಿಗೆ ಕೂಡಾ ಬೆದರಿಕೆಯೊಡ್ಡಿದೆ. ನಮ್ಮ ಶಿಕ್ಷಣವನ್ನು ಕೇಸರಿಮಯಗೊಳಿಸಿ ಕುರುಡು ನಿಕೆಯ, ಧರ್ಮಾಂಧರ ಒಂದು ಪೀಳಿಗೆಯನ್ನೇ ಬೆಳೆಸಲು ಉದ್ಯುಕ್ತವಾಗಿದೆ.

ಇವೆಲ್ಲ ಒಂದು ನಾಗರಿಕ ದೇಶವಾಗಿ ನಮ್ಮ ಅಸ್ತಿತ್ವಕ್ಕೇ ನಮ್ಮ ಧರ್ಮನಿರಪೇಕ್ಷ ಹಂದರಕ್ಕೆ ಮತ್ತು ಸಮ್ಮಿಶ್ರ ಸಂಸ್ಕೃತಿಗೆ ಹಾಗೂ ಸಹಜವಾಗಿಯೇ ಭಾರತೀಯ ಹೆಮ್ಮೆ ಪಡಬಹುದಾದ ಪ್ರತಿಯೊಂದಕ್ಕೂ ಮಾರಕವಾದ ಒಂದು ದುರ್ಲಕ್ಷಣವೆಂದು ಬೇರೆ ಹೇಳಬೇಕಾಗಿಲ್ಲ. ಒರಿಸ್ಸಾದ ಹಳ್ಳಿಯೊಂದರಲ್ಲಿ ಒಬ್ಬ ಕ್ರೈಸ್ತ ಪುರೋಹಿತ ಹಾಗೂ ಇಬ್ಬರು ಚಿಕ್ಕಮಕ್ಕಳ ಅಮಾನುಷ ಜೀವಂತ ದಹನ, ಗುಜರಾತಿನಲ್ಲಿ ಒಂದು ಸಾವಿರಕ್ಕೂ ಹೆಚ್ಚು ಜನರ ಕಗ್ಗೊಲೆ ಮತ್ತು ಇತ್ತೀಚೆಗೆ ಕಲ್ಯಾಣದಲ್ಲಿ ಐವರು ದಲಿತರ ಘೋರ ಹತ್ಯೆ ಈ ಪಡೆಗಳು ತಮ್ಮ ಕಾರ್ಯಕರ್ತರ ಮಾನಸದಲ್ಲಿ ಎಂತಹ ರಾಕ್ಷಸೀ ಭಾರವನ್ನು ತುಂಬುತ್ತಿದೆ ಎಂಬುದನ್ನು ತೋರಿಸುತ್ತದೆ. **ಇದೊಂದು ಸಂಸ್ಕೃತಿಹೀನ, ಅನಾಗರೀಕ ಶಕ್ತಿ** ಎಂದು ಕಾಮ್ರೇಡ್ ಜ್ಯೋತಿಬಸುರವರ ವರ್ಣನೆಯಲ್ಲಿ ಕಿಂಚಿತ್ತೂ ತಪ್ಪಿಲ್ಲ.

...ಂದರಂತೆ ಸಣ್ಣ ಉಳಿತಾಯಗಾರರ ಮೇಲೆ ನಡೆಸುತ್ತಲೇ ಇದೆ. ಹಣದುಬ್ಬರದ ...ವಾಜಿ ಮಾಹಿತಿಯ ಹೆಸರಲ್ಲಿ ಅದು ...ರಗಳನ್ನು ಇಳಿಸುತ್ತಿದೆ, ಹಣಕಾಸು

ಜಮ್ಮು-ಕಾಶ್ಮೀರದ ಜನತೆ ಸತ್ಯಕ್ಕೆ ನಮ್ಮ ಉಪಖಂಡದಲ್ಲಿ ಸಾಮ್ರಾಜ್ಯಶಾಹಿಗಳ ಆಟವನ್ನು ವಿಫಲಗೊಳಿಸಿದೆ. ಆದರೆ ಮಧ್ಯಪ್ರವೇಶದ ಬೆದರಿಕೆ ಇದ್ದೇ ಇದೆ. ಈ ಆಡಳಿತದ ಏಕೈಕ ಉದ್ದೇಶವೆಂದರೆ ಪಾಕಿಸ್ತಾನದೊಂದಿಗೆ ತಿಕ್ಕಾಟದಲ್ಲಿ

...ೂರು ವರ್ಷಗಳು

...ಳಲ್ಲಿ ಹಗರಣಗಳನ್ನು ಹುಟ್ಟುಹಾಕುತ್ತಿದೆ. ಸಣ್ಣ ...ಾಯಗಾರರ ಜೀವನಪರ್ಯಂತದ ...ಾಯಗಳನ್ನು (ಯುಟಿಐ ...ದಲ್ಲಾದಂತೆ) ಅಳಿಸಿ ಹಾಕುತ್ತಿದೆ. ಇಂತಹ ಸನ್ನಿವೇಶದಲ್ಲಿ, ಯೋಜನಾ ನಿಲುವು ಪತ್ರದ ...ಾಯ ಗುರಿಯನ್ನು ಸಾಧಿಸುವುದು ...ಹಾಸ್ಪದ.

...ದ್ಧಿ ಸಾಧ್ಯ ಆದರೆ...

...ಟ್ಟಿನಲ್ಲಿ 2020 ರ ವೇಳೆಗೆ ಅಥವಾ ಅದರ ...ಲು ಅಭಿವೃದ್ಧಿ ದೇಶಗಳ ಸಾಲಿಗೆ ಭಾರತ ...ತ್ತದೆ ಎಂದು ಯಾರಾದರೂ ಹೇಳಿದರೆ ...ಲ್ಲಿ ಅತಿಶಯೋಕ್ತಿಯಿಲ್ಲ. ನಮ್ಮ ...ಕ ಹಾಗೂ ಮಾನವ ಸಂಪನ್ಮೂಲಗಳನ್ನು ...ದರೆ ಇದು ನಿಜವಾಗಿಯೂ ಸಾಧ್ಯ. ... ವಿದೇಶಿ ಮತ್ತು ಭಾರತೀಯ ...ಗಳಿಗೆ ಜನಗಳನ್ನು ಲೂಟಿ ಮಾಡಲು ...ಂಗ ಲೈಸೆನ್ಸ್ ನೀಡಿರುವ ಒಂದು ...ತದ ಪ್ರಧಾನಿಯಿಂದ ಈ ಮಾತು ...ಸ್ಪದವಲ್ಲದೆ ಬೇರೇನೂಅಲ್ಲ.

...ಾಜ್ಯಶಾಹಿಗೆ ಅಡಿಯಾಳು

...ಮೆರಿಕನ್ ಸಾಮ್ರಾಜ್ಯಶಾಹಿಗೆ ...ಾಳುತನದಲ್ಲಂತೂ ಅತ್ಯಂತ ಹೇಸಿಗೆಯಿಂದ ...ಯನ್ನು ನೆನಪಿಸಿಕೊಳ್ಳಲಾಗುತ್ತದೆ. ಈ ...ನವನ್ನು ಬರೆಯುವ ವೇಳೆಗೆ ಆಗ್ರಾದಲ್ಲಿ ...ತ-ಅಮೆರಿಕಾ ವೈಮಾನಿಕ ಕಸರತ್ತುಗಳು ...ರುತ್ತಿವೆ. ಈ ಆಡಳಿತ ...ಲ-ಅಂಗುಲವಾಗಿ ದೇಶದ ಒಮ್ಮತದ ಅಲಿಪ್ತ ...ಯನ್ನು, ಶಾಂತಿ, ನಿಶ್ಶಸ್ತ್ರೀಕರಣದ ನೀತಿಯನ್ನು ...ಕನ್ ಆದೇಶಕ್ಕೆ ತಲೆಬಾಗಿ ಕೊರೆದು ಹಾಕಿದೆ. ...ಾ ಗಣರಾಜ್ಯಕ್ಕೆ ಮಾನ್ಯತೆಯನ್ನು ...ಡುಕೊಳ್ಳಲಾಯಿತು. ತಾಯ್ನಾಡಿಗಾಗಿ ...ರಾಡುತ್ತಿರುವ ಪ್ಯಾಲೆಸ್ಟೇನಿಯರಿಗೆ ...ಲವನ್ನು ನಿಲ್ಲಿಸಿತು. ಆದರೆ ಇವೆಲ್ಲಕ್ಕಿಂತಲೂ ... ಈ ಆಡಳಿತ ಮಾಡಿದ ಅಪಕಾರವೆಂದರೆ ... ಪ್ರಶ್ನೆಯಲ್ಲಿ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ...ಪ್ರವೇಶಿಸಲು ಒಂದು ಅವಕಾಶ ನೀಡಿದ್ದು.

ಹೇಗಾದರೂ ಮಾಡಿ ಅಮೆರಿಕಾದ ಬೆಂಬಲ ಪಡೆಯುವುದು. ಇದು ಕೇವಲ ಭ್ರಮೆ. ಏಕೆಂದರೆ ಈ ಪ್ರದೇಶದಲ್ಲಿ ಅಮೆರಿಕಾ ತನ್ನದೇ ಆಟ ಆಡುತ್ತಿದೆ. ಇದರಲ್ಲಿ ಅದು ಭಾರತವನ್ನು ತನ್ನ ಕಡೆಗೆ ಎಳೆಯಲು ಪ್ರಯತ್ನಿಸುತ್ತಿರುವಾಗಲೇ ಪಾಕಿಸ್ತಾನವನ್ನು ಕೈಬಿಡುವ ಯೋಜನೆಯೇನೂ ಅದಕ್ಕಿಲ್ಲ. ವಾಜಪೇಯಿ ಆಳ್ವಿಕೆ ಇದನ್ನು ಸ್ವೀಕರಿಸಲು ಸಿದ್ಧವಿಲ್ಲ.

ಇದರಲ್ಲಿ ಆಶ್ಚರ್ಯವೇನಿಲ್ಲ. ಪಾಕಿಸ್ತಾನದ ಬಗ್ಗೆ ಬಿಜೆಪಿ ಕುರುಡು ದ್ವೇಷ ದಕ್ಷಿಣ ಏಷ್ಯಾವನ್ನು ಪರಮಾಣು ದಳ್ಳುರಿಯ ಸಾಧ್ಯತೆಯ ಪ್ರದೇಶವಾಗಿ



ಮಾಡಿಬಿಟ್ಟಿರುವುದಲ್ಲದೆ ವಾಜಪೇಯಿ ಸರ್ಕಾರದ ಆರ್ಥಿಕ ನೀತಿಗಳು ಕೂಡಾ ಅಮೆರಿಕಾಕ್ಕೆ ಅಡಿಯಾಳುತನಕ್ಕೆ ಕಾಣವಾಗಿವೆ. ಒಂದು ಆಡಳಿತದ ವಿದೇಶಾಂಗ ನೀತಿ ಅದರ ಆಂತರಿಕ ಸ್ಥಿತಿಯನ್ನು ಪ್ರತಿಫಲಿಸುತ್ತದೆ, ಬಿಜೆಪಿ ಆಡಳಿತದ ವಿದೇಶಾಂಗ ನೀತಿ ಇದಕ್ಕಿಂತ ಭಿನ್ನವಾಗಿರುತ್ತದೆ ಎಂದು ನಿರೀಕ್ಷಿಸಲು ಸಾಧ್ಯವಿಲ್ಲ. ನಮ್ಮ ಆರ್ಥಿಕವನ್ನು ಸಾಮ್ರಾಜ್ಯಶಾಹಿ ಲೂಟಿಗೆ ತೆರೆದಿಟ್ಟ ರೀತಿಯನ್ನು ನೋಡಿದರೆ ಅದರಿಂದಾಗಿ ಈ ವಿಶ್ವ ಪೋಲೀಸನ ಎದುರು ಮೊಣಕಾಲೂರುವಂತಾಗಿದೆ. ಇರಾಕಿನ ವಿಷಯದಲ್ಲಾಗಲೀ, ಭಾರತವು ಸೇರಿದಂತೆ ಇಡೀ ಹಿಂದೂ ಮಹಾಸಾಗರದ ತಟವರ್ತಿ ದೇಶಗಳಿಗೆ ಬೆದರಿಕೆ ಒಡ್ಡಿರುವ ಡಿಗೋಗಾರ್ಸಿಯಾದಲ್ಲಿ ಅಮೆರಿಕನ್ ಪರಮಾಣು ನೆಲೆಯ ಬಗ್ಗೆ ಬಿಜೆಪಿ ಆಡಳಿತದ ಗಂಭೀರ ಮೌನಕ್ಕೆ ಒಂದೇ ಹೆಸರು ಕೊಡಲು ಸಾಧ್ಯ - ಅಡಿಯಾಳ್ತನದ ಪರಮಾವಧಿ ಎಂದು.

ಅವಕಾಶ ಮಾಡಿಕೊಡುವಂತೆ, ಒಟ್ಟಾರೆಯಾಗಿ ಬಿಜೆಪಿ ಮೇಲೆ ಒತ್ತಾಯ ತರುವ ಪ್ರಯತ್ನವಿದು. ಬಿಜೆಪಿ ಹೀಗೆ ಮಾಡಲು ಹಿಂದೇಟು ಹಾಕುತ್ತಿದೆ ಎಂಬುದು ಸ್ಪಷ್ಟ. ಇದರಿಂದ ತನ್ನ ಮಿತ್ರರನ್ನು ಕಳಕೊಳ್ಳಬೇಕಾದೀತು ಎಂಬ ಭಯ ಅವರಿಗೆ, ತಮ್ಮ ಬಲದ ಮೇಲೆಯೇ ಅವರು ಅಧಿಕಾರಕ್ಕೆ ಬರುವ ಪ್ರಶ್ನೆಯೇ ಇಲ್ಲ. ಆದರೂ ಅದು ಆರ್‌ಎಸ್‌ಎಸ್‌ಗೆ ಅದರ ಪ್ರತಿರೋಧಕ್ಕೂ ಮಿತಿಯಿದೆ. ಆದ್ದರಿಂದ ಮುಂಬರುವ ದಿನಗಳಲ್ಲಿ ಕೋಮುವಿಭಜನೆ ಉಲ್ಬಣಗೊಳ್ಳಬಹುದೆಂಬ ಭಯವನ್ನು ತಳ್ಳಿ ಹಾಕುವಂತಿಲ್ಲ.

ಎನ್‌ಡಿಎ ಮಿತ್ರರು ಯೋಚಿಸಬೇಕು

ಅದೇನೇ ಇರಲಿ, ಜನ ತಾವು ಏನು ಯೋಚಿಸುತ್ತಿದ್ದೇವೆ ಎಂಬುದನ್ನು ಸ್ಪಷ್ಟವಾಗಿ ಸೂಚಿಸಿದ್ದಾರೆ. ಈಗ ತಾವೂ ಬಿಜೆಪಿಯೊಟ್ಟಿಗೆ ನಾಶವಾಗಬೇಕೋ ಎಂಬುದನ್ನು ಎನ್‌ಡಿಎ ಪಕ್ಷಗಳು ನಿರ್ಧರಿಸಬೇಕಾಗಿದೆ.

ಜಮ್ಮು-ಕಾಶ್ಮೀರದಲ್ಲಿ ಬಿಜೆಪಿಯೊಂದಿಗೆ ಮೈತ್ರಿಯಿಂದಾಗಿ ನ್ಯಾಶನಲ್ ಕಾನ್ಫರೆನ್ಸ್ ಮೊದಲ ಬಾರಿಗೆ ಹೇಗೆ ಸೋತಿದೆ ಎಂಬುದನ್ನು ಅವರು ನೋಡುವುದು ಒಳ್ಳೆಯದು. ಇನ್ನೊಂದೆಡೆ ಎಡ ಮತ್ತು ಪ್ರಜಾಪ್ರಭುತ್ವವಾದೀ ಶಕ್ತಿಗಳು ಕೂಡಾ ಕಾರ್ಯಚರಣೆಗಿಳಿಯಬೇಕು, ಜನಗಳನ್ನು ನೇರವಾಗಿ ತಟ್ಟುವ ಪ್ರಶ್ನೆಗಳ ಮೇಲೆ ಅವರನ್ನು ಅಣಿನೆರೆಸಬೇಕು. ಬಿಜೆಪಿಯ ಪರಾಭವ ವ್ಯರ್ಥವಾಗದೆ ಒಂದು ಹೊಸ ಪ್ರಜಾಸತ್ತಾತ್ಮಕ ಬೆಳವಣಿಗೆಗೆ ಬಾಗಿಲು ತೆರೆಯಬೇಕಾದರೆ ಇದು ಅತ್ಯಂತ ಅಗತ್ಯ.

ಧಾರ್ಮಿಕ ಮತಾಂತರವನ್ನು ನಿಷೇದಿಸುವ ಸುಗ್ರೀವಾಜ್ಞೆಯನ್ನು ಜಯಲಲಿತಾ ಸರ್ಕಾರ ತಂದಿದೆ. ಮತಾಂತರ ನಿಷೇಧವೆಂಬುದರ ಹಿಂದಿರುವ ಭೀಕರ ಫ್ಯಾಸಿಸ್ಟ್ ಅಜೆಂಡಾವನ್ನು ಅನಾವರಣಗೊಳಿಸುವ ಲೇಖನವಿದು.

ಧಾರ್ಮಿಕ ಮತಾಂತರ ನಿಷೇಧದ ಸುಗ್ರೀವಾಜ್ಞೆ ಎಷ್ಟು ಸಮಂಜಸ?

ನಿತ್ಯಾನಂದಸ್ವಾಮಿ

ಧಾರ್ಮಿಕ ಮತಾಂತರದ ಮೇಲೆ ಕಠಿಣ ಶಿಕ್ಷೆಯನ್ನು ವಿಧಿಸುವ ಜಯಲಲಿತ ಸರ್ಕಾರವು ಹೊರಡಿಸಿರುವ ಸುಗ್ರೀವಾಜ್ಞೆಯು ಅತ್ಯಂತ ಗಂಭೀರವಾದ ವಿಚಾರಗಳನ್ನು ಒಳಗೊಂಡಿದೆ. ನಮ್ಮ ದೇಶದ ರಾಜಕೀಯವನ್ನು ಇನ್ನಷ್ಟು ಕೋಮುವಾದಿ ದಿಕ್ಕಿನತ್ತ ಕೊಂಡೊಯ್ಯುವ ಅಪಾಯ ಅದರಲ್ಲಡಗಿದೆ. ವಿಶ್ವ ಹಿಂದು ಪರಿಷತ್ ಹಾಗೂ ಸಂಘ ಪರಿವಾರದವರು ಈ ಕ್ರಮವನ್ನು ಮುಕ್ತಕಂಠದಿಂದ ಸ್ವಾಗತಿಸಿದ್ದಾರೆ. ಬಿಜೆಪಿಯ ಅಧ್ಯಕ್ಷ ವೆಂಕಯ್ಯ ನಾಯ್ಡು ಇಂತಹ ಕಾನೂನು ಕ್ರಮಗಳನ್ನು ಎಲ್ಲಾ ರಾಜ್ಯಗಳಲ್ಲಿಯೂ ಜಾರಿಗೆ ತರಬೇಕೆಂದು ಉಚಿತ ಸಲಹೆ ನೀಡಿದ್ದಾರೆ. ತಮಿಳುನಾಡಿನ ಈ ಸುಗ್ರೀವಾಜ್ಞೆಯಂತಹ ಕ್ರಮಗಳಿಂದಾಗಿ ರಾಷ್ಟ್ರವಿರೋಧಿ ಫ್ಯಾಸಿಸ್ಟ್ ಶಕ್ತಿಗಳಿಗೆ ಕುಮ್ಮಕ್ಕು ದೊರೆಯಲಿದೆ. ಮಾತ್ರವಲ್ಲ ಧಾರ್ಮಿಕ ಸ್ವಾತಂತ್ರ್ಯವನ್ನು ಖಚಿತಪಡಿಸುವ ನಮ್ಮ ಸಂವಿಧಾನದ ನಗ್ನ ಉಲ್ಲಂಘನೆಗೆ ಅವಕಾಶ ನೀಡಲಿದೆ.

ಆಕ್ಷೇಪಾರ್ಹ ಅಂಶಗಳು:

ಬಲವಂತದಿಂದ, ಅಥವಾ ಆಮಿಷವೊಡ್ಡಿ ಮತಾಂತರ ಮಾಡುವುದನ್ನು ತಡೆಯಲು ದೇಶದಲ್ಲಿ ಇಂದು ಕಾನೂನುಗಳೇ ಇಲ್ಲ ಎಂಬ ಅಭಿಪ್ರಾಯವನ್ನು ಮೂಡಿಸಲು ಈ ಸುಗ್ರೀವಾಜ್ಞೆ ಪ್ರಯತ್ನಪಡುತ್ತದೆ. ಆದ್ದರಿಂದ ಅಂತಹ ಅಪರಾಧಗಳನ್ನು ಶಿಕ್ಷಾರ್ಹಗೊಳಿಸಲು ಇಂತಹ ಸುಗ್ರೀವಾಜ್ಞೆಯೊಂದರ ಅಗತ್ಯವಿತ್ತು ಎಂಬುದು ಇದರ ಹಿಂದಿನ ತರ್ಕ. ಇಂತಹ ಮತಾಂತರದ ಪ್ರಕರಣಗಳಲ್ಲಿ ರೂ.50,000 ವರೆಗೆ ದಂಢ ವಿಧಿಸಲು, 3 ವರ್ಷಗಳ ಜೈಲು ಶಿಕ್ಷೆ ವಿಧಿಸಲು ಈ ಸುಗ್ರೀವಾಜ್ಞೆಯು ಅವಕಾಶ ಕಲ್ಪಿಸುತ್ತದೆ. ಮತಾಂತರಗೊಂಡವರು ಮಹಿಳೆಯರು ಅಥವ ದಲಿತರಾಗಿದ್ದರೆ ದಂಢವನ್ನು ಒಂದು ಲಕ್ಷ ರೂಪಾಯಿಗಳವರೆಗೂ ಜೈಲು ಶಿಕ್ಷೆಯನ್ನು 4 ವರ್ಷಗಳವರೆಗೂ ಹೆಚ್ಚಿಸಲು ಅವಕಾಶವಿದೆ. ಮತಾಂತರಕ್ಕೆ ನೇರವಾದ ಆರೋಪದ ಮೇಲೆಯೂ ಒಬ್ಬನನ್ನು ಇಂತಹ ಶಿಕ್ಷೆಗೆ ಒಳಪಡಿಸಬಹುದು. ಮತಾಂತರಗೊಂಡ ವ್ಯಕ್ತಿ ಹಾಗೂ ಮತಾಂತರ ಕ್ರಿಯೆಯನ್ನು ನೆರವೇರಿಸಿದ ವ್ಯಕ್ತಿ ಮತಾಂತರ ಮಾಡಲಾದ ಬಗ್ಗೆ ಸ್ಥಳೀಯ ನ್ಯಾಯಾಧೀಶರಿಗೆ ವರದಿ ನೀಡಬೇಕಾಗಿದೆ. ಹೀಗೆ ತಮಿಳುನಾಡು ಸುಗ್ರೀವಾಜ್ಞೆಯು ಓರಿಸ್ಸಾ ಮತ್ತು ಮಧ್ಯಪ್ರದೇಶದಲ್ಲಿ ಜಾರಿಯಲ್ಲಿರುವ ಕಾನೂನುಗಳಿಗಿಂತಲೂ ಹೆಚ್ಚು ಕರಾಳವಾಗಿದೆ.

ಹಿಂದುತ್ವ ಶಕ್ತಿಗಳಿಗೆ ನಿಷ್ಠೆ:

ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತಾರವರು ಹೆಚ್ಚೆಚ್ಚು ಹಿಂದುತ್ವ ಶಕ್ತಿಗಳಿಗೆ ಹತ್ತಿರವಾಗಲು ಬಯಸುತ್ತಿರುವುದು ಗುಟ್ಟಿನ ವಿಷಯವಾಗಿ ಉಳಿದಿಲ್ಲ. ಕೆಲವು ದಿನಗಳ ಹಿಂದೆ, ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾಗಾಂಧಿಯವರ ವಿದೇಶಿ ಮೂಲವನ್ನು ಕೆದಕಿ ವಾಜಪೇಯಿ ಆದ್ವಾನಿಗಳಲ್ಲಿ ರೋಮಾಂಚನಕ್ಕೆ ಕಾರಣರಾಗಿದ್ದರು. ಈಗ ಮತಾಂತರ ನಿಷೇದ ಸುಗ್ರೀವಾಜ್ಞೆಯ ಮೂಲಕ ಆರ್.ಎಸ್.ಎಸ್‌ಗೆ ನಿಷ್ಠೆಯನ್ನು ಪ್ರದರ್ಶಿಸಲು ಮುಂದಾಗಿದ್ದಾರೆ. ದೇವಸ್ಥಾನಗಳಲ್ಲಿ ಭಕ್ತಾದಿಗಳಿಗೆ ಮಧ್ಯಾಹ್ನದ ಉಚಿತ ಬೋಜನವನ್ನು ಏರ್ಪಡಿಸಿರುವುದು, ಈ ದೇವಸ್ಥಾನಗಳಲ್ಲಿ ವಾರಕ್ಕೊಮ್ಮೆ ಭಾನುವಾರ ಧಾರ್ಮಿಕ ತರಗತಿಗಳನ್ನು ನಡೆಸಲು ಆರಂಭಿಸಿರುವುದು ಇದೇ ಉದ್ದೇಶದಿಂದ ಎಂದು ಪ್ರತ್ಯೇಕವಾಗಿ ಹೇಳಬೇಕಾದುದಿಲ್ಲ. ಚೆನ್ನೈನಲ್ಲಿನ ಕಪಿಲೇಶ್ವರ ದೇವಸ್ಥಾನದಲ್ಲಿ ದೊಡ್ಡ ಸಂಖ್ಯೆಯಲ್ಲಿ ನೆರೆದಿದ್ದ ಬಿಜೆಪಿ ಬೆಂಬಲಿಗರ ಸಮಕ್ಷಮದಲ್ಲಿ ಸ್ವತಃ ಜಯಲಲಿತಾರವರು ಈ ಕಾರ್ಯಕ್ರಮಗಳನ್ನು ಉದ್ಘಾಟಿಸಿದರು. ಈಗ ರಾಜ್ಯಾದ್ಯಂತ 150 ದೇವಸ್ಥಾನಗಳಲ್ಲಿ ಈ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ. ಇತ್ತೀಚಿನ ಚುನಾವಣೆಗಳಲ್ಲಿ ಎಐಡಿಎಂಕೆ ಪಕ್ಷವನ್ನು ಬೆಂಬಲಿಸಿದ್ದ ಹಿಂದೂ ಮುನ್ನಾನಿ ಮೊದಲಾದ ಹಿಂದುತ್ವ ಸಂಘಟನೆಗಳು ರಾಜ್ಯದಲ್ಲಿ ಮತಾಂತರವನ್ನು ನಿಷೇದಿಸುವಂತೆ ಒತ್ತಾಯಿಸುತ್ತಿದ್ದವು. ಪ್ರಸಕ್ತ ಸುಗ್ರೀವಾಜ್ಞೆಯ ಮೂಲಕ ಹಿಂದುತ್ವ ಶಕ್ತಿಗಳನ್ನು ತೃಪ್ತಿಪಡಿಸಿದ್ದಾಯ್ತು; ಹಿಂದೂ ಮತ ಬ್ಯಾಂಕನ್ನು ಗಟ್ಟಿಗೊಳಿಸಿದ್ದಾಯ್ತು! ಚಂದ್ರಬಾಬು ನಾಯ್ಡುರವರದ್ದು ಒಂದು ಬಗೆಯ ಅವಕಾಶ ವಾದವಾಗಿದ್ದರೆ, ಫಾರೂಕ್ ಅಬ್ದುಲ್ಲಾರವರದ್ದು ಇನ್ನೊಂದು ಬಗೆಯ ಅವಕಾಶವಾದವಾಗಿತ್ತು. ಈಗ ಕುಮಾರಿ ಜಯಲಲಿತಾರವರ ಸರದಿ!!

> **ದಲಿತರ ಮೇಲೆ ಮೇಲ್ಜಾತಿ ಹಿಂದುಗಳಿಂದ ನಡೆಯುತ್ತಿರುವ ದೌರ್ಜನ್ಯಗಳಿಗೆ ಕೊನೆ ಎಲ್ಲಿದೆ? ಒಮ್ಮೆ ದಲಿತರ ಕೇರಿಗೆ ಪಾದ ಬೆಳೆಸಿ ಪ್ರಚಾರ ಗಿಟ್ಟಿಸಿಕೊಂಡ ಪೇಜಾವರರು ಈಗ ಮೌನವಾಗಿದ್ದಾರೆ.**

ಮತಾಂತರ ಏಕೆ?

ಮತಾಂತರದ ಅನೇಕ ವರದಿಗಳು ಬರುತ್ತಿದ್ದು ಕಾನೂನು ಮತ್ತು ವ್ಯವಸ್ಥೆಯ ಹಿತಕ್ಕಾಗಿ ತಮಿಳುನಾಡಿನಲ್ಲಿ ಈ ಸುಗ್ರೀವಾಜ್ಞೆಯನ್ನು ತರಬೇಕಾಯಿತು ಎನ್ನಲಾಗುತ್ತದೆ. ಅಷ್ಟೊಂದು ಅವಸರ ಏನಿತ್ತು? ಅಕ್ಟೋಬರ್ 24ರಂದು ಆರಂಭವಾಗಲಿದ್ದ ವಿಧಾನಸಭಾ ಅಧಿವೇಶನಕ್ಕೆ ಕಾಯದೆ ಅಕ್ಟೋಬರ್ 5ರಂದೇ ಸುಗ್ರೀವಾಜ್ಞೆಯನ್ನು ಹೊರಡಿಸಲಾಗಿದ್ದು ಏಕೆ? ಸುಗ್ರೀವಾಜ್ಞೆಗೆ ಸಹಿ ಹಾಕಿದ ರಾಜ್ಯಪಾಲ ಪಿ.ಎಸ್.ರಾಮಮೋಹನ್ ಸರ್ಕಾರವನ್ನು ಪ್ರಶ್ನಿಸುವ ಗೋಜಿಗೆ ಹೋಗಲಿಲ್ಲ.

ಇತ್ತೀಚೆಗೆ ಮದುರೈನಲ್ಲಿ ಬಡ ದಲಿತರು ಸಾಮೂಹಿಕವಾಗಿ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡದ್ದು ಈ ಸುಗ್ರೀವಾಜ್ಞೆಯನ್ನು ಇಷ್ಟೊಂದು ಅವಸರದಲ್ಲಿ ತರಲು ಒಂದು ಕಾರಣವಾಗಿರಬಹುದು. ದಲಿತರಿಗೆ ಹಿಂದೂ ಧರ್ಮವನ್ನು ತ್ಯಜಿಸಲು ಸಾಕಷ್ಟು ಕಾರಣಗಳಿವೆ. ಅಂಬೇಡ್ಕರ್ ಅವರು ಸ್ವತಃ ಬೌದ್ಧ ಧರ್ಮವನ್ನು ಸ್ವೀಕರಿಸಿರಲಿಲ್ಲವೆ? ಕೇವಲ ಮತಾಂತರದಿಂದ ದಲಿತರ ಬದುಕಿನಲ್ಲಿ ಬದಲಾವಣೆಯಾಗದಿದ್ದರೂ, ಶತಮಾನಗಳಿಂದ ಅವರು ಅನುಭವಿಸುತ್ತಾ ಬಂದ ಅವಮಾನದ ವಿರುದ್ಧ ಸ್ಫೋಟಗೊಳ್ಳುವ ಅವರ ಆಕ್ರೋಶವೇ ಸಾಮೂಹಿಕ ಮತಾಂತರಕ್ಕೆ ಕಾರಣವಾಗುತ್ತದೆ. ದೇಶದ ಅನೇಕ ಕಡೆ ಇರುವಂತೆ, ತಮಿಳುನಾಡಿನಲ್ಲಿ ವ್ಯಾಪಕವಾಗಿರುವ ಅಸ್ಪೃಶ್ಯತೆಯ ಕ್ರೌರ್ಯವು 1980ರ ಮಿನಾಕ್ಷಿಪುರಂ ಸಾಮೂಹಿಕ ಮತಾಂತರದ ಪ್ರಕರಣದ ದಿನದಿಂದಲೂ ದಲಿತರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳ್ಳಲು ಕಾರಣವಾಗುತ್ತಾ ಬಂದಿದೆ.

ದಲಿತರು ಅನುಭವಿಸುವ ಹಿಂಸೆ ಇತರರಿಗೆ ಅರ್ಥವಾಗುವುದು ಕಷ್ಟ. ಅವರನ್ನು ಪಶುಗಳಿಗಿಂತಲೂ ಕೀಳಾಗಿ ಕಾಣುವ ಪ್ರವೃತ್ತಿಯನ್ನು ಅವರು ಎಷ್ಟುಕಾಲ ಸಹಿಸಿಕೊಂಡು ಹೋಗ್ಯಾರು? ದಲಿತರ ಮೇಲೆ ಮೇಲ್ಜಾತಿ ಹಿಂದುಗಳಿಂದ ನಡೆಯುತ್ತಿರುವ ದೌರ್ಜನ್ಯಗಳಿಗೆ ಕೊನೆ ಎಲ್ಲಿದೆ? ಒಮ್ಮೆ ದಲಿತರ ಕೇರಿಗೆ ಪಾದ ಬೆಳೆಸಿ ಪ್ರಚಾರ ಗಿಟ್ಟಿಸಿಕೊಂಡ ಪೇಜಾವರರು ಈಗ ಮೌನವಾಗಿದ್ದಾರೆ. ಕಂಬಾಲಪಲ್ಲಿಯ ಹತ್ಯಾಕಾಂಡ, ಬಳ್ಳಾರಿಯಲ್ಲಿ ದಲಿತ ಮಹಿಳೆಯ ಬೆತ್ತಲೆ ಮೆರವಣಿಗೆಯಂತಹ ಪ್ರಕರಣಗಳು ಹಿಂದುತ್ವ ಶಕ್ತಿಗಳ ಗಮನ ಸೆಳೆಯುವುದಿಲ್ಲ. ಕಳೆದ ಮೇಲೆ 21ರಂದು ತಮಿಳುನಾಡಿನ ತಿರುಚ್ಚಿ ಜಿಲ್ಲೆಯ ಒಂದು ಹಳ್ಳಿಯಲ್ಲಿ ಮುರುಗೇಶನ್ ಮತ್ತು ರಾಮಸ್ವಾಮಿ ಎಂಬ ಇಬ್ಬರು ದಲಿತರ ಮೇಲೆ ಕಾದ ಕಬ್ಬಿಣದಿಂದ ಬರೆ ಹಾಕಿ ಬಲವಂತದಿಂದ ಮಲತಿನ್ನಿಸಿದ ಘಟನೆ ಜರುಗಿದೆ.


ಇಂತಹ ಅಮಾನುಷ ಘಟನೆಗಳಿಗೆ ನೀಡಲಾಗುವ ಪ್ರಚಾರಕ್ಕಿಂತಲೂ ದಲಿತರ ಮತಾಂತರದ ಪ್ರಕರಣಗಳಿಗೆ ಹೆಚ್ಚು ಪ್ರಚಾರ ದೊರೆಯುತ್ತದೆ. ಇತ್ತೀಚೆಗೆ ಹರಿಯಾಣದಲ್ಲಿ ಒಂದು ಸತ್ತ ಹಸುವಿನ ಚರ್ಮವನ್ನು ಸುಲಿಯುತ್ತಿದ್ದ 5 ಜನ ದಲಿತರ ಮೇಲೆ 'ಗೋಮಾತೆ'ಯ ಹತ್ಯೆಯ ಆರೋಪ ಹೊರಿಸಿ, ಜನಜಂಗುಳಿಯನ್ನು ಉದ್ರಿಕ್ತಗೊಳಿಸಿದ ವಿಶ್ವ ಹಿಂದೂ ಪರಿಷತ್ತಿನವರು ಅಮಾಯಕ ದಲಿತರ ಕೊರಳಿಗೆ ನೇಣು ಬಿಗಿದು ಸಾಯಿಸಿದ್ದಾರೆ. ಇಷ್ಟಾದ ಮೇಲೂ ದಲಿತರು ಹಿಂದುಗಳಾಗಿ ಇರಲು ಸಾಧ್ಯವೆ? ಸತ್ತ ದನವನ್ನು ಎತ್ತಲು ಅವರು ಬೇಕು. ದನದ ಮಾಂಸವನ್ನು ಮಾತ್ರ ಅವರು ತಿನ್ನಬಾರದು. ದಲಿತರ ಜೀವಕ್ಕಿಂತಲೂ ಗೋಮಾತೆಯ ಪ್ರಾಣವೇ ಶ್ರೇಷ್ಠ ಎಂದು ವಿಶ್ವ ಹಿಂದೂ ಪರಿಷತ್ತಿನವರು ಅಪ್ಪಣೆ ಕೊಟ್ಟಿದ್ದಾರೆ.

ಮತಾಂತರದ ಮೂಲಕ್ಕೆ ಹೋಗಲು ಇವರು ಸಿದ್ಧರಿಲ್ಲ. ರಾಜಕೀಯ ಅಜೆಂಡಾದಲ್ಲಿ ಮತಾಂತರಕ್ಕೆ ಪ್ರಾಮುಖ್ಯತೆ ನೀಡಲಾಗುತ್ತಿದೆ. ಹಿಂದೂ ಸಮಾಜದಲ್ಲಿ ಪೋಷಿಸಿಕೊಂಡು ಬರಲಾದ ಅಸಮಾನತೆ, ಅಸ್ಪೃಶ್ಯತೆಗಳಂತಹ ಅನಿಷ್ಟಗಳ ವಿರುದ್ಧ ಸಮರಸಾರದೆ ಮತಾಂತರವನ್ನು ನಿಷೇಧಿಸುವುದು ಸಮಸ್ಯೆಗೆ ಪರಿಹಾರವಾಗದು.

ಹಿಂದುತ್ವ ಪಡೆ ನಿರ್ಮಾಣದತ್ತ :

ಬಾಬ್ರಿ ಮಸೀದಿಯನ್ನು ಕೆಡವಿಹಾಕಿದ ನಂತರದ 10 ವರ್ಷಗಳಲ್ಲಿ ದೇಶಾದ್ಯಂತ ಕ್ರಿಶ್ಚಿಯನ್ ಮತ್ತು ಮುಸಲ್ಮಾನರ ಮೇಲೆ ನಡೆಸಲಾದ ದಾಳಿಯ ಹಿನ್ನೆಲೆಯಲ್ಲಿ ಈ ಮತಾಂತರದ ಪ್ರಶ್ನೆಯನ್ನು ಗಮನಿಸಬೇಕಾಗಿದೆ. ಗುಜರಾತ್ ನರಮೇದದಲ್ಲಿ ಹಿಂದುತ್ವ ಶಕ್ತಿಗಳು ದಲಿತರನ್ನು, ಆದಿವಾಸಿಗಳನ್ನು ಗಣನೀಯ ಸಂಖ್ಯೆಯಲ್ಲಿ ಬಳಸಿಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದವು ಎಂಬುದನ್ನು ಗಮನಿಸಬೇಕು. ಓರಿಸ್ಸಾದಲ್ಲಿ ಜಾರಿಯಲ್ಲಿರುವ ಮತಾಂತರ ನಿಷೇದ ಕಾನೂನು ಕ್ರಿಶ್ಚಿಯನ್ ಮಿಶನರಿ ಸ್ಟೇಯಿನ್ಸ್ ಹಂತಕರಿಗೆ ಕುಮ್ಮಕ್ಕು ನೀಡಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಸ್ಟೇಯಿನ್ಸ್ ಮತ್ತು ಅವರ ಮಕ್ಕಳ ಕೊಲೆಯನ್ನು ಮತಾಂತರದ ಕಾರಣವನ್ನೇ ಮುಂದೆ ಮಾಡಿ ಸಮರ್ಥಿಸಲಾಗುತ್ತದೆ. ಕೊಲೆಗಾರ ದಾರಾಸಿಂಗ್‌ನಿಗೆ ಆರ್.ಎಸ್.ಎಸ್ ಶಾಖೆಗಳಲ್ಲಿ ಹೀರೋ ಸ್ಥಾನ ನೀಡಿ ಆತನ ಕೃತ್ಯವನ್ನು

→



ತಮಿಳುನಾಡು ಸುಗ್ರೀವಾಜ್ಞೆಗೆ ಸಿಪಿಐ(ಎಂ) ಖಂಡನೆ

ಸಿಪಿಐ(ಎಂ) ಪೊಲಿಟ್ ಬ್ಯೂರೊ ಅಕ್ಟೋಬರ್ 8ರಂದು ಈ ಕೆಳಗಿನಂತೆ ಪತ್ರಿಕಾ ಹೇಳಿಕೆಯೊಂದನ್ನು ನೀಡಿದೆ.

ಧಾರ್ಮಿಕ ಮತಾಂತರವನ್ನು ನಿಷೇದಿಸುವ ತಮಿಳುನಾಡು ಸರ್ಕಾರದ ಸುಗ್ರೀವಾಜ್ಞೆಗೆ ಸಿಪಿಐ(ಎಂ) ಪೊಲಿಟ್ ಬ್ಯೂರೊ ತೀವ್ರ ಅಸಮ್ಮತಿಯನ್ನು ವ್ಯಕ್ತಪಡಿಸುತ್ತದೆ.

ಯಾವುದೇ ವ್ಯಕ್ತಿ ಯಾವುದೆ ಧರ್ಮವನ್ನು ಸ್ವತಂತ್ರವಾಗಿ ಅನುಸರಿಸುವ ಅಥವಾ ಪ್ರಚಾರ ಮಾಡುವ ಭಾರತದ ಸಂವಿಧಾನವೇ ಖಾತರಿಪಡಿಸಿದ ಮೂಲಭೂತ ಹಕ್ಕನ್ನು ಹೊಂದಿರುತ್ತಾನೆ. ಸ್ವಇಚ್ಛೆಯಿಂದಲ್ಲದೆ ಬೇರೆ ಯಾವುದೇ ವಿಧಾನದಿಂದ ಧಾರ್ಮಿಕ ಮತಾಂತರವನ್ನು ಒತ್ತಾಯಿಸುವವನು ಈಗ ಅಸ್ತಿತ್ವದಲ್ಲಿರುವ ಕಾನೂನುಗಳಿಗೆ ಅನುಗುಣವಾಗಿಯೇ ಶಿಕ್ಷಾರ್ಹನಾಗುತ್ತಾನೆ.

ಆದ್ದರಿಂದ, ವಿಶೇಷ ಪರಿಸ್ಥಿತಿಯಲ್ಲಿ ಮಾತ್ರ ಅನುಸರಿಸಲಾಗುವ ಸುಗ್ರೀವಾಜ್ಞೆಯಂತಹ ಕ್ರಮವನ್ನು ಕೈಕೊಂಡಿರುವುದು ಜಯಲಲಿತ ಸರ್ಕಾರದ ರಾಜಕೀಯ ದುರುದ್ದೇಶವನ್ನು ಎತ್ತಿತೋರಿಸುತ್ತದೆ. ಅಲ್ಲದೆ, ಈ ಸುಗ್ರೀವಾಜ್ಞೆಯನ್ನು ಅಲ್ಪಸಂಖ್ಯಾತರ ವಿರುದ್ಧ ದುರುಪಯೋಗ ಮಾಡುವ ಎಲ್ಲಾ ಸಾಧ್ಯತೆಗಳಿವೆ.

ವೈಭವೀಕರಿಸಲಾಗುತ್ತಿದೆ. ಸ್ಟೇಯಿನ್ಸ್ ಹತ್ಯೆಗಾಗಿಯೂ ಆದಿವಾಸಿಗಳನ್ನೇ ಬಳಸಲಾಗಿರುವುದನ್ನು ಮರೆಯುವಂತಿಲ್ಲ.

ಆದಿವಾಸಿಗಳನ್ನು, ದಲಿತರನ್ನು ಬಳಸಿಕೊಂಡು ಅಲ್ಪಸಂಖ್ಯಾತರಲ್ಲಿ ಭೀತಿ ಹುಟ್ಟಿಸುವುದು ಹಿಂದುತ್ವ ಶಕ್ತಿಗಳ ಯೋಜನೆಯಾಗಿದೆ ಎಂಬುದು ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತಿದೆ. ಆದಿವಾಸಿಗಳಿಗಾಗಿ ಆರ್.ಎಸ್.ಎಸ್ ನಡೆಸಲಾರಂಭಿಸಿರುವ ಶಿಕ್ಷಣ ಸಂಸ್ಥೆಗಳನ್ನು, ವನವಾಸಿ ಕಲ್ಯಾಣ ಪರಿಷತ್ತುಗಳನ್ನು ಗಮನಿಸಿದರೆ, ಹಿಂದುತ್ವ ಶಕ್ತಿಗಳು ಈ ವಿಭಾಗಗಳ ನಡುವೆ ನುಸುಳಿ ಅವರನ್ನು ಕೋಮು ದಂಗೆಗಳಲ್ಲಿ ಬಳಸಲು ಪ್ರಜ್ಞಾಪೂರ್ವಕ ಕೆಲಸವನ್ನು ಆರಂಭಿಸಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ. 'ಸೇವಾ ಅಂತರಾಷ್ಟ್ರೀಯ' ಮೊದಲಾದ ಸಂಸ್ಥೆಗಳ ಮೂಲಕ ವಿದೇಶಗಳಿಂದ ಸಂಗ್ರಹಿಸಿ ತರಲಾಗುತ್ತಿರುವ ಹಣವನ್ನು ಈ ಉದ್ದೇಶಗಳಿಗಾಗಿ ವೆಚ್ಚ ಮಾಡಲಾಗುತ್ತದೆ. ಕೇಂದ್ರ ಸರ್ಕಾರದಿಂದಲೂ ಸಾಕಷ್ಟು ಹಣ ಆರ್.ಎಸ್.ಎಸ್ ಕಾರ್ಯಕ್ರಮಗಳಿಗೆ ಹರಿದುಬರುತ್ತಿದೆ. ದಲಿತರ ಮತ್ತು ಆದಿವಾಸಿಗಳ ನಡುವೆ ತಮ್ಮ ಭಯೋತ್ಪಾದಕ ಪಡೆಯನ್ನು ಸಜ್ಜುಗೊಳಿಸಲು ಹಿಂದುತ್ವ ಶಕ್ತಿಗಳು ಭಾರೀ ಪ್ರಯತ್ನವನ್ನೇ ನಡೆಸುತ್ತಿವೆ.

ದಲಿತರು, ಆದಿವಾಸಿಗಳು ಬೇರೆ ಧರ್ಮಗಳಿಗೆ ಮತಾಂತರಗೊಳ್ಳುವುದು ಹಿಂದುತ್ವ ಶಕ್ತಿಗಳಿಗೆ ಹಿಂದೆಂದಿಗಿಂತಲೂ ಈಗ ನುಂಗಲಾರದ ತುತ್ತು. ಆದ್ದರಿಂದ ಹೇಗಾದರೂ ಮಾಡಿ ಮತಾಂತರವನ್ನು ತಡೆಗಟ್ಟಬೇಕೆಂಬುದು ಅವರ ಗುರಿ.

ಸಂವಿಧಾನದ ಉಲ್ಲಂಘನೆ:

ಭಾರತದ ಸಂವಿಧಾನ ಪ್ರತಿಯೊಬ್ಬ ಪ್ರಜೆಗೆ ತಾನು ಇಷ್ಟಪಡುವ ಧರ್ಮವನ್ನು ಅವಲಂಭಿಸುವ ಹಕ್ಕಿನೊಂದಿಗೆ ಅದನ್ನು ಪ್ರಚಾರ ಮಡುವ ಹಕ್ಕನ್ನು ನೀಡಿದೆ. ಇನ್ನೊಬ್ಬರ ಹಕ್ಕಿಗೆ ಧಕ್ಕೆಯಾಗದಂತೆ ನಾನು ನಂಬಿರುವ ಧಾರ್ಮಿಕ ತತ್ವಗಳನ್ನು ನಾನು ಪ್ರಚಾರ ಮಾಡಬಹುದು. ಯಾವುದೇ ಧರ್ಮದ ಮೇಲೆ ನಂಬಿಕೆ ಇಟ್ಟುಕೊಳ್ಳದೆ ಇರಲು ಸಹ ನನಗೆ ನಮ್ಮ ಸಂವಿಧಾನ ಹಕ್ಕನ್ನು ನೀಡುತ್ತದೆ.

ಧರ್ಮವನ್ನು ಪ್ರಚಾರ ಮಾಡುವ ಹಕ್ಕು ಇದೆ ಎಂದಾಗ, ಮತಾಂತರ ಮಾಡಲು ಸಹ ಹಕ್ಕಿರಬೇಕು. ನನಗೆ ನೀಡಲಾದ ಧಾರ್ಮಿಕ ಸ್ವಾತಂತ್ರ್ಯವನ್ನು ಬಳಸಿಕೊಂಡು ನಾನು ನನ್ನ ಧರ್ಮವನ್ನು ಬದಲಾಯಿಸಿಕೊಳ್ಳಬಹುದು. ನನಗೆ ನನ್ನ ಹುಟ್ಟಿನಿಂದ ಜೋಡಿಸಲಾದ ಧರ್ಮವನ್ನು ತ್ಯಜಿಸಲು ಹಕ್ಕು ನೀಡದಿದ್ದರೆ ನನಗೆ ಧಾರ್ಮಿಕ ಸ್ವಾತಂತ್ರ್ಯವನ್ನು ನಿರಾಕರಿಸಿದಂತಾಗುತ್ತದೆ.

ನಮ್ಮ ದೇಶದಲ್ಲಿ ಸಾವಿರಾರು ವರ್ಷಗಳಿಂದಲೂ ಮತಾಂತರ ನಡೆಯುತ್ತಲೇ ಬಂದಿದೆ. ವೈದಿಕ ಧರ್ಮದ ವಿರುದ್ಧ ಬೌದ್ಧ ಧರ್ಮವನ್ನು ಸ್ಥಾಪಿಸಿದ್ದಾನೆ. ಅಶೋಕ ಚಕ್ರವರ್ತಿ ಬೌದ್ಧ ಧರ್ಮದ ಪ್ರಚಾರವನ್ನು ದೇಶವಿದೇಶಗಳಿಗೆ ಕಳುಹಿಸಿ ಮತಾಂತರ ಮಾಡಿಸಿದ್ದಾನೆ. ಕರ್ನಾಟಕದಲ್ಲಿ ಬಸವಣ್ಣ ವೈದಿಕ ಧರ್ಮವನ್ನು ತ್ಯಜಿಸಿ ಲಿಂಗವಂತ ಧರ್ಮವನ್ನು ಸ್ಥಾಪಿಸಿದ್ದಾರೆ. ಅನ್ಯ ಮತದವರಿಗೆ ಲಿಂಗದೀಕ್ಷೆಕೊಟ್ಟು ಮತಾಂತರ ಮಾಡುವುದು ಇಂದಿಗೂ ಜಾರಿಯಲ್ಲಿದೆ. ಹಿಂದೂ ಮಠಾಧಿಪತಿಗಳು ವಿದೇಶಕ್ಕೆ ಧರ್ಮ ಪ್ರಚಾರಕ್ಕೆ ಹೋಗುತ್ತಿದ್ದಾರೆ. ವಿದೇಶಿಯರು ಹಿಂದೂ ಧರ್ಮವನ್ನು ಸ್ವೀಕರಿಸಿದಾಗ ಅದನ್ನು ಹೆಮ್ಮೆಯಿಂದ ಸ್ವಾಗತಿಸಲಾಗುತ್ತಿದೆ.

> **ತಮಿಳುನಾಡು ಸುಗ್ರೀವಾಜ್ಞೆಯು ಓರಿಸ್ಸಾ ಮತ್ತು ಮಧ್ಯಪ್ರದೇಶದಲ್ಲಿ ಜಾರಿಯಲ್ಲಿರುವ ಕಾನೂನುಗಳಿಗಿಂತಲೂ ಹೆಚ್ಚು ಕರಾಳವಾಗಿದೆ.**

ಹಾಗಾದರೆ ಮತಾಂತರದ ಬಗ್ಗೆ ಈಗ ಎಬ್ಬಿಸಲಾಗಿರುವ ಗುಲ್ಲೇಕೆ? ಹಿಂದೂ ಧರ್ಮವನ್ನು ತ್ಯಜಿಸಿ ಬೌದ್ಧ ಧರ್ಮಕ್ಕೆ ಮತಾಂತರಗೊಂಡ ನಮ್ಮ ಸಂವಿಧಾನದ ಶಿಲ್ಪಿ ಅಂಬೇಡ್ಕರ್ ಅವರಿಗೆ ಈ ಕಾನೂನು ಏನು ಶಿಕ್ಷೆ ವಿಧಿಸುತ್ತದೆ? ಜಯಲಲಿತಾರವರ ಮತಾಂತರ ನಿಷೇದ ಸುಗ್ರೀವಾಜ್ಞೆಯ ಹಿಂದಿನ ಕೋಮುವಾದಿ ರಾಜಕೀಯವನ್ನು ಸ್ಪಷ್ಟವಾಗಿ ಬಯಲಿಗೆಳೆಯುವುದು ನಮ್ಮ ನಿಮ್ಮೆಲ್ಲರ ತುರ್ತುಕರ್ತವ್ಯವಾಗಿದೆ.

'ಕೋಮುವಾದಿಗಳ ದುಷ್ಟ ಆಟಗಳಿಗೆ ಅವಕಾಶ ನೀಡೆವು' ಆಳಂದ ಸಮಾವೇಶದಲ್ಲಿ ಜನತೆಯ ಪ್ರತಿಜ್ಞೆ

ಗಡಿ ಮಸೀದಿ ವಿವಾದವನ್ನೇ ಬಳಸಿ ಆಳಂದದಲ್ಲಿ ಕೋಮು ದ್ವೇಷವನ್ನು ಹುಟ್ಟುಹಾಕುತ್ತಿರುವ ಬಜರಂಗದಳ, ವಿಶ್ವಹಿಂದೂ ಪರಿಷತ್ ಮತ್ತಿತರರ ಪ್ರಯತ್ನಗಳನ್ನು ವಿರೋಧಿಸಿ, ವಿವಾದದ ಬಗ್ಗೆ ಕೋರ್ಟ್‌ನ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಬೇಕು, ಸರ್ಕಾರ ಮಧ್ಯಪ್ರವೇಶಿಸಬೇಕು, ಸೌಹಾರ್ದತೆ-ಶಾಂತಿಯನ್ನು ಜನತೆ ಕಾಪಾಡಬೇಕೆಂದು ದಿನಾಂಕ 23.10.2002 ರಂದು ಬೃಹತ್ ಕೋಮುಸೌಹಾರ್ದತಾ ಸಮಾವೇಶ ಜರುಗಿತು.

ಆಳಂದ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆದು, ತಹಶೀಲ್ದಾರ್ ಕಛೇರಿ ಬಳಿ ಸೇರಿದ ಸಮಾವೇಶದ ಅಧ್ಯಕ್ಷತೆಯನ್ನು ಸಿಪಿಐ(ಎಂ) ಗುಲ್ಬರ್ಗಾ ಜಿಲ್ಲಾ ಕಾರ್ಯದರ್ಶಿ,ರಾಜ್ಯ ಸೆಕ್ರೆಟರಿಯಾಟ್ ಸದಸ್ಯರಾದ ಮಾರುತಿ ಮಾನ್ಪಡೆ ವಹಿಸಿದ್ದರು. ಸಮಾವೇಶವನ್ನು ಉದ್ಘಾಟಿಸಿ ಅನುಭವ ಮಂಟಪದ ಕಾರ್ಯಾಧ್ಯಕ್ಷರೂ, ರಾಜ್ಯ ರೈತ ಸಂಘದ ರಾಜ್ಯ ಗೌರವಾಧ್ಯಕ್ಷರಾದ ಬಸವರಾಜ್ ತಂಬಾಕೆ ಮಾತನಾಡಿದರು. ಸಮಾವೇಶದಲ್ಲಿ ಎಸ್.ವೈ.ಗುರುಶಾಂತ್, ಸಿಪಿಐನ ಹಿರಿಯ ನಾಯಕ ಆರ್.ಡಿ.ಹಳಂಗಳಿ, ಮೌಲಾಸಾಬ್ ಮುಲ್ಲಾ, ಜನವಾದಿ ಮಹಿಳಾ ಸಂಘಟನೆ ರಾಜ್ಯ ಅಧ್ಯಕ್ಷೆ ಕೆ.ನೀಲಾ, ಸಿಪಿಐ(ಎಂ) ಆಳಂದ ಕಾರ್ಯದರ್ಶಿ ಮೇಘರಾಜ ಕಠಾರೆ ಮುಂತಾದವರು ಸಮಾವೇಶದ ಘೋಷಣೆ ಮಂಡಿಸಿದರು.

ಈ ಸಮಾವೇಶದಲ್ಲಿ ಸುಮಾರು 800 ಕ್ಕೂ ಅಧಿಕ ಜನತೆ ಅತ್ಯಂತ ಸ್ಫೂರ್ತಿದಾಯಕವಾಗಿ ಭಾಗವಹಿಸಿದ್ದು ವಿಶೇಷವಾಗಿತ್ತು. ಕೋಮಮುವಾದಿಗಳ ಕುತಂತ್ರದಾಟಕ್ಕೆ ಅವಕಾಶ ಕೊಡುವುದಿಲ್ಲವೆಂದು ಜನತೆ ಪ್ರತಿಜ್ಞೆಗೈದರು. ಈ ಸಮಾವೇಶವನ್ನು ಸಿಪಿಐ(ಎಂ); ಸಿಪಿಐ,ಅಲ್ಲದೇ ಹಲವಾರು ಪ್ರಗತಿಪರ ಜನಸಂಘಟನೆಗಳು ಸಂಘಟಿಸಿದ್ದವು.

ಅಕ್ಟೋಬರ್ 23 ರಂದು ನೀರಾವರಿ ಪಂಪ್‌ಸೆಟ್ ವಿದ್ಯುತ್ ಬಳಕೆದಾರರ ಹೋರಾಟ ಸಮಿತಿ ಹಮ್ಮಕೊಂಡ ಕೆಪಿಟಿಸಿಎಲ್ ಕಛೇರಿ ಮುತ್ತಿಗೆ ಕಾರ್ಯಕ್ರಮದ ಭಾಗವಾಗಿ ಉತ್ತರ ಕನ್ನಡ ಹೊನ್ನಾವರದಲ್ಲಿ ವಿದ್ಯುತ್ ಗ್ರಾಹಕ ಕೆಪಿಟಿಸಿಎಲ್



ಕಛೇರಿಗೆ ಮುತ್ತಿಗೆ ಹಾಕಿ ಅಧಿಕಾರಿಗಳಿಗೆ ಸುಮಾರು ಎರೂಡವರೆ ಘೇರಾವ್ ಹಾಕಿದರು. ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸಲು ಒಂದು ತಿಂಗಳಲ್ಲಿ ಗ್ರಾಮಮಟ್ಟದ ಸಭೆ ನಡೆಸುತ್ತೇನೆ ಮತ್ತು ಅಲ್ಲಿಯವರೆಗೆ ಬಿಲ್ ಕಟ್ಟಬೇಕಾಗಿಲ್ಲ ಎಂದು ಭರವಸೆ ಕೊಟ್ಟ ನಂತರ ಬಿಡುಗಡೆ ಮಾಡಿದರು. ನಂತರ ತಹಶೀಲ್ದಾರ್ ಕಛೇರಿಗೆ ಮೆರವಣಿಗೆ ಮಾಡಿ ಮುಖ್ಯಮಂತ್ರಿಗಳಿಗೆ ಮನವಿ ಕೊಡಲಾಯಿತು.


ಮುತ್ತಿಗೆಯಲ್ಲಿ ಕೆಪಿಆರ್‌ಎಸ್ ನ ಶಾಂತರಾಮ ನಾಯಕ, ಸಿಐಟಿಯು ವಿನ ತಿಲಕಗೌಡ, ಹೋರಾಟ ಸಮಿತಿಯ ಅಧ್ಯಕ್ಷ ಎನ್.ಎಲ್.ಹೆಗಡೆ, ಪಿ.ಎಸ್.ಭಟ್ಟ, ಎಸ್.ಎಂ.ನಾಯ್ಕ, ಪಿ.ಟಿ.ನಾಯ್ಕ, ಡಿವೈಎಫ್‌ಐನ ವಿಠ್ಠಲಭಂಡಾರಿ ಮುಂತಾದವರು ಭಾಗವಹಿಸಿದ್ದರು.

ರಸ್ತೆ ಭ್ರಷ್ಟಾಚಾರ -ವಿನೂತನ ಪ್ರತಿಭಟನೆ.....

ಸಚಿವೆ ಭರವಸೆ

ಮಧ್ಯಾಹ್ನ 2 ಗಂಟೆಗೆ ನೆರೆದಿದ್ದ ಮಕ್ಕಳು, ಸ್ತ್ರೀಯರನ್ನೊಳಗೊಂಡಂತೆ ಪ್ರತಿಭಟನೆ ನಡೆಸುತ್ತಿದ್ದ ಎಲ್ಲರೂ 7 ಕಿ.ಮೀ ದೂರದಲ್ಲಿರುವ ತಹಶೀಲ್ದಾರ್ ಕಛೇರಿಗೆ ನಡೆದೇ ಹೊರಟರು. ದಾರಿ ಉದ್ದಕ್ಕೂ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ತಹಶೀಲ್ದಾರ್ ಕಛೇರಿ ಎದುರು ಧರಣಿ ಕುಳಿತ ಚಳುವಳಿಕಾರರು ಘೋಷಣೆ ಮುಗಿಲು ಮುಟ್ಟುವಂತಿತ್ತು. ಶೀಘ್ರವಾಗಿ ರಸ್ತೆ ದುರಸ್ತಿಗೊಳಿಸಬೇಕು, ಬಸ್ಸಿನ ಸೌಕರ್ಯ ಒದಗಿಸಬೇಕು ಎಂದು ಒತ್ತಾಯಿಸಿದರು ಸುಮಾವಸಂತ್‌ರಿಗೆ, ಅವರ ಜನದ್ರೋಹಿ ನೀತಿಗೆ ದಿಕ್ಕಾರ ಕೂಗಿದರು. ಜನತೆಯ ಪ್ರತಿಭಟನೆ ತೀವ್ರಗೊಂಡಿದ್ದನ್ನು ಅರಿತ ಸಚಿವೆ ಸುಮಾವಸಂತ್ ಕೊನೆಗೂ ಪ್ರತಿಭಟನಾ ಸ್ಥಳಕ್ಕೆ ಬಂದು ಇನ್ನು ಎರಡು ತಿಂಗಳಲ್ಲಿ ರಸ್ತೆ ದುರಸ್ತಿಗೊಳಿಸುವುದಾಗಿ ಭರವಸೆ ನೀಡಿದರು. ಇತರ ಬೇಡಿಕೆಗಳನ್ನು ಈಡೇರಿಸುವುದಾಗಿ ಭರವಸೆ ನೀಡಿದ ನಂತರ ಚಳುವಳಿಯನ್ನು ತಾತ್ಕಾಲಿಕವಾಗಿ ಹಿಂತೆಗೆದುಕೊಂಡಿದ್ದಾರೆ. ಹದಿನೈದು ದಿನಗಳಲ್ಲಿ ಬಸ್ ಸೌಕರ್ಯ ಒದಗಿಸದಿದ್ದರೆ ಹೋರಾಟವನ್ನು ಮತ್ತೆ ಕೈಗೆತ್ತಿಕೊಳ್ಳುವುದಾಗಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ ಹೋರಾಟ ಸಮಿತಿ. ಯಾವುದೇ ಅಪಪ್ರಚಾರಗಳಿಗೂ, ಕುತಂತ್ರಗಳಿಗೂ ಬಲಿಬೀಳದೆ ಐಕ್ಯತೆಯಿಂದ ಹೋರಾಡಿದ ಇಲ್ಲಿನ ಜನತೆಯನ್ನು ಹೋರಾಟ ಸಮಿತಿ ಅಭಿನಂದನೆ ಸಲ್ಲಿಸಿದೆ.

ವಿಜಯ್ ಹೆಗ್ಗಳ
ಸಿದ್ಧಯ್ಯ, ಬೆಂ.



ನಿರಾಶ್ರಿತರ ಹೋರಾಟದ ದಂತಕತೆಯಾದ ಕಾಂ. ಪ್ರಾಣ ಕೃಷ್ಣ ಚಕ್ರವರ್ತಿ ನಿಧನ

ಪಶ್ಚಿಮ ಬಂಗಾಳದಲ್ಲಿ ನಿರಾಶ್ರಿತರ ಹೋರಾಟದ ದಂತಕತೆಯಾಗಿದ್ದ ಪಕ್ಷದ ಹಿರಿಯ ಸಂಘಟಕರಲ್ಲೊಬ್ಬರಾದ ಕಾಂ। ಪ್ರಾಣ ಕ್ರಿಷ್ಣ ಚಕ್ರವರ್ತಿ ಅಕ್ಟೋಬರ್ 21 ರಂದು ಅನಾರೋಗ್ಯದಿಂದ ನಿಧನ ಹೊಂದಿದರು. ಕಾಂ। ಚಕ್ರವರ್ತಿಯವರು ಅಪಾರ ಸಂಗಾತಿಗಳನ್ನು ಹೆಂಡತಿ ಮತ್ತು ಮೂರು ಹೆಣ್ಣು ಮಕ್ಕಳನ್ನು ಬಿಟ್ಟು ಅಗಲಿದ್ದಾರೆ.

ಪಂದಪುರ ಜಿಲ್ಲೆಯ ರುದ್ರಾಗರ (ಇಂದಿನ ಬಾಂಗ್ಲಾದೇಶದಲ್ಲಿ) ಹುಟ್ಟಿದ ಕಾಂ। ಚಕ್ರವರ್ತಿಯವರು ನಿಷೇಧಿತ ಕ್ರಾಂತಿಕಾರಿ ಸಂಘಟನೆಯಾದ ಅನುಶೀಲನ ಸಮಿತಿಯಲ್ಲಿ ಕೆಲಸ ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಅವರು ವೈದ್ಯಕೀಯ ಶಿಕ್ಷಣದಿಂದ ಹೊರದೂಡಲ್ಪಟ್ಟರು.

1937ರಲ್ಲಿ ಕಾಂ। ಚಕ್ರವರ್ತಿಯವರು ಬ್ರಿಟಿಷ್ ಪೊಲೀಸ್‌ರಿಂದ ತಪ್ಪಿಸಿಕೊಳ್ಳಲು ಚಲಿಸುತ್ತಿರುವ ರೈಲಿನಿಂದ ಧುಮಕಿದರು. ನಂತರದಲ್ಲಿ ಅವರ ಬಂಧನವಾಗಿ ಕೋರ್ಟ್ ಜೀವನ ಪೂರ್ತಿ ಜೈಲು ಶಿಕ್ಷೆ ವಿಧಿಸಿ ಅಂಡಮಾನ್ ಮತ್ತು ಡಾಕಾ ಕೇಂದ್ರ ಜೈಲಿನಲ್ಲಿ ಇಡಲಾಗಿತ್ತು. 1946ರಲ್ಲಿ ಬಿಡುಗಡೆಯಾದ ನಂತರ ಕಮ್ಯುನಿಷ್ಟ್ ಪಕ್ಷ ಸೇರಿದರು. ಇವರು ಜೈಲಿನಲ್ಲಿದ್ದ ಸಂದರ್ಭದಲ್ಲಿ ಇವರ ಪ್ರಭಾವದಿಂದ ಡಾ। ನಾರಾಯಣರಾಯ ಮತ್ತು ನಿರಂಜನ ಸೇನ್ ಗುಪ್ತ ಕಮ್ಯುನಿಸ್ಟ್‌ರಾಗಿ ನಂತರ ಮುಖಂಡರಾದರು. ಕಾಂ। ಚಕ್ರವರ್ತಿಯವರು 1964ರಲ್ಲಿ ಸಿಪಿಐ(ಎಂ) ಸೇರಿದರು.

ಪೂರ್ವ ಪಾಕಿಸ್ತಾನದ ನಿರಾಶ್ರಿತರಾದ ಬಡಜನರ ಪುನರ್ ವಸತಿಗಾಗಿ ಯು.ಸಿ.ಆರ್.ಸಿ. ಎನ್ನುವ ಅತಿದೊಡ್ಡ ಶಿರಾಶ್ರಿತರ ಸಂಘಟನೆಯಲ್ಲಿ ನಾಯಕರಾಗಿ ಕೆಲಸ ಮಾಡಿದರು. ನಿರಾಶ್ರಿತರ ಮಧ್ಯದಲ್ಲೇ ಬದುಕಿದ ಕಾಂ। ಚಕ್ರವರ್ತಿಯವರು ನಿರಾಶ್ರಿತರ ಪ್ರೀತಿ ಗೌರವಕ್ಕೆ ಪಾತ್ರರಾಗಿದ್ದರು. ನಿರಾಶ್ರಿತರ ಬಗ್ಗೆ ಕಾಂಗ್ರೆಸ್ ಸರಕಾರದ ಮಾನವ ವಿರೋದಿ ನೀತಿಯ ವಿರುದ್ಧ ಹೋರಾಟ ಮಾಡಿದರು. ಅಲ್ಲಿಂದ ಇವರ ಎತ್ತಂಗಡಿಗೆ ಪ್ರಯತ್ನ ಆ ಕಾಲದಲ್ಲಿ ನಡೆಯಿತು.

ಅಕ್ಟೋಬರ್ 22 ರಂದು ಬೆಳಿಗೆ ಕಲ್ಕತ್ತದ ಸಿಪಿಐ(ಎಂ) ಕಛೇರಿಯಲ್ಲಿ ಅವರ ಪಾರ್ಥಿವ ಶರೀರವನ್ನು ಇಡಲಾಗಿತ್ತು. ಪಿ.ಬಿ. ಸದಸ್ಯರಾದ ಕಾಂ। ಜ್ಯೋತಿ ಬಸು, ಕಾಂ। ಬೀಮನ ಬಸು, ಅನಿಲ್ ಬಿಸ್ವಾಸ್ ಹೀಗೆ ಸಾವಿರಾರು ಸಂಗಾತಿಗಳು ಅಂತಿಮ ನಮನ ಸಲ್ಲಿಸಿದರು.

ಟಾಟಾಗಳು ದೇಶದಲ್ಲೆಲ್ಲ ನೀತಿ ನಿಮಯವನ್ನು ಪಾಲಿಸುವವರು ಗುಣಮಟ್ಟದ ವ್ಯವಸ್ಥಾಪನೆ ನಡೆಸುವವರುಎಂಬುದು ಭಾರತೀಯ ಬೂರ್ಜ್ವಾ ವಲಯಗಳಲ್ಲಿ ಪ್ರತೀತಿಯಾಗಿತ್ತು. ಸಂದರ್ಭಗಳು ಬಂದರೆ ಇಂತಹ ಪೊರೆಗಳೂ ಕಳಚಿ ನಿಜಸ್ವರೂಪ ಹೊರಗೆ ಬರುತ್ತದ್ದೆನ್ನುವುದು ಟಾಟಾ ಫೈನಾನ್ಸ್ ಲಿಮಿಟೆಡ್‌ನ ಪ್ರಕರಣದಿಂದಾಗಿ ಗೊತ್ತಾಗಿಹೋಗಿದೆ. ಟಾಟಾ ಫೈನಾನ್ಸ್ ಲಿಮಿಟೆಡ್(ಟಿಎಫ್‌ಎಲ್) ನ ವಿವಾದ ಒಂದು ವರ್ಷದಷ್ಟು ಹಳೆಯದು. ದಿನದಿಂದ ದಿನಕ್ಕೆ ಅದರ ರಷ್ಟು ಹೂರಣವೂ ಹೊರಗೆಬರುತ್ತಿದೆ. ಅದರ ವಿವರಗಳ ಲೇಖನವಿಲ್ಲಿ.

ಹಗರಣಗಳು ಮತ್ತು ದೊಡ್ಡ ಬಂಡವಾಳಗಾರರ ನ್ಯಾಯ

ದಿಲೀಪ್ ಪೆಂಡ್ಸೆ ಎಂಬ ವಿಶ್ವಾಸಾರ್ಹ ನಿರ್ದೇಶಕ ಟಾಟಾ ಸನ್ಸ್‌ನ ಕಾರ್ಯನಿರ್ವಾಹಕ ಚೇರಮನ್ ರತನ್ ಟಾಟಾಗೆ ಟಿಎಫ್‌ಎಲ್‌ನಲ್ಲಿ ನಡೆಯುತ್ತಿದ್ದುದೆಲ್ಲ ಮತ್ತು ಅದು ಮಾಡಿದ ಕಾನೂನು ಉಲ್ಲಂಘನೆಗಳೆಲ್ಲ ಗೊತ್ತಿದ್ದವು ಎಂದಿದ್ದಾನೆ.

ಲಾಭ ಬಾಚುವ ವ್ಯವಹಾರದತ್ತ.ಟಿಎಫ್‌ಎಲ್ ಒಂದು ಬ್ಯಾಂಕೇತರ ಹಣಕಾಸು ಕಂಪನಿ. ತೀರ ಇತ್ತೀಚಿನವರೆಗೆ ಅದು ಬಾಡಿಗೆ ಖರೀದಿ ವ್ಯವಹಾರ ಮಾಡುತ್ತಿತ್ತು. ಕಾರುಗಳು ಮತ್ತು ಇತರ ವಾಣಿಜ್ಯ ವಾಹನಗಳ ವ್ಯವಹಾರ ಅದರ ಒಟ್ಟು ವ್ಯವಹಾರದ ಶೇ 85 ರಷ್ಟು ಟಾಟಾಗಳ ಗುಂಪಿನ ಕಂಪನಿಗಳಲ್ಲಿ ಟೆಲ್ಕೊದಂತಹ ವಾಹನ ಉತ್ಪಾದಿಸುವ ಕಂಪನಿಯೂ ಇರುವುದರಿಂದ ಇದು ಸಹಜವೇ.

ಆದರೆ ಈ ಸರಿಸುಮಾರಿಗೆ ಹಣಕಾಸು ವಲಯ ವೇಗವಾಗಿ ಲಾಭ ಬಾಚಿಕೊಳ್ಳುವತ್ತ ನೀಡುವ ಅವಕಾಶದತ್ತ ಸೆಳೆತ ಹೆಚ್ಚಾಯಿತು. ಗೃಹ ಸಾಲ, ವಿದೇಶಿ ವಿನಿಮಯ ವ್ಯವಹಾರ, ವ್ಯಾಪಾರಿ ಬ್ಯಾಂಕಿಂಗ್, ಕ್ರೆಡಿಟ್ ಕಾರ್ಡ್, ಇತ್ಯಾದಿಗಳನ್ನೊಳಗೊಂಡ ಹಣಕಾಸಿನ ಸೂಪರ್ ಮಾರುಕಟ್ಟೆಯಾಗಿ ಟಿಎಫ್‌ಎಲ್‌ಅನ್ನು ಪರಿವರ್ತಿಸಲು ಯೋಜನೆಗಳು ಪ್ರಸ್ತಾಪಕ್ಕೆ ಬಂದವು.

ದಿಲೀಪ್ ಪೆಂಡ್ಸೆ ಎಂಬ ನಿರ್ದೇಶಕರ ನೇತೃತ್ವದಲ್ಲಿ **ಯೂನಿವರ್ಸಲ್ ಬ್ಯಾಂಕಾಗಿ** ಪರಿವರ್ತಿಸುವ ಈ ಕಾರ್ಯಕ್ರಮಕ್ಕೆ ಚಾಲನೆ ದೊರೆಯಿತು. ಇಂತಹ ಆಕ್ರಮಣಕಾರಿ ದಾರಿ ಟಿಎಫ್‌ಎಲ್ ಲಾಭಕ್ಕಾಗಿ ಹಲವು ನಿಯಮಗಳ ಉಲ್ಲಂಘನೆ ಮಾಡುವಂತೆ ಮಾಡಿತು. ಇಂತಹ ಒಂದು ದಾರಿ ಉಪಕಂಪನಿಗಳು ಅಥವಾ ಸಂಬಂಧಿತ ಕಂಪನಿಗಳಿಗೆ (ಉದಾಹರಣೆಗೆ ನಿಶ್ಕಲ್ಪ ಹೂಡಿಕೆ ಮತ್ತು ವ್ಯಾಪಾರಿ ಕಂಪನಿ ನಿಯಮಿತ) ದೊಡ್ಡ ಪ್ರಮಾಣದ ಬಂಡವಾಳದ ವರ್ಗಾವಣೆ ಮಾಡುವುದು. ಇದು ಬಹಳ ದುಭಾರಿ ದಾರಿಯಾಯಿತು. ಯಾಕೆಂದರೆ ನಿಷ್ಕಲ್ಪ್ ಶೇರು ಮಾರುಕಟ್ಟೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಹೂಡಿಕೆ ಮಾಡಿತು. ಇಂತಹ ಹೂಡಿಕೆ ನಿಷ್ಕಲ್ಪ್‌ಗೆ 1999-2000 ಸಾಲಿನಲ್ಲಿ ಲಾಭ ತಂದುಕೊಟ್ಟಿತ್ತು. ಆದರೆ 2000-2001 ನೇ ಸಾಲಿನಲ್ಲಿ ದೊಡ್ಡ ಮೊತ್ತದ ಹಾನಿಯಾಯಿತು.

ಅವ್ಯವಹಾರ

ಇದರ ಪರಿಣಾಮ ಟಿಎಫ್‌ಎಲ್ ಮೇಲೆ ಆಯಿತು. ಅದು 2000-01 ಸಾಲಿಗೆ 395.6 ಕೋಟಿ ರೂಪಾಯಿಗಳ ಹಾನಿ ತೋರಿಸಿತು. ಕೆಲವು ವರದಿಗಳ ಪ್ರಕಾರ ಸಹ ಕಂಪನಿಗಳಲ್ಲಿನ ಹೂಡಿಕೆ ಅಥವಾ ಅವುಗಳಿಗೆ ನೀಡಿದ ಸಾಲ ಮನ್ನಾ ಮಾಡಲು ಒಂದು ಸಾರಿಯ ಅಸಾಮಾನ್ಯ ಅವಕಾಶ ಮಾಡಿದ್ದರಿಂದ 315 ಕೋಟಿ ರೂಪಾಯಿಗಳ ಹಾನಿಯಾಯಿತು. ಇದಲ್ಲದೆ 72 ಕೋಟಿ ರೂಪಾಯಿಗಳ ಅವಕಾಶವನ್ನು ನಿಷ್ಪ್ರಯೋಜಕ ಆಸ್ತಿ(ಸಾಲಗಳು) ಮತ್ತು ಹೂಡಿಕೆಯ ಮೌಲ್ಯ ಕುಸಿದದ್ದರ ಬಗ್ಗೆ ಮಾಡಿದ್ದರಿಂದ ಆಗಿತ್ತು.

ಇಲ್ಲಿ ಟಿಎಫ್‌ಎಲ್ ಮಾಡಿದ ಅವ್ಯವಹಾರಕ್ಕೆ ಹೂಡಿಕೆಯೊಂದೇ ಸಮಸ್ಯೆಯಲ್ಲ. ಅದು ಹೂಡಿಕೆಯ ಬಗೆಗಿನ ನಿಯಮಗಳನ್ನು ಉಲ್ಲಂಘಿಸಿತ್ತು ಟಾಟಾ ಕಂಪನಿಗಳ ಘತನೆಗೂ ಮಸಿ ಬಳಿಯಿತು.

ಇನ್ಯಾಲ್ಲಾ ಹೂಡಿಕೆ ಕಂಪನಿ

ಇಲ್ಲಿ ಸೆಬಿ(ಭಾರತೀಯ ಶೇರು ವಿನಿಮಯ ಬೋರ್ಡ್) ಯ ನಿಯಮಗಳ ಉಲ್ಲಂಘನೆ ಎಂತಹ ಗುರುತರವಾದದ್ದು ಎಂಬುದಕ್ಕೆ ಉದಾಹರಣೆ

1. ಇನ್ಯಾಲ್ಲಾ ಹೂಡಿಕೆ ಕಂಪನಿಯಲ್ಲಿ ಶೇ 48 ರ ಶೇರು ಟಿಎಫ್‌ಎಲ್‌ದು. ಟಿಎಫ್‌ಎಲ್‌ನ ಆಂತರಿಕ ಲೆಕ್ಕ ತನಿಖಾಧಿಕಾರಿಗಳು ಇನ್ಯಾಲ್ಲಾದಲ್ಲಿನ ನಿರ್ದೇಶಕರು. ಹೀಗಿರುವಾಗ ಟಿಎಫ್‌ಎಲ್ ಒದಗಿಸಿದ ಹಣ ಬಳಸಿಕೊಂಡು ಟಿಎಫ್‌ಎಲ್‌ನ ಶೇರುಗಳ ವ್ಯವಹಾರದಲ್ಲೇ ತೊಡಗಿದ್ದು.
2. ಟಾಟಾ ಸನ್ಸ್ ಕಂಪನಿಯ ಜೊತೆ ನೇರ ಸಂಬಂಧವನ್ನು ಟಿಎಫ್‌ಎಲ್ ಹೊಂದಿತ್ತು. ಆದರೂ ಟಿಎಫ್‌ಎಲ್‌ನ ನಿರ್ಧಾರಗಳಿಗೆ ಉನ್ನತ ಮ್ಯಾನೇಜ್‌ಮೆಂಟಿನ ಒಬ್ಬೊಬ್ಬರನ್ನು ಮಾತ್ರ ಜವಾಬ್ದಾರರನ್ನಾಗಿ ಮಾಡಿದ್ದು.
3. ಈ ಎಲ್ಲಾ ನಿರ್ಧಾರಗಳ ದುಷ್ಪರಿಣಾಮಗಳನ್ನು ಮುಚ್ಚಿಹಾಕಲು ನಿಷ್ಕಲ್ಪ ಉಪ ಸಂಸ್ಥೆಯ ಸ್ಥಾನದಿಂದ ತೆಗೆದುಹಾಕಿ ನಿಯಮೇತರ ಮತ್ತು ಸಾಮಾನ್ಯ ಶೇರುದಾರರಿಂದ ಮುಚ್ಚಿಡಲಾಯಿತು.

ಈ ಘಟನೆಯನ್ನು ನೋಡಿ. ಟಿಎಫ್‌ಎಲ್ ಶೇರುದಾರರಿಗೆ 93 ಕೋಟಿ ರೂಪಾಯಿಗಳ ಹಕ್ಕಿನ ಶೇರು ನೀಡಲು ನಿರ್ಧರಿಸಿತು. ಜೆ.ಇ. ಟಾಟಾ ತಾಲೌಲಿಕರ್ ಎಂಬ ನಿಷ್ಕಲ್ಪದ ಚೇರಮನ್ ಮತ್ತು ಟಿಎಫ್‌ಎಲ್ ನ ನಿರ್ದೇಶಕ ತನ್ನಲ್ಲಿದ್ದ ಟಿಎಫ್‌ಎಲ್ ನ ಒಂದು ಲಕ್ಷ ಶೇರುಗಳನ್ನು ಪ್ರತಿ ಶೇರಿಗೆ 69 ರೂಪಾಯಿಗಳಂತೆ ಮಾರಿದರು. ಆಗ ಈ ಶೇರಿನ ಮಾರುಕಟ್ಟೆ ಬೆಲೆ 36 ರೂಪಾಯಿ ಮಾತ್ರ. ನಂತರ ಟಿಎಫ್‌ಎಲ್ ನ ಹಾನಿಗಳು ಬೆಳಕಿಗೆ ಬಂದು ಅದರ ಶೇರು ಬೆಲೆಗಳು ತೀವ್ರವಾಗಿ ಕುಸಿಯಿತು. ತಾಲೌಲಿಕರ್ ಆಂತರಿಕ ಮಾಹಿತಿಯನ್ನು ಬಳಸಿಕೊಂಡು ಲಾಭ ಮಾಡಿಕೊಂಡದ್ದು ಸ್ಪಷ್ಟ. ಈ ತಾಲೌಲಿಕರ್ ಪೆಂಡ್ಸೆ ಈ ಶೇರುಗಳ ಮಾರಾಟದ ವ್ಯವಸ್ಥೆ ಮಾಡಿದರು ಎಂದು ಹೇಳಿಕೆಯನ್ನು ಆಂತರಿಕ ತನಿಖಾ ಸಮಿತಿಗೆ ನೀಡಿದರು.

ಹುರುಳಿಲ್ಲದ ವಾದ

ಪೆಂಡ್ಸೆ ಈ ವ್ಯವಹಾರದಲ್ಲಿ ಒಳಗೊಂಡಿದ್ದರು ಎಂಬುದನ್ನು ಟಿಎಫ್ ಎಲ್ ನ ಆಡಳಿತ ಮಂಡಳಿಗೆ ತಿಳಿಸಿರಲಿಲ್ಲ ಎಂಬುದನ್ನು ಟಾಟಾ ಮ್ಯಾನೇಜ್‌ಮೆಂಟ್ ಇದು ಆತನ ಕ್ರಿಯೆಗಳಿಂದ ಉಂಟಾದದ್ದು ಎಂದು ಹೇಳಲು ಬಳಸಿಕೊಂಡಿತು. ಈ ವಾದದಲ್ಲಿ ಹುರುಳಿರಲು ಸಾಧ್ಯವೇ ಇರಲಿಲ್ಲ.

ಈ ವಾದದಲ್ಲಿ ಹುರುಳಿದೆ ಎಂದುಕೊಂಡರೂ ಆರಂಭದಲ್ಲಿ ಟಿಎಫ್‌ಎಲ್ ಮಾಡಿದ ಹಲವು ಅಕ್ರಮಗಳನ್ನು ಟಾಟಾಗಳು ಮುಚ್ಚಿಡಲು ಸಾಧ್ಯವಿಲ್ಲವಲ್ಲ. ಶೇರುದಾರರು ಶೇರು ಬೆಲೆ ಕುಸಿತದಿಂದ ಅಪಾರ ಹಾನಿ ಅನುಭವಿಸಿದರು. ನಿಷ್ಕಲ್ಪ್ ಟಿಎಫ್‌ಎಲ್‌ನ ಉಪಕಂಪನಿ ಪಟ್ಟವನ್ನು 2001 ರ ಜೂನ್ 20 ರಂದು ಕಳೆದುಕೊಂಡಿತು. ಈ ಕಂಪನಿಯನ್ನು ಎವಾರ್ಟ್ ಇನ್‌ವೆಸ್ಟ್‌ಮೆಂಟ್ಸ್ ಎಂಬ ಕಂಪನಿ 40 ಕೋಟಿ ರೂಪಾಯಿಗಳಿಗೆ ಕೊಂಡುಕೊಂಡಿತು. ಆದರೆ ತಮಾಷೆಯೆಂದರೆ ಎವಾರ್ಟ್‌ಗೆ ಟಿಎಫ್‌ಎಲ್ ಹಣಕಾಸು ಒದಗಿಸಿತ್ತು. ಇದು ನಿಷ್ಕಲ್ಪ್‌ನ ಬ್ಯಾಲೆನ್ಸ್ ಶೀಟನ್ನು ತೊಳೆದು ಟಿಎಫ್‌ಎಲ್ ನ ಶೇರುದಾರರಿಗೆ ಈ ಅವ್ಯವಹಾರಗಳು ಗೊತ್ತಾಗದಂತೆ ನೋಡಿಕೊಳ್ಳುವ ಉದ್ದೇಶದಿಂದ ಮಾಡಿದ್ದು.

ಇದನ್ನು ಮಾಡಿದ ಮೇಲೆ ಟಾಟಾದ ಮ್ಯಾನೇಜ್‌ಮೆಂಟ್ ಉಲ್ಲಂಘನೆಗಳಿಗೆ ಪೆಂಡ್ಸೆ ಮತ್ತು ತಾಲೌಲಿಕರ್ ಅವರೇ ಜವಾಬ್ದಾರರೆಂಬಂತೆ ಬಿಂಬಿಸತೊಡಗಿತು. ಅದು ಎ.ಎಫ್.ಫರ್ಗುಸನ್ ಎಂಬ ಖ್ಯಾತ ಲೆಕ್ಕ ಪರಿಶೋಧನಕಾರರನ್ನು ಪರಿಶೋಧನೆಗೆ ನೇಮಿಸಿತ್ತು. ಈ ಸಂಸ್ಥೆಯ ಮುಖ್ಯಸ್ಥ, ಪಾಲುದಾರ ವೈ.ಎಂ.ಕಾಳೆ ಅವರು ವ್ಯವಸ್ಥಾಪನೆಯಲ್ಲಿನ ನ್ಯೂನ್ಯತೆಗಳೇನು ಮತ್ತು ಅವನ್ನು ಸರಿಪಡಿಸುವ ಕ್ರಮಗಳ ಬಗ್ಗೆ ಸಲಹೆ ನೀಡುವ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಯಿತು.

ಪೆಂಡ್ಸೆ ಅವರನ್ನು ಹುದ್ದೆಯಿಂದ ತೆಗೆದುಹಾಕಿ ಅವರ ವಿರುದ್ಧ ಪೋಲೀಸರಿಗೆ ಮತ್ತು ಸೆಬಿಗೆ ದೂರು ನೀಡಲಾಯಿತು.

ಈಗಿನ ವಿವಾದ ಕಾಳೆಯವರು ನೀಡಿದ 904 ಪುಟಗಳ ವರದಿಗೆ ಸಂಬಂಧಿಸಿದ್ದು. ಈ ವರದಿ ಪೆಂಡ್ಸೆಯವರಲ್ಲದೆ ಆಡಳಿತ ಮಂಡಳಿಯಲ್ಲಿನ ಇತರ ಹಲವರಿಗೆ ನಡೆಯುತ್ತಿದ್ದ ಉಲ್ಲಂಘನೆಗಳ ಬಗ್ಗೆ ಅರಿವಿತ್ತು ಎಂದು ಹೇಳಿದೆ.

ಈಗ ಈ ವರದಿಯ ಹಲವು ವಿವರಗಳನ್ನು ಮುಚ್ಚಿಡಲಾಗಿದೆ. ವರದಿಗಳ ಪ್ರಕಾರ ಹಲವು ವ್ಯವಹಾರಗಳು ಪ್ರಶ್ನಾರ್ಹ ಎಂದು ಅದು ಹೇಳಿದೆಯಂತೆ. ನಿಯಮಗಳ ಪಾಲನೆಗೆ ಮಾತ್ರ ಹಲವು ವ್ಯವಹಾರಗಳನ್ನು ಮಾಡಲಾಗಿದೆಯೋ ಅಥವಾ ಲಾಭ ಬಾಚಿಕೊಳ್ಳಲು ಮಾಡಲಾಗಿದೆಯೋ ಗೊತ್ತಾಗದು ಎಂದಿದೆ ಈ ವರದಿ.

ಇಂತಹ ವ್ಯವಹಾರಗಳ ಕೆಲವು ಉದಾಹರಣೆಗಳನ್ನು ನೋಡುವುದಾದರೆ (ಮಾಧ್ಯಮಗಳಲ್ಲಿ ವರದಿಯಾಗಿರುವಂತೆ) ಟಾಟಾ ಕಂಪನಿ ಹಲವು ಕಂಪನಿಗಳೆಲ್ಲ ಸೇರಿ ಒಂದು ಕಂಪನಿ ಲಾಭ ತೋರಿಸುವಂತೆ ವ್ಯವಹಾರ ನಡೆಸುತ್ತದೆ.ಉದಾಹರಣೆಗೆ ಐಇಸಿಐಎಲ್ ಕಂಪನಿ ಅಂತರ್ ಕಂಪನಿ ಠೇವಣೆಗಳನ್ನು ಗುಂಪಿನ ಬೇರೆ ಕಂಪನಿಗಳಿಂದ ಸ್ವೀಕರಿಸಿ ಅವುಗಳಿಗೆ ಬಡ್ಡಿ ನೀಡುತ್ತದೆ. ಬಡ್ಡಿ 68 ಲಕ್ಷ ರೂಪಾಯಿಗಳು. ಈ ಠೇವಣೆಗಳಿಂದ ಪಡೆದ ಹಣದಿಂದ ಟಿಎಫ್‌ಎಲ್‌ನ 13.3 ಲಕ್ಷ ಶೇರುಗಳನ್ನು 12.6 ಕೋಟಿ ರೂಪಾಯಿಗಳಿಗೆ ಕೊಳ್ಳಲಾಗುತ್ತದೆ. ಈ ಶೇರುಗಳನ್ನು ಮಾರುವ ಕಂಪನಿ ಶೋಭಾ ಪ್ರಾಪರ್ಟೀಸ್ ಎಂಬುದು. ಅದು ಟೆಲ್ಕೊದ ಉಪ ಕಂಪನಿ. ಇದರಿಂದಾಗಿ ಶೋಭಾ ಪ್ರಾಪರ್ಟೀಸ್ 6.5 ಕೋಟಿ ರೂಪಾಯಿಗಳ ಲಾಭ ಘೋಷಿಸುತ್ತದೆ.

ಇದೇ ರೀತಿ ಹಣದ ಕೊರತೆ ಕಂಡ ಕಂಪನಿ ಶೇರುಗಳನ್ನು ಮಾರುತ್ತದೆ. ಪುನಃ ಅದೇ ಶೇರುಗಳನ್ನು ಖರೀದಿಸುತ್ತದೆ. ಈ ಮೂಲಕ ಹಣ ವರ್ಗಾವಣೆ ಬೇಕಾದ ಹಾಗೆ ನಡೆಯುತ್ತದೆ.

ಇಷ್ಟೆಲ್ಲ ವ್ಯವಹಾರಗಳು ನಡೆಯುತ್ತಿರುವಾಗ ಟಾಟಾ ಆಡಳಿತದಲ್ಲಿ ತಮಗೆ ಏನು ನಡೆಯುತ್ತಿತ್ತೊ ತಿಳಿಯದು ಎಂದರೆ ನಂಬುವುದು ಸಾಧ್ಯವೇ ಇಲ್ಲ.

ಇಂತಹ ವರದಿಯನ್ನು ಸಲ್ಲಿಕೆಯಾದ ಕೆಲವೇ ದಿನಗಳಲ್ಲಿ ಟಾಟಾ ಆಡಳಿತ ತಿರಸ್ಕರಿಸಿತು. ಲೆಕ್ಕ ಪರಿಶೋಧನಾ ಸಂಸ್ಥೆಯೂ ವರದಿಯನ್ನು ಹಿಂತೆಗೆದುಕೊಂಡಿತು.

ಇದರ ನಂತರ ಕಾಳೆಯವರು ಫರ್ಗುಸನ್‌ನಲ್ಲಿನ ತಮ್ಮ ಹಿರಿಯ ಪಾಲುದಾರ ಸ್ಥಾನಕ್ಕೆ ರಾಜಿನಾಮೆ ನೀಡಿದರು. ಇದಕ್ಕೆ ಕಾರಣ ಅವರು ಸಂಸ್ಥೆ ತನ್ನ ವರದಿಯನ್ನು ಹಿಂತೆಗೆದುಕೊಳ್ಳುವುದನ್ನು ಒಪ್ಪದಿದ್ದುದು. ಆದರೆ ಫರ್ಗುಸನ್ ಹೇಳಿದ್ದು ಕಾಳೆಯ ವರದಿಯಲ್ಲಿ ಹಲವು ತಪ್ಪುಗಳಿದ್ದುದರಿಂದ ಅವರನ್ನು ತೆಗೆದುಹಾಕಲಾಗಿದೆ ಎಂದು. ಪೆಂಡ್ಸೆಯವರೂ ಸಹ ಟಾಟಾ ಗುಂಪು ತಮ್ಮ ಹೆಸರಿಗೆ ತಗಲುವ ಮಸಿಯನ್ನು ತೆಗೆದುಹಾಕಲು ತನ್ನನ್ನು ಬಲಿಪಶು ಮಾಡಲಾಯಿತು ಎಂದಿದ್ದಾರೆ.

ಈ ವಿಷಯದಲ್ಲೂ ತಲೆ ತೂರಿಸಿದ ಟಾಟಾಗಳು ಫರ್ಗುಸನ್ ಸಂಸ್ಥೆಯಲ್ಲಿ ಕಾಳೆಯವರ ಬಗೆ ವಿಧಿಬದ್ಧವಾದ ವಿಚಾರಣೆ ನಡೆಸಲಾದ ನಂತರ ಅವರನ್ನು ಹೊರಹಾಕಲಾಯಿತು ಎಂಬ ಹೇಳಿಕೆಯನ್ನು ನೀಡಿತು. ಫರ್ಗುಸನ್ ಕಂಪನಿಯ ಒಳಾಡಳಿತದ ಬಗ್ಗೆ ಟಾಟಾಗಳೇಕೆ ಮೂಗು ತೂರಿಸಬೇಕು?

ಈ ಮೇಲಿನ ಘಟನಾವಳಿಗಳನ್ನು ನೋಡಿದರೆ ಮೂರು ತೀರ್ಮಾನಗಳಿಗೆ ಬರಬಹುದು.

1. ಮೊದಲನೆಯದಾಗಿ ಭಾರತದ ಗುಂಪು ಕಂಪನಿಗಳ(ದೊಡ್ಡ ಬಂಡವಾಳಿಗರ) ವಿವಿಧ ತರಹದ (ಅ)ವ್ಯವಹಾರಗಳು ನಡೆಯುತ್ತಿರುತ್ತವೆ. ಉದಾರೀಕರಣವು ನಿಯಮಾವಳಿಗಳನ್ನು ಬಹಳ ತೆಳುಗೊಳಿಸಿದೆ.

2. ಅನೈತಿಕವಾಗಿ ಬಂದ ಲಾಭವನ್ನು ಇತರ ಕಂಪನಿಗಳ ಶೇರುಗಳ ಮಾರುಕಟ್ಟೆ ಬೆಲೆ ಏರಿಸಲು ಬಳಸಬಹುದು.

3. ಲೆಕ್ಕ ಪರಿಶೋಧನೆಯಲ್ಲಿ ಭಾರತದಲ್ಲೇ ಅತ್ಯುತ್ತಮ ಎಂಬುವರೂ ತಮ್ಮ ಗ್ರಾಹಕರಿಂದ ಸ್ವತಂತ್ರರಲ್ಲ.


ಮೂಲ : **ಸಿ.ಪಿ.ಚಂದ್ರಶೇಖರ್**

ಸಂಗ್ರಹಾನುವಾದ: **ಜಿ.ಎಸ್.ಮಣಿ**

ಖಾಸಗೀಕರಣ ತಿರಸ್ಕರಿಸಿದ ಬ್ರಿಟಿಷ್ ಲೇಬರ್ ಸಮ್ಮೇಳನ

ಈಗಿನ ಟೋನಿಬ್ಲೇರ್‌ರ ಬ್ರಿಟಿಷ್ ಲೇಬರ್ ಸರ್ಕಾರ, ಅಮೆರಿಕದ ಅಧ್ಯಕ್ಷ ಬುಶ್ ಸರ್ಕಾರದ ನಂತರದ ಅತ್ಯಂತ ಪ್ರತಿಗಾಮಿ ಸರ್ಕಾರ. ಅಂತರ್ರಾಷ್ಟ್ರೀಯ ನೀತಿಗಳಲ್ಲಾಗಲೀ (ಉದಾ: ಇರಾಕ್ ಮೇಲೆ ಯುದ್ಧ) ಆರ್ಥಿಕ ನೀತಿಗಳಲ್ಲಾಗಲೀ(ಸಾರ್ವಜನಿಕ ಸೇವೆಗಳಲ್ಲಿ ಕಡಿತ) ಟೋನಿ ಬ್ಲೇರ್ ಸರ್ಕಾರ 80 ರ ದಶಕದ ಕುಖ್ಯಾತ ಥ್ಯಾಚರ್ ಸರ್ಕಾರವನ್ನು ಮೀರಿಸಿದೆ ಎಂದು ಬ್ರಿಟನ್‌ನಲ್ಲಿ ಸರ್ವಸಮ್ಮತ ಅಭಿಪ್ರಾಯ. ಬ್ರಿಟನ್‌ನ ಕಲ್ಯಾಣ ರಾಜ್ಯ(ಸಾರ್ವತ್ರಿಕ ಆರೋಗ್ಯ ಮತ್ತು ಶಿಕ್ಷಣ ಸೇವೆ)ದ ಮೇಲೆ ತೀವ್ರ ಧಾಳಿ ಆರಂಭಿಸಿದ್ದು ಥ್ಯಾಚರ್. ಆದರೆ ಆ ಧಾಳಿ ಕಲ್ಯಾಣರಾಜ್ಯವನ್ನು ನಾಶ ಮಾಡುವ ಮೊದಲೇ ಆಕೆ ಸರ್ಕಾರ ಕೆಳಗಿಳಿಯಬೇಕಾಯಿತು. ಆಕೆಯ 'ಅಪೂರ್ವ ಕೆಲಸ'ವನ್ನು ಬ್ಲೇರ್ ಸರ್ಕಾರ ಪೂರ್ಣ ಮಾಡಲು ಪ್ರಯತ್ನಿಸುತ್ತಿದೆ ಎಂದು ಬ್ರಿಟಿಷರು ವ್ಯಂಗ್ಯವಾಡುತ್ತಿದ್ದಾರೆ. ಟೋನಿ ಬ್ಲೇರ್ ಈ ಯೋಜನೆಗೆ ತೀವ್ರ ಹಿನ್ನಡೆ ಆಗಿದೆ.

ಇತ್ತೀಚೆಗೆ ನಡೆದ ಲೇಬರ್ ಪಕ್ಷದ ವಾರ್ಷಿಕ ಸಮ್ಮೇಳನ ಸಾರ್ವಜನಿಕ ಸೇವೆಯ ಖಾಸಗೀಕರಣದ ಬಗ್ಗೆ ಬ್ಲೇರ್ ಸರ್ಕಾರದ ಪ್ರಸ್ತಾವಗಳನ್ನು ಮೂರನೇ ಎರಡು ಬಹುಮತದಿಂದ ತಿರಸ್ಕರಿಸಿತು. ಸಾರ್ವಜನಿಕ ಸೇವೆಗಳಲ್ಲಿ ಖಾಸಗಿ ಬಂಡವಾಳ ತೊಡಗಿಸುವ ಬಗೆಗಿನ ಎರಡು ಯೋಜನೆಗಳನ್ನು ಸ್ವತಂತ್ರ ಪುನರ್ ವಿಮರ್ಶೆಗೆ ಒಳಪಡಿಸಬೇಕು ಎಂದು ಲೇಬರ್ ಸಮ್ಮೇಳನ ನಿರ್ಧರಿಸಿತು. ಈ ಬಗೆಗಿನ ನಿರ್ಣಯ ಮೂರನೇ ಎರಡು ಬಹುಮತದಿಂದ ಮಂಜೂರಾಯಿತು. ಈ ಸೋಲಿನಿಂದ ಬ್ಲೇರ್ ಸರ್ಕಾರಕ್ಕೆ ಮುಖಭಂಗವಾದಂತಾಗಿದೆ. ಇದರಿಂದ ಲೇಬರ್ ಪಕ್ಷ ಮತ್ತು ಸರ್ಕಾರದ ನಡುವಿನ ಕಂದಕ ಇನ್ನಷ್ಟು ಹೆಚ್ಚಿದಂತಾಗಿದೆ. ಸರ್ಕಾರದ ಪ್ರತಿನಿಧಿಗಳು ಮತ್ತು ಪಕ್ಷದಲ್ಲಿ ಬ್ಲೇರ್ ಬೆಂಬಲಿಗ ನಾಯಕರು ಈ ಸೋಲನ್ನು ತಡೆಯಲು ಎಲ್ಲಾ ಪ್ರಯತ್ನಗಳನ್ನು ಮಾಡಿದರು. ಆದರೆ ಸಮ್ಮೇಳನದ ಪ್ರತಿನಿಧಿಗಳಲ್ಲಿ ಈ ಯೋಜನೆಗಳ ಬಗ್ಗೆ ತೀವ್ರ ಆಕ್ರೋಶವಿತ್ತು. ಅದರಲ್ಲೂ ಬಹುಮತದಲ್ಲಿರುವ ಟ್ರೇಡ್ ಯೂನಿಯನ್ ಪ್ರತಿನಿಧಿಗಳಲ್ಲಿ ಈ ಬಗ್ಗೆ ಸ್ಪಷ್ಟ



ಟೋನಿ ಬ್ಲೇರ್

ವಿರೋಧವಿತ್ತು. ವಿವಾದಕ್ಕೆ ಒಳಗಾದ ಈ ಎರಡು ಯೋಜನೆಗಳೆಂದರೆ - Public PrivatePartnership (PPP- ಸಾರ್ವಜನಿಕ ಖಾಸಗಿ ಸಹಭಾಗಿತ್ವ) ಮತ್ತು Private Funding Initiative (PFI-ಖಾಸಗಿ ಧನಸಹಾಯ ಯೋಜನೆ). NHS ಎಂದು ಕರೆಯಲಾಗುವ ಬ್ರಿಟಿಷ್‌ನ ಸಾರ್ವಜನಿಕ ಆರೋಗ್ಯ ಸೇವೆ, ಸ್ಥಳೀಯ ಆಡಳಿತ ಸಂಸ್ಥೆಗಳು ಕೊಡುವ ಸೇವೆಗಳು ಮತ್ತು ಸ್ಕೂಲುಗಳಲ್ಲಿ ಈ ಎರಡು ಯೋಜನೆಗಳಲ್ಲಿ ಖಾಸಗಿ ಬಂಡವಾಳ ತೊಡಗಿಸಲಾಗಿದ್ದು, ಭಾರಿ ಲಾಭ ಕೊಡುವ ಮೂಲಕ ಸಾರ್ವಜನಿಕ ಹಣದ ಲೂಟಿ ಮಾಡಲಾಗುತ್ತದೆ. ಈಯೋಜನೆಗಳಲ್ಲಿ ನಡೆಸಲಾಗುತ್ತಿರುವ ಹಲವು ಸೇವೆಗಳಲ್ಲಿ ಒಂದುಕಡೆ ಖಾಸಗಿ ಬಂಡವಾಳ ಶೇಕಡಾ 20 ರಿಂದ 30 ಲಾಭ ಹೊಡೆಯುತ್ತಿದೆ. ಇನ್ನೊಂದು ಕಡೆ ಸೇವೆಗಳು ಸೊರಗುತ್ತಿವೆ, ಕಡಿತಗೊಳ್ಳುತ್ತಿವೆ. ಅಲ್ಲಿ ಕೆಲಸ ಮಾಡುವ ಕಾರ್ಮಿಕರನ್ನು ಕಡಿತ ಮಾಡಲಾಗುತ್ತಿದೆ. ಈ ವಿಪರ್ಯಾಸವೇ ಜನತೆ, ಮತ್ತು ಲೇಬರ್ ಸಮ್ಮೇಳನದ ಪ್ರತಿನಿಧಿಗಳ ಆಕ್ರೋಶಕ್ಕೆ ಕಾರಣ. ಪ್ರತಿನಿಧಿಗಳು ಒಂದಾದಮೇಲೊಂದರಂತೆ ಈ ಎರಡು ಯೋಜನೆಗಳ ವೈಫಲ್ಯ, ಲೂಟಿಗಳ ಬಗ್ಗೆ ಮಾತನಾಡಿ ಇದನ್ನು ತಕ್ಷಣ ನಿಲ್ಲಿಸಬೇಕು ಎಂದು ಒತ್ತಾಯಿಸಿದರು. ಸಾರ್ವಜನಿಕ ಸೇವೆಗಳಲ್ಲಿ ಹಣ ತೊಡಗಿಸುವುಕ್ಕಿಂತ ಹೆಚ್ಚಾಗಿ ಸಾರ್ವಜನಿಕ ಸೇವೆಗಳ ಮ್ಯಾನೇಜ್‌ಮೆಂಟ್‌ನ್ನು ಖಾಸಗಿಯವರಿಗೆ ಕೊಡುವ ಮೂಲಕ ಸಾರ್ವಜನಿಕ ಹಣ ಲಾಭದ ರೂಪದಲ್ಲಿ ಲೂಟಿಯಾಗುತ್ತಿದೆ ಎಂದರು.

ಕಳೆದ ಎರಡು ವರ್ಷಗಳಲ್ಲಿ ಇದು ಎರಡನೇ ಬಾರಿ ಸರ್ಕಾರದ ಒಂದು ಯೋಜನೆಯನ್ನು ಆಳುವ ಪಕ್ಷದ ಸಮ್ಮೇಳನ ತಿರಸ್ಕರಿಸಿರುವುದು. ಹಿಂದೆ ಒಂದು ಬಾರಿ ಇದು ಆಗಿತ್ತು. ಆಗ ಬ್ಲೇರ್ ಸರ್ಕಾರ ಅದನ್ನು ತಿರಸ್ಕರಿಸಿ ತನ್ನ ಯೋಜನೆ ಮುಂದುವರಿಸಿತ್ತು. ಈಗಲೂ ಅದೇ ಮಾಡುತ್ತೋ ಎಂದು ಕಾದು ನೋಡಬೇಕಾಗಿದೆ. ಆದರೆ ಈ ಬಾರಿ ಸಾರ್ವಜನಿಕರಲ್ಲಿ, ಪಕ್ಷದಲ್ಲಿ ಎರಡರಲ್ಲೂ ವಿರೋಧ ಅತ್ಯಂತ ಪ್ರಬಲವಾಗಿದೆ. ಈ ಬಾರಿ ಬ್ಲೇರ್ ಅದೇರೀತಿ ಮಾಡಿದರೆ, ಪಕ್ಷ ಇಬ್ಭಾಗವಾಗುವ ಸೂಚನೆ ಇದೆ. ಬ್ಲೇರ್ ಮಂತ್ರಿ ಮಂಡಲದಲ್ಲೇ ಈ ಬಗ್ಗೆ ತೀವ್ರ ಭಿನ್ನಾಭಿಪ್ರಾಯ ಇದೆ. ಇರಾಕ್ ಮೇಲೆ ಯುದ್ಧದ ಬಗ್ಗೆ ಅಮೆರಿಕದ ಬಾಲಂಗೋಚಿಯಾಗುತ್ತಿರುವ ಬ್ಲೇರ್ ಸರ್ಕಾರ ಜನತೆಯ ತೀವ್ರ ಆಕ್ರೋಶಕ್ಕೆ ಒಳಗಾಗಿದೆ.

ಇರಾಕ್ ಜನತೆಗೆ ಅರಬ್ ಕಮ್ಯುನಿಸ್ಟ್ ಪಕ್ಷಗಳ ಬೆಂಬಲ

ಆರು ಅರಬ್ ದೇಶಗಳ ಕಮ್ಯುನಿಸ್ಟ್ ಪಕ್ಷಗಳು ಇದೇ ಸೆಪ್ಟೆಂಬರ್ 16 ರಂದು ಸಭೆ ಸೇರಿ, ಅಮೆರಿಕನ್ ಯುದ್ಧ ಬೆದರಿಕೆ ವಿರುದ್ಧ ಇರಾಕ್ ಜನತೆಗೆ ಸೌಹಾರ್ದ ಬೆಂಬಲ ವ್ಯಕ್ತಪಡಿಸಿದ್ದಾರೆ. ಜೋರ್ಡಾನ್, ಇರಾಕ್, ಸಿರಿಯಾ, ಸೂಡಾನ್, ಲೆಬನಾನ್ ಮತ್ತು ಈಜಿಪ್ಟ್‌ನ ಕಮ್ಯುನಿಸ್ಟ್ ಪಕ್ಷಗಳು ಒಂದು ಜಂಟಿ ಹೇಳಿಕೆಯಲ್ಲಿ ಇರಾಕ್ ಮೇಲೆ ಆಕ್ರಮಣ ಮಾಡಿ ಆಯಕಟ್ಟಿನ ಮಧ್ಯ ಏಶ್ಯಾದ ಪ್ರದೇಶದಲ್ಲಿ ನೇರ ಹಿಡಿತ ಸಾಧಿಸುವ ಅಮೆರಿಕಾದ ಯೋಜನೆಯನ್ನು ಖಂಡಿಸಿವೆ.

ಇರಾಕ್‌ನ ಸದ್ದಾಂ ಹುಸೇನ್ ಸರ್ವಾಧಿಕಾರದ ಹಿಂದಿನ ಹಲವು ನೀತಿಗಳು - ಕ್ರಮಗಳು ಅಮೆರಿಕನ್ ಸಾಮ್ರಾಜ್ಯಶಾಹಿ ಈ ಪ್ರದೇಶದಲ್ಲಿ ಮೂಗು ತೂರಿಸಲು ಸಹಾಯಕವಾಗಿದೆ. ಇರಾಕ್‌ನಲ್ಲಿ ಮಾನವ ಹಕ್ಕುಗಳ ದಮನ, ಕುರ್ದಿಶ್ ದೇಸಿ ಸಮಸ್ಯೆ - ಇವುಗಳಿಗೆ ಪ್ರಜಾಸತ್ತಾತ್ಮಕ ಪರಿಹಾರ ಕಂಡುಕೊಳ್ಳದೆ ಸಾಮ್ರಾಜ್ಯಶಾಹಿ ವಿರುದ್ಧ ಇರಾಕಿ ಜನತೆಯ ಐಕ್ಯತೆ ಸಾಧಿಸುವುದು ಸಾಧ್ಯವಾಗುವುದಿಲ್ಲ. ಯುದ್ಧಕ್ಕೆ ವಿರೋಧ ವಾಗಿರುವ ಅಂತರ್ರಾಷ್ಟ್ರೀಯ ಸಮುದಾದಲ್ಲಿನ ಶಕ್ತಿಗಳ ಬೆಂಬಲ ಸಾಧ್ಯವಾಗುವುದಿಲ್ಲ ಎಂದು ಹೇಳಿಕೆ ಎಚ್ಚರಿಸಿದೆ. ಇರಾಕ್‌ನ ರಾಜಕೀಯ ವ್ಯವಸ್ಥೆಯನ್ನು ಬದಲಾಯಿಸುವುದು ಇರಾಕಿ ಜನತೆಗೆ ಸೇರಿದ್ದು. ಅದರಲ್ಲಿ ಯಾರೂ ಮೂಗು ತೂರಿಸಬಾರದು ಎಂತಲೂ ಜಂಟಿ ಹೇಳಿಕೆ ಆ ಬಗ್ಗೆ ತನ್ನ ನಿಲುವನ್ನು ಸ್ಪಷ್ಟಪಡಿಸಿದೆ.

ಜರ್ಮನಿಯಲ್ಲಿ ಸೋಶಲಿಸ್ಟರಿಗೆ ಜಯ

ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಜರ್ಮನಿಯಲ್ಲಿ ಆಳುವ ಸೋಶಲಿಸ್ಟ್ ಗ್ರೀನ್ ಪಕ್ಷದ ರಂಗ ಅಧಿಕಾರ ಉಳಿಸಿಕೊಂಡಿದೆ. ಸೋಶಲಿಸ್ಟ್ ಪಕ್ಷದ ಶ್ರೋಡರ್ ತನ್ನ ಛಾನ್ಸಲರ್ ಹುದ್ದೆಯನ್ನು ಉಳಿಸಿಕೊಂಡಿದ್ದಾರೆ. ಇತ್ತೀಚಿನ ಯುರೋಪಿಯನ್ ಚುನಾವಣೆ ಫಲಿತಾಂಶಗಳ ಧಾಟಿಗೆ ವಿರುದ್ಧವಾಗಿ ಬಲಪಂಥೀಯರಿಗೆ ಸೋಲಾಗಿದೆ - ಮಧ್ಯಮ ಪಂಥೀಯ ಶಕ್ತಿಗಳಿಗೆ ವಿಜಯವಾಗಿದೆ. ಆಳುವ ಸೋಶಲಿಸ್ಟ್ ಪಕ್ಷ ಸ್ವಲ್ಪವೇ ಬಹುಮತದಿಂದ ಗೆದ್ದುಬಂದಿದೆ.

ಸೋಶಿಯಲ್ ಡೆಮೊಕ್ರಾಟಿಕ್ ಪಕ್ಷ ಮತ್ತು ಪರಿಸರವಾದಿ ಗ್ರೀನ್ ಪಾರ್ಟಿ ಆಳುವ ರಂಗದ ಪಕ್ಷಗಳು. ಕ್ರಿಶ್ಚಿಯನ್ ಡೆಮೊಕ್ರಾಟಿಕ್ ಪಕ್ಷ (CDU) ಮತ್ತು ಕ್ರಿಶ್ಚಿಯನ್ ಸೋಶಲಿಸ್ಟ್ ಪಕ್ಷ (CSU) ಕೂಟ ಪ್ರಮುಖ ವಿರೋಧಿಯಾಗಿತ್ತು. ಆಗಸ್ಟ್ ಕೊನೆಯವರೆಗೆ CDU-CSU ಕೂಟ ಖಂಡಿತ ಗೆಲ್ಲುತ್ತವೆಂದು ಜನಮತ ಸಂಗ್ರಹ ವರದಿಗಳು ಹೇಳಿದ್ದವು. ಅದೂ 10 ಪ್ಯಾಯಿಂಟುಗಳಷ್ಟು CDU-CSU ಮುಂದಿತ್ತು. ಇದಕ್ಕೆ ಮುಖ್ಯವಾಗಿ ಆರ್ಥಿಕರಂಗದಲ್ಲಿ ಆಳುವ ರಂಗ ತೀವ್ರ ವೈಫಲ್ಯ ಕಂಡಿತ್ತು. ಆರ್ಥಿಕ ಚೇತರಿಕೆ ಆಗಿಲ್ಲ ಮಾತ್ರವಲ್ಲ, ನಿರುದ್ಯೋಗ ಪ್ರಮಾಣ ಅಪಾಯಕಾರಿ ಮಟ್ಟದಲ್ಲಿದೆ. ಆರ್ಥಿಕ ಚೇತರಿಕೆ ಮತ್ತು ನಿರುದ್ಯೋಗದಲ್ಲಿ ಕಡಿತ ಆಗದಿದ್ದರೆ ತಾನು ಪುನಃ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಬೇರೆ ಛಾನ್ಸಲರ್ ಶ್ರೋಡರ್ ಹೇಳಿದ್ದರು - ಕಳೆದ ಚುನಾವಣೆಯ ಸಮಯದಲ್ಲಿ.

ಆದರೆ ಆಗಸ್ಟ್ ಕೊನೆಯಲ್ಲಿ ಛಾನ್ಸಲರ್ ಶ್ರೋಡರ್ ಹಾಕಿದ ಒಂದು ರಾಜಕೀಯ ದಾಳ ಆಳುವ ಕೂಟದ ಪುನರಾಯ್ಕೆಯಲ್ಲಿ ಸಹಾಯಕವಾಯಿತು. ಅಮೆರಿಕದ ಅಧ್ಯಕ್ಷ ಬುಶ್ ಇರಾಕ್ ಮೇಲೆ ಯುದ್ಧೋನ್ಮಾದದ ಕರೆ ಕೊಡುತ್ತಿದ್ದಂತೆ (ಜರ್ಮನಿ ಸೇರಿದಂತೆ) ಯುರೋಪಿನಲ್ಲಿ ಈಯುದ್ಧದ ವಿರುದ್ಧ ಮತ್ತು ಅದರಲ್ಲಿ ಯುರೋಪು ಭಾಗವಹಿಸುವುದರ ವಿರುದ್ಧ ತೀವ್ರ ಜನತೆಯ ಆಕ್ರೋಶ ವ್ಯಕ್ತವಾಯಿತು. 80 ರ ದಶಕದ ಭಾರಿ ಯುದ್ಧ-ವಿರೋಧಿ ಪ್ರದರ್ಶನವನ್ನು ನೆನಪಿಸುವ ಹಲವು ಮತಪ್ರದರ್ಶನಗಳು ನಡೆದವು. ಸಾರ್ವಜನಿಕ ಅಭಿಪ್ರಾಯದ 'ಗಾಳಿ'ಯ ವಾಸನೆ ಹಿಡಿದ ಶ್ರೋಡರ್ ಬುಶ್‌ರ ಇರಾಕ್ ಯುದ್ಧಕ್ಕೆ ತಮ್ಮ ವಿರೋಧ ಘೋಷಿಸಿದರು. ಇರಾಕ್ ಮೇಲೆ ಅಮೆರಿಕ ಯುದ್ಧ ಹೂಡಿದರೆ ಜರ್ಮನಿ ಅದರಲ್ಲಿ ಭಾಗವಹಿಸುವುದಿಲ್ಲ. ಇನ್ನೂ ಮುಂದೆ ಹೋಗಿ ವಿಶ್ವಸಂಸ್ಥೆ ಈ ಬಗ್ಗೆ ನಿರ್ಣಯ ಮಾಡಿದರೂ, ಜರ್ಮನಿ ಇರಾಕ್ ವಿರುದ್ಧ ಯುದ್ಧದಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳಿದರು. ಆಳುವ ಕೂಟದ ಇನ್ನೊಂದು ಪಕ್ಷ ಗ್ರೀನ್ ಪಕ್ಷ ಇನ್ನಷ್ಟು ಗಟ್ಟಿ ಅಮೆರಿಕ-ವಿರೋಧಿ ನಿಲುವು ತೆಗೆದುಕೊಂಡಿತು. ಗ್ರೀನ್ ಪಕ್ಷದ ನಾಯಕರೊಬ್ಬರು ಅಧ್ಯಕ್ಷ ಬುಶ್ ತಮ್ಮ ದೇಶದ ಆರ್ಥಿಕ-ಸಮಸ್ಯೆಗಳಿಂದ ಗಮನ ಬೇರೆಡೆ ಸೆಳೆಯಲು ಇರಾಕ್ ಯುದ್ಧ ಹೂಡಿದ್ದಾರೆ ಎಂದು ಹೇಳಿದುದಕ್ಕೆ ಅಮೆರಿಕದಲ್ಲಿ 'ಕೆಂಗಣ್ಣು' ಕಂಡರೂ, ಜರ್ಮನಿಯಲ್ಲಿ ಜನಪ್ರಿಯವಾಯಿತು. ಪ್ರಮುಖ ವಿರೋಧಿ CDU-CSU ಕೂಟ ಮೊದಲು ಅಮೆರಿಕನ್ - ಪರ ನಿಲುವು ಮತ್ತು ಆಮೇಲೆ ಜನರ 'ಮೂಡ್' ನೋಡಿ ವಿಶ್ವಸಂಸ್ಥೆಯ ನಿರ್ಣಯ ಇದ್ದರೆ ಮಾತ್ರ ಯುದ್ಧದಲ್ಲಿ ಭಾಗಹಿಸುತ್ತೇವೆ ಎಂಬ ನಿಲುವುಗಳ - ಗೊಂದಲದಲ್ಲಿದ್ದದ್ದು ಆ ಕೂಟಕ್ಕೆ ಮುಳುವಾಯಿತು ಎಂದು ಚುನಾವಣಾ ಫಲಿತಾಂಶಗಳು ತೋರಿಸುತ್ತವೆ.

ಉಳಿದ ಎರಡು ಪಕ್ಷಗಳಾದ FDP ಮತ್ತು PDS ಗಳಿಗೆ ಚುನಾವಣೆಯಲ್ಲಿ ಹಿನ್ನಡೆಯಾಗಿದೆ. ಹಿಂದಿನ ಜರ್ಮನ್ ಕಮ್ಯುನಿಸ್ಟ್ ಪಕ್ಷ PDS ಈ ಬಾರಿ ಪಾರ್ಲಿಮೆಂಟಿನಲ್ಲಿ ಸದಸ್ಯತ್ವ ಉಳಿಸಿಕೊಳ್ಳಲು ಬೇಕಾದ ಶೇಕಡಾ 5 ಮತ ಗಳಿಕೆ ಸಾಧಿಸದೇ ಹೋಯಿತು. ಇರಾಕ್ ಮೇಲೆ ಯುದ್ಧದ ವಿಷಯವನ್ನು ಚುನಾವಣೆಯಲ್ಲಿ ಮೊದಲು ಎತ್ತಿದ್ದರೂ, ಆಳುವ ರಂಗ ತನ್ನ ನೀತಿಯನ್ನು ಸರಿಯಾದ ಸಮಯದಲ್ಲಿ ಬದಲಿಸಿ ಅದರ ಪ್ರಯೋಜನ ಪಡೆಯಿತು. ಅಲ್ಲದೆ ಆಳುವ ಸೋಶಲಿಸ್ಟ್ ಕೂಟ ಮತ್ತು CDU-CSU ನಡುವಿನ ನೇರ ಪೈಪೋಟಿಯಲ್ಲಿ PDS ಗೆ ಕೊಡುವ ಮತ CDU-CSU ಗೆಲುವಿಗೆ ಸಹಾಯಕವಾಗಬಹುದು ಎಂದ ಭಾವನೆ PDS ಸೋಲಿಗೆ ಕಾರಣವಾಯಿತು. ಹಿಂದೆ CDU ನ ಸಹವರ್ತಿಯಾಗಿದ್ದ FDP ಈ ಬಾರಿ ಸ್ವತಂತ್ರವಾಗಿ ಸ್ಪರ್ಧಿಸಿ ಎರಡೂಕೂಟಗಳಿಗೆ ಬಹುಮತ ಬಂದಿದ್ದರೆ, ತಾನು 'ಡ್ರೈವರ್ ಸೀಟ್'ನಲ್ಲಿ ಇರಬಹುದು ಎಂದು ಲೆಕ್ಕ ಹಾಕಿತ್ತು. ಆದರೆ ಅದು ತನ್ನ ಹಿಂದಿನ ಸ್ಥಾನದಿಂದಲೂ ಹಿಂದೆ ಸರಿದಿದೆ.

ಸ್ಲೋವಾಕ್ ಚುನಾವಣೆಯಲ್ಲಿ ಕಮ್ಯುನಿಸ್ಟರಿಗೆ ಮೊದಲ ಬಾರಿ ಜಯ

ಸ್ಲೋವಾಕ್ ಹಿಂದಿನ ಸಮಾಜವಾದಿ ಜೆಕೊಸ್ಲೋವಾಕಿಯ ಗಣರಾಜ್ಯ ಇಬ್ಭಾಗವಾಗಿ ಆದ ದೇಶ. ದೇಸಿ-ಜನಾಂಗೀಯ ಭಾವನೆಗಳನ್ನು ಕೆರಳಿಸಿ ರಾಜಕೀಯದಲ್ಲಿ ಎಡಶಕ್ತಿಗಳಿಗೆ ಕಮ್ಯುನಿಸ್ಟರಿಗೆ ತೀವ್ರ ಹಿನ್ನಡೆಯಾಗಿತ್ತು. ಈವರೆಗೆ ನಡೆದ ಚುನಾವಣೆಗಳಲ್ಲಿ ಸ್ಲೋವಾಕ್ ಕಮ್ಯುನಿಸ್ಟ್ ಪಕ್ಷಕ್ಕೆ ಪಾರ್ಲಿಮೆಂಟಿನಲ್ಲಿ ಯಾವುದೇ ಸ್ಥಾನವಿರಲಿಲ್ಲ. ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ ಸ್ಲೋವಾಕ್ ಕಮ್ಯುನಿಸ್ಟ್ ಪಕ್ಷ 11 ಸೀಟುಗಳನ್ನು ಮೊದಲ ಬಾರಿ ಗಳಿಸಿ ಪಾರ್ಲಿಮೆಂಟು ಪ್ರವೇಶಿಸಿದೆ. ನಾಟೋ ಮತ್ತು ಯುರೋಪಿಯನ್ ಒಕ್ಕೂಟ ಸೇರದಿರುವ ಬಗ್ಗೆ ಮೊದಲಿನಿಂದಲೂ ವಿರೋಧ ವ್ಯಕ್ತಪಡಿಸಿದ್ದ ಕಮ್ಯುನಿಸ್ಟ್ ಪಕ್ಷ ಮುಖ್ಯವಾಗಿ ಅದರಿಂದಾಗಿಯೇ 'ಅಸ್ಪೃಶ್ಯ' ವಾಗಿದೆ. ನಾಟೋ ಮತ್ತು ಯುರೋಪಿಯನ್‌ಒಕ್ಕೂಟದ ಸಾಮ್ರಾಜ್ಯಶಾಹಿ ಸ್ವರೂಪ ಜನರಿಗೆ ಗೊತ್ತಾಗುತ್ತಿದ್ದಂತೆ ಪಕ್ಷದ ಬಗ್ಗೆ 'ಅಸ್ಪೃಶ್ಯತೆ' ಮಾಯವಾಗಿದೆ. ಈ ಪಾರ್ಲಿಮೆಂಟಿನಲ್ಲಿ ಯಾವುದೇ ಪಕ್ಷಕ್ಕೆ ದೊಡ್ಡ ಭಾಗದ ಸೀಟುಗಳು ಬರದೆ, ಹಲವು ಸಣ್ಣ ಪಕ್ಷಗಳು ಇವೆ. ಆಳುವ ರಂಗ ಬಲ-ಪಂಥೀಯ ಪಕ್ಷಗಳ ಕೂಟವಾಗಿದ್ದರೂ, ತೀವ್ರ ರಾಜಕೀಯ ಅರಾಜಕತೆ ಕಾಡಲಿದೆ.

ಇತಿಹಾಸದ ವಿದ್ಯಾರ್ಥಿಗಳಿಗೆ, ಇತಿಹಾಸ ಅಧ್ಯಯನಕ್ಕೆ ಅಗತ್ಯವಾದ ವೈಜ್ಞಾನಿಕ ದೃಷ್ಟಿ ಏನಿರಬೇಕೆಂಬ ಕುರಿತು ಬೆಂಗಳೂರಿನಲ್ಲಿ ವಿಚಾರಸಂಕಿರಣವೊಂದು ನಡೆಯಿತು. ಅಧ್ಯಯನಶೀಲರು ಹೊರಚೆಲ್ಲಿದ ಸತ್ಯ ಸಂಗತಿಗಳ ಸಾರ ಸಂಗ್ರಹ ಇಲ್ಲಿ

ಇತಿಹಾಸ ಅಧ್ಯಯನಕ್ಕೆ ಅಗತ್ಯವಾದ ವೈಜ್ಞಾನಿಕ ದೃಷ್ಟಿ

'ಇತಿಹಾಸದ ಪ್ರಜ್ಞೆ ಇಲ್ಲದವರು ಭವಿಷ್ಯವನ್ನು ರೂಪಿಸಲಾರರು ಎಂಬ ಮಹತ್ತರ ಮಾತೊಂದಿದೆ. ಆದರೆ ಇಂದು ಈ 'ಇತಿಹಾಸ ಪ್ರಜ್ಞೆ' ವರ್ತಮಾನದ ಸಂಕುಚಿತ ರಾಜಕೀಯ ಶಕ್ತಿಗಳ ವಿಧ್ವಂಸಕ ಉದ್ದೇಶ ಗಳಿಗಾಗಿ ದುರ್ಬಳಕೆ ಆಗುತ್ತಿರುವಾಗ 'ಭವಿಷ್ಯ'ದ ಬಗೆಗೆ ಗಂಭೀರ ಆತಂಕ ನಿರ್ಮಾಣವಾಗಿದೆ. ಇತಿಹಾಸದ ಅಧ್ಯಯನದ ದೃಷ್ಟಿ ವೈಜ್ಞಾನಿಕವಾಗಿಲ ದಿದ್ದರೆ ಈ ಅಪಾಯ ಮತ್ತೂ ಭೀಕರವಾಗಲಿದೆ.

ಇತಿಹಾಸ ವಿದ್ಯಾರ್ಥಿಗಳಿಗೆ, ಇತಿಹಾಸ ಅಧ್ಯಯನಕ್ಕೆ ಅಗತ್ಯವಾದ ವೈಜ್ಞಾನಿಕ ದೃಷ್ಟಿ ಏನಿರಬೇಕೆಂಬ ವಿಚಾರವಾಗಿ ಭಾರತ ವಿದ್ಯಾರ್ಥಿ ಫೆಡರೇಷನ್ (SFI) ಬೆಂಗಳೂರು ನಗರದ ಸರ್ಕಾರಿ ಕಾಲೇಜಿನಲ್ಲಿ ವಿಚಾರಸಂಕಿರಣವೊಂದನ್ನು ಸಂಘಟಿಸಿತ್ತು.

ವಿಚಾರಪೂರಿತ 'ಸಂಕಿರಣ'

'ಬ್ರಿಟಿಷ್ ಪೂರ್ವ ಭಾರತ : ಸತ್ಯ-ಮಿಥ್ಯಗಳು' -'ವಸಾಹತು ಪೂರ್ವ-ವಸಾಹತೋತ್ತರ ಭಾರತ : ಕೆಲವು ಟಿಪ್ಪಣಿಗಳು' - ಎಂಬ ಎರಡು ಗೋಷ್ಠಿಗಳಲ್ಲಿ ವಿಷಯ ಮಂಡನೆ ಚರ್ಚೆ ನಡೆಯಿತು. ಮೊದಲ ಗೋಷ್ಠಿಯಲ್ಲಿ ಕಾಂ. ಜಿ.ಎನ್.ನಾಗರಾಜ್, ಎರಡನೇ ಗೋಷ್ಠಿಯಲ್ಲಿ ಹಂಪಿ ವಿಶ್ವವಿದ್ಯಾಲಯ ಇತಿಹಾಸ ವಿಭಾಗದ ಮುಖ್ಯಸ್ಥರಾದ ಡಾ. ತಂಬಂಡ ವಿಜಯ ಪೂಣಚ್ಚ ವಿಷಯ ಮಂಡಿಸಿದರು.

ಜಗತ್ತನ್ನು - ಸಮಾಜವನ್ನು ಸಮಗ್ರವಾಗಿ ನೋಡಬೇಕು. ಇತಿಹಾಸವನ್ನು ಸಮಗ್ರವಾಗಿ ಅಧ್ಯಯನ ಮಾಡಬೇಕು. ಇತಿಹಾಸ ಎಂದರೆ ಪರಸ್ಪರ ಹೆಣೆದುಕೊಂಡ ಭೌಗೋಳಿಕ, ಜೈವಿಕ, ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಅಂಶಗಳ ವೈಜ್ಞಾನಿಕ - ಚಾರಿತ್ರಿಕ ಅಧ್ಯಯನ ಎಂಬುದನ್ನು ಪ್ರತಿಪಾದಿಸಿದರು.

ಮೊದಲ ಗೋಷ್ಠಿಯಲ್ಲಿ ಭಾರತದಲ್ಲಿ

- ಆರ್ಯರ ಮೂಲ
- ಸುವರ್ಣ ಯುಗಗಳ ಪರಿಕಲ್ಪನೆ ಮತ್ತು ವಾಸ್ತವ

ಈ ಪ್ರಮುಖ ಪ್ರಶ್ನೆಗಳ ಬಗೆಗೆ ಚರ್ಚಿಸಲಾಯಿತು.

ಎರಡನೇ ಗೋಷ್ಠಿಯಲ್ಲಿ

- 'ಆಧುನಿಕ ಭಾರತ'ದಲ್ಲಿ ಇತಿಹಾಸ ನಿರೂಪಣೆ, ದೃಷ್ಟಿಕೋನ ವಿಶ್ಲೇಷಣೆ ಬ್ರಿಟಿಷರ ಶೋಷಣೆಯ ಸ್ವರೂಪ, ಜಾತಿ-ಧರ್ಮಗಳು ಹಾಗೂ ಇತಿಹಾಸ ನಿರೂಪಣೆಯ ಪ್ರಶ್ನೆ.
- ಸ್ವಾತಂತ್ರ್ಯ ಚಳುವಳಿಯ ವಿಶ್ಲೇಷಣೆ ಮುಂತಾದ ವಿಚಾರಗಳ ಕುರಿತು ಚರ್ಚಿಸಲಾಯಿತು.

ಮಂಡಿಸಲಾದ ವಿಚಾರಗಳ ಪ್ರಮುಖ ಅಂಶಗಳು ಹೀಗಿವೆ -

ಆರ್ಯರ ಮೂಲ ಮಧ್ಯ ಏಷ್ಯಾ

- ಆರ್ಯರು ಭಾರತಕ್ಕೆ ಮಧ್ಯ ಏಷ್ಯಾದಿಂದ ವಲಸೆ ಬಂದರು. ಆರ್ಯರು ಭಾರತದ ಮೂಲ ನಿವಾಸಿಗಳಲ್ಲ -ಇಲ್ಲಿ ಮೂಲ ನಿವಾಸಿಗಳೆಂಬುವರು ಯಾರೂ ಇಲ್ಲ!

- ಹರಪ್ಪ ಮೆಹೆಂಜೊದಾರೋ ಸಂಸ್ಕೃತಿಯ ಜನರಿಗೆ ಕೃಷಿಯ ಜ್ಞಾನ ತಿಳಿದಿತ್ತು. ಈ ಸಂಸ್ಕೃತಿಯಲ್ಲಿ ಕಂಡುಬರುವ ದನದ (ಗೂಳಿ) ತಳಿಗೂ, ಆರ್ಯರ ಆಗಮನದಿಂದಾಗಿ ಭಾರತ ಉಪಖಂಡಕ್ಕೆ ಬಂದ ತಳಿಗಳಿಗೂ ಸಾಕಷ್ಟು ವ್ಯತ್ಯಾಸಗಳಿವೆ. ಆರ್ಯರು ಪಶುಪಾಲಕರಾಗಿದ್ದರು. ಕೃಷಿ ಉದ್ದೇಶಕ್ಕೆ ಬಳಸಲ್ಪಡುವ 'ಹಳ್ಳಿ ಕಾರ್' ಜಾತಿ ಎಂದು ಕರೆಯಲಾಗುವ ತಳಿ ದ್ರಾವಿಡ ತಳಿಯಾದರೆ ಆರ್ಯರ ತಳಿ ನಂತರ ಅಭಿವೃದ್ಧಿಗೊಂಡ ತಳಿಯಾಗಿದೆ. ಈ ತಳಿಗಳ ಆಧಾರದ ಮೇಲೆ ಆರ್ಯರು ಎಲ್ಲಿಂದ ಬಂದರು ಮೊದಲು ಎಲ್ಲಿಗೆ ಬಂದರು, ಎಲ್ಲೆಲ್ಲಿಗೆಲ್ಲಾ ಹರಡಿದರು ಎಂಬ ವಿಚಾರವನ್ನು ಈ ತಳಿ ವಿಜ್ಞಾನದ ಮೂಲಕ ತಿಳಿಯಬಹುದು. ಆರ್ಯರು ದನಗಳನ್ನು ಆರಂಭದಲ್ಲಿ ಬೆಳೆಸಿದ್ದು ಹಾಲಿಗಾಗಿ. ಕೃಷಿಗಾಗಿ ಅಲ್ಲ. ಆಗವರು ಪಶುಪಾಲಕರಾಗಿದ್ದರು.

ಹರಪ್ಪ-ಮೆಹಂಜದಾರೋ ಸಂಸ್ಕೃತಿ ನಗರಗಳ ರೀತಿಯ ಸಂಸ್ಕೃತಿ. ಸುಟ್ಟ ಇಟ್ಟಿಗೆಗಳ ಉಪಯೋಗ ಅವರಿಗೆ ಗೊತ್ತಿತ್ತು. ಆರ್ಯರಿಗೆ ಸುಟ್ಟ ಇಟ್ಟಿಗೆಗಳ ಪರಿಕಲ್ಪನೆ ಇರಲಿಲ್ಲ. ಅವರು ಪಶುಪಾಲಕರಾಗಿ ಒಂದೆಡೆಯಿಂದ ಮತ್ತೊಂದೆಡೆಗೆ ಹೋಗುತ್ತಿದ್ದರು.

ಭಾರತದಲ್ಲಿ ಕುದುರೆಗಳಿರಲಿಲ್ಲ

ಕುದುರೆಯ ಉಪಯೋಗ ಆರ್ಯರಲ್ಲಿತ್ತು. ಕುದುರೆಯ ರಥವನ್ನು ಅವರು ಬಳಸುತ್ತಿದ್ದರು. ಆರ್ಯರು ಅಶ್ವಮೇಧ ಯಾಗಗಳನ್ನು ನಡೆಸುತ್ತಿದ್ದರು. ಕುದುರೆಗಳನ್ನು ಬಲಿಕೊಟ್ಟು ಮಾಂಸವನ್ನು ಭಕ್ಷಿಸಲಾಗುತ್ತಿತ್ತು. ದನಗಳಿಗೂ ಮುಂಚೆ ಆರ್ಯರು ಕುದುರೆಗಳನ್ನು ಅವಲಂಬಿಸಿ ದ್ದರು.

ಆರ್. ರಾಮಕೃಷ್ಣ

ಕುದುರೆಗಳು ಭೌಗೋಳಿಕವಾಗಿ ಎಲ್ಲಿ ವಿಕಾಸವಾದವು ಎಂಬುದನ್ನು ಪರಿಶೀಲಿಸಿದರೆ ಆರ್ಯರ ಮೂಲ ಸ್ಪಷ್ಟವಾಗುತ್ತದೆ. ಹಿಂದೆ ಭಾರತ ಉಪಖಂಡದ ಭಾಗದಲ್ಲಿ ಕುದುರೆಗಳಿರಲಿಲ್ಲ.

ಋಗ್ವೇದಗಳ 'ಋಕ್'ಗಳಲ್ಲಿನ ಸಾಮಾಜಿಕ ಚಿತ್ರಗಳಿಗೂ - ಇರಾನ್‌ನ 'ಜನ ಅವೆಸ್ತಾ' ಗ್ರಂಥದ ಉಲ್ಲೇಖಗಳಿಗೂ ಸಾಕಷ್ಟು ಸಾಮ್ಯತೆಗಳಿವೆ. ದ್ರಾವಿಡರೂ ಸಹ ಭಾರತದ ಮೂಲ ನಿವಾಸಿಗಳಲ್ಲ. ಅವರೂ ಸಹ ಆಫ್ರಿಕನ್ - ಮೆಡಿಟೇರಿಯನ್ ಮೂಲದವರು.

ವಲಸೆ ಪ್ರಶ್ನೆ - ಕೋಮುವಾದಿ ವರಸೆ

ಆರ್ಯರು ಭಾರತದ ಮೂಲ ನಿವಾಸಿಗಳು- ವಲಸೆ ಬಂದವರಲ್ಲ ಎಂದು ಸಾಧಿಸುತ್ತಿರುವುದರ ಹಿಂದೆ, ಮೊಘಲರು ಹಾಗೂ ಬ್ರಿಟಿಷರು ವಿದೇಶಿಯರು, ಆರ್ಯರು ಮಾತ್ರ 'ಸ್ವದೇಶಿ' ಎಂದು ಸಾಧಿಸುವ ದುರುದ್ದೇಶ ಇದೆ.

ಇತಿಹಾಸದಲ್ಲೆಂದೂ ಸುವರ್ಣ ಯುಗಗಳಿರಲಿಲ್ಲ!!

ಇತಿಹಾಸದಲ್ಲಿ ಕೆಲವು ಕಾಲವನ್ನು ಸುವರ್ಣಯುಗಗಳು ಎಂದು ಕರೆಯಲಾಗುತ್ತದೆ. ವಾಸ್ತವಿಕವಾಗಿ ಇತಿಹಾಸದಲ್ಲಿ ಎಂದೂ ಸುವರ್ಣಯುಗಗಳು ಇರಲಿಲ್ಲ. ಸಮಾಜದ ಶೇ 50 ರಷ್ಟಿದ್ದ ಮಹಿಳೆಯರನ್ನು ಹಾಗೂ ಬಹುಸಂಖ್ಯಾತ ಶೂದ್ರ-ಅಸ್ಪೃಶ್ಯರನ್ನು (ದುಡಿಯುವ



ಜನ) ಶೈಕ್ಷಣಿಕ-ಸಾಮಾಜಿಕ-ಆರ್ಥಿಕ-ರಾಜಕೀಯ ಹಕ್ಕುಗಳಿಂದ ವಂಚಿಸಿದ್ದ, ಹಕ್ಕುಗಳನ್ನು ಹತ್ತಿಕ್ಕಿದ್ದ, ಮಹಿಳೆಯರಿಗೆ ಅಸ್ಪೃಶ್ಯರಿಗೆ ಆಸ್ತಿ ಹೊಂದಿರುವ ಹಕ್ಕನ್ನೇ ನಿರಾಕರಿಸಿದ್ದ ಅಸಮಾನ ಶ್ರೇಣೀಕೃತ ಸಮಾಜದಲ್ಲಿ ಸುವರ್ಣಯುಗಗಳು ಹೇಗೆ ಬಂದವು? ಯಾರಿಗೆ ಸುವರ್ಣ ಯುಗಗಳು? ಹೇಗೆ ಸುವರ್ಣ ಯುಗಗಳು ಎಂದು ಜಿ.ಎನ್.ನಾಗರಾಜ್ ಪ್ರಶ್ನಿಸಿದರು.

ಈ ಮರೆ ಮಾಚುವಿಕೆ ಏಕೆ? ಡಾ. ತಂಬಂಡ ವಿಜಯ ಪೂಣಚ್ಚ ಪ್ರಶ್ನೆ

ಆಧುನಿಕ ಭಾರತದ ಇತಿಹಾಸದಲ್ಲಿ 'ಗಾಂಧಿ' ಬರುತ್ತಾರೆ. 'ನೆಹರೂ' ಇದ್ದಾರೆ. ನೇತಾಜಿಯವರ ಬಗೆಗೆ 'ಕೆಲವು' ಮಾತುಗಳಿವೆ. ಆದರೆ ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದ ರೈತ ಚಳುವಳಿ-ಕಾರ್ಮಿಕ ಹೋರಾಟಗಳ ಪ್ರಸ್ತಾಪವೇ ಏಕಿಲ್ಲ? ಕಮ್ಯುನಿಸ್ಟರ ನೇತೃತ್ವದ ತೀವ್ರ ಹೋರಾಟಗಳ ಬಗೆಗೆ ಚರಿತ್ರೆ ಏನನ್ನು ಹೇಳುತ್ತಿಲ್ಲ ಏಕೆ? ಚರಿತ್ರಾರ್ಹ ತೆಲಂಗಾಣ ಹೋರಾಟ ಬಗೆಗೆ ಪ್ರಸ್ತಾಪವೂ ಇಲ್ಲ ಏಕೆ?

ನಾವೀಗ ಕಲಿಯುತ್ತಿರುವ ಇತಿಹಾಸದಲ್ಲಿ ಪ್ರಶ್ನಾರ್ಹವಾದದ್ದು ಬಹಳಷ್ಟು ಇದೆ ಎಂದ ಡಾ. ಪೂಣಚ್ಚ ಆಧುನಿಕ ಭಾರತ ಚರಿತ್ರೆಗೆ ಸಂಬಂಧಿಸಿದ ತಮ್ಮ ಪ್ರಮುಖ ವಿಶ್ಲೇಷಣೆ ವಿಚಾರಗಳನ್ನು ಹೀಗೆ ಮುಂದಿಟ್ಟರು.

ಭಾರತೀಯರಲ್ಲಿ 'ಕೀಳರಿಮೆ' ಗುಲಾಮಿತನ ಬಿತ್ತುವ ಬ್ರಿಟಿಷರ ಇತಿಹಾಸ

ಭಾರತದಲ್ಲಿ ತಮ್ಮ ಆಳ್ವಿಕೆಯನ್ನು ಬಲಪಡಿಸಿಕೊಳ್ಳಬೇಕಿದ್ದ ಬ್ರಿಟಿಷರು, ಕೇವಲ ಬಲಪ್ರಯೋಗದ ಮೇಲೆ ಬಹಳ ದಿನಗಳ ಕಾಲ ಅದನ್ನು ಸಾಧಿಸಲು ಸಾಧ್ಯವಿಲ್ಲ ಎಂಬುದನ್ನು ಕಂಡುಕೊಂಡಿದ್ದರು. ಹೀಗಾಗಿ ತಮ್ಮ ಉದ್ದೇಶಕ್ಕೆ ಪೂರಕವಾಗಿ, ಆಳಿಸಿಕೊಳ್ಳುವ ವರ್ಗಗಳನ್ನು ನಂಬಿಸಿಕೊಳ್ಳುವ ಸಿದ್ಧಾಂತವನ್ನು ರೂಪಿಸಿ ಸಾಮೂಹಿಕ Brain Wash ನಡೆಸಿದರು.

- ಈ ದೇಶದ ಜನಕ್ಕೆ ಆಧುನಿಕತೆ ಇಲ್ಲ. ಭಾಷೆ ಇಲ್ಲ. ವಿಜ್ಞಾನ, ತಂತ್ರಜ್ಞಾನ, ಆಡಳಿತ, ತಿಳುವಳಿಕೆ ಇಲ್ಲ ಎಂದು ಅಭಿಪ್ರಾಯ ರೂಪಿಸಲಾಯಿತು.

- ಇತಿಹಾಸದಲ್ಲಿ ಬ್ರಿಟಿಷರೊಂದಿಗೆ ರಾಜಿ ಮಾಡಿಕೊಳ್ಳದ ರಾಜ ಚಿಕವೀರ ರಾಜೇಂದ್ರ 'ದುಷ್ಟ ರಾಜ'ನಾದ. ಬ್ರಿಟಿಷರೊಂದಿಗೆ ರಾಜಿ ಮಾಡಿಕೊಂಡ ಮೈಸೂರು ರಾಜರಿಗೆ 'ಸಕಲ ಸದ್ಗುಣ'ಗಳು ಲಭಿಸಿದವು. ಇದೇ ರೀತಿ ಪ್ರಾಚೀನ ಭಾರತ 'ಹಿಂದೂಗಳ ಕಾಲ'ವಾಯಿತು. ಮಧ್ಯಕಾಲೀನ ಭಾರತ 'ಮುಸ್ಲಿಂ ಯುಗವಾಯಿತು. ಆದರೆ ನಂತರದ ಕಾಲ 'ಕ್ರಿಶ್ಚಿಯನ್ನರ ಕಾಲ'ವಾಗದೇ 'ಆಧುನಿಕ ಯುಗ'ವಾಯಿತು.

ಕೋಮುವಾದದ ಚಾರಿತ್ರಿಕ ಬೇರುಗಳು

ಇದಕ್ಕೆ ಪ್ರತಿಯಾಗಿ ರೂಪುಗೊಂಡ ರಾಷ್ಟ್ರೀಯ ಚಳುವಳಿ ಈ ವಿಚಾರಗಳಿಗೆ ವಿರುದ್ಧ ದಿಕ್ಕಿನತ್ತ ಚಲಿಸಿತು. ಬ್ರಿಟಿಷರು ಭಾರತದಲ್ಲಿ ಏನೇನು ಇರಲಿಲ್ಲ ಎಂದರೋ ರಾಷ್ಟ್ರೀಯ ಚಳುವಳಿಯು ಅವೆಲ್ಲವೂ ಇದೆ ಎಂದಿತು. ಇಂಥಹ ಇತಿಹಾಸಕಾರರ ದೃಷ್ಟಿಯಿಂದಾಗಿ ಪ್ರಾಚೀನ ಭಾರತ 'ಸುವರ್ಣಯುಗ'ವಾಯಿತು. ಬ್ರಿಟಿಷರು ಇಲ್ಲ ಎಂದ ಎಲ್ಲವೂ ಹಿಂದೆಯೇ ಇತ್ತು ಎಂದು ಸಾರಲಾಯಿತು. ಮತ್ತು ಪ್ರಸ್ತುತದ ದುಃಸ್ಥಿತಿಗಳಿಗೆ, ಅವನತಿಗೆ ಮಧ್ಯಕಾಲದ ಮುಸ್ಲಿಂ ದೊರೆಗಳ ಆಡಳಿತದಲ್ಲಿ 'ಕಾರಣಗಳನ್ನು ಕಂಡುಕೊಳ್ಳಲಾಯಿತು'. ಹೀಗಾಗಿ ಮಧ್ಯಕಾಲೀನ ಭಾರತವನ್ನು ಮುಸ್ಲಿಂ ಆಡಳಿತದ ಕತ್ತಲೆಯ ಯುಗವೆಂದು ಕರೆಯಲಾಯಿತು.

ಪ್ರತಿಭಟನೆಗಳ ವರ್ಗ ಸ್ವರೂಪ

ಕಾಂಗ್ರೆಸ್ ನೇತೃತ್ವದ ಚಳುವಳಿ ವ್ಯಾಪಕವಾಗಿ ಜನಸಾಮಾನ್ಯರನ್ನು ತಲುಪಿ, ಸ್ವಾತಂತ್ರ್ಯ ಚಳುವಳಿಯ ನಾಯಕತ್ವವನ್ನು ಕಾಂಗ್ರೆಸ್ ವಹಿಸಿತು. ಆದರೆ ಕಾಂಗ್ರೆಸ್ ಒಳಗೇ ದೊಡ್ಡ ಪ್ರಮಾಣದಲ್ಲಿ ಭಾರಿ ಜಮೀನ್ದಾರರಿದ್ದರು. ಕಾಂಗ್ರೆಸ್ ಬಂಡವಾಳದಾರರನ್ನು ಅವಲಂಬಿಸಿತ್ತು. ಕಾಂಗ್ರೆಸ ಒಳಗೆ ದಲಿತರು, ಶೋಷಿತರ ಪ್ರಾತಿನಿಧ್ಯ ನಗಣ್ಯವಾಗಿತ್ತು. ಅಂಬೇಡ್ಕರ್, ಮಹಮದ್ ಆಲಿ ಜಿನ್ನಾ ಇದನ್ನು ಪ್ರತಿಭಟಿಸಿದರು. ಮೇಲ್ಜಾತಿ-ಮೇಲ್ವರ್ಗದ ನೇತೃತ್ವದಲ್ಲಿ ವ್ಯವಸ್ಥೆಯನ್ನು ಕಲಕುವ ಚಳುವಳಿ ಬರಲಿಲ್ಲ. ಶಿವಾಜಿ-ಗಣೇಶೋತ್ಸವಗಳು ನಡೆದವು. ಬ್ರಿಟಿಷರ ವಿರುದ್ಧ 'ಶಾಂತಿ-ಅಹಿಂಸೆಯ' 'ಸಹಯೋಗ'ದ (collaboration) ಚಳುವಳಿಗಳು ನಡೆಯಿತು.

10 ಲಕ್ಷ ಎಕರೆ ಜಮೀನನ್ನು ಪಾಳೇಗಾರ, ಪಟ್ಟಭದ್ರರಿಂದ ವಶಪಡಿಸಿಕೊಂಡ ತೆಲಂಗಾಣ ಧೀರ ರೈತ ಚಳುವಳಿ, ಅದು ಅಸಮಾನ್ಯವಾದ ಚಳುವಳಿ. ಆದರೆ ಆ ಚಳುವಳಿ ಬಗೆಗೆ ಇತಿಹಾಸದಲ್ಲಿ ಏನನ್ನೂ ಕಲಿಸಲಾಗುತ್ತಿಲ್ಲ. 3,000 ಅಂತರ ಜಾತಿಯ ವಿವಾಹವನ್ನು ನಡೆಸಿದ ಪೆರಿಯಾರ್ ನೇತೃತ್ವದ ಆತ್ಮಗೌರವ ಚಳುವಳಿಗೆ ನಮ್ಮ ಇತಿಹಾಸದಲ್ಲಿ ಜಾಗ ಇಲ್ಲ ಎಂದು ಅವರು ಇತಿಹಾಸ ನಿರೂಪಣೆಯ ವಂಚಕ ಸ್ವರೂಪವನ್ನು ಬಯಲಿಗೆಳೆದರು.

1947 ಕ್ಕೆ ಮುಂಚಿನದು ಮಾತ್ರ ಇತಿಹಾಸವಲ್ಲ

ಬ್ರಿಟಿಷರ ವಿರುದ್ಧ ಎಲ್ಲರೂ ಹೋರಾಡಿದರು. ನಂತರ ಏನಾಯಿತು? ಬ್ರಿಟಿಷರ ಬದಲಿಗೆ ಭಾರತ ಈ ಮಿತ್ರರು ಬಂದರು. ಲಂಡನ್ ಬದಲಿಗೆ ದೆಹಲಿಯಿಂದ ಆಡಳಿತ. ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ದೆಹಲಿಯಿಂದಲೇ ಆಡಳಿತ. 'ಹಿಂದಿ' ಒಂದೇ ಭಾಷೆ. ಉಳಿದ ರಾಷ್ಟ್ರ ಭಾಷೆಗಳಿಗೆ ಅಗೌರವ, ಸ್ಥಾನಮಾನಗಳಿಲ್ಲ. 80 ರ ದಶಕದಲ್ಲಿ ಇದರ ವಿರುದ್ಧ ತೀವ್ರ ಚಳುವಳಿ ಮತ್ತು ವಿರೋಧ ಕಂಡುಬಂತು.

ಒಕ್ಕೂಟ ಸ್ವರೂಪಕ್ಕೆ ಧಕ್ಕೆ

'ಹಿಂದೂ-ಹಿಂದಿ' ಘೋಷಣೆ, ಕೇಂದ್ರದ ಪ್ರಭುತ್ವ ಬಲಗೊಳ್ಳುತ್ತಿದೆ. ಒಕ್ಕೂಟ ಸ್ವರೂಪಕ್ಕೆ ಧಕ್ಕೆ ಬಂದಿದೆ. ಪರಿಸರ ದಲಿತರ ಸಮಸ್ಯೆಗಳು ಬಿಗಡಾಯಿಸುತ್ತಿವೆ ಎಂದು ಪೂಣಚ್ಚ ಸಮಕಾಲೀನ ಹಂತದ ರಾಜಕೀಯವನ್ನು ವಿಶ್ಲೇಷಿಸಿದರು.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH